# ಕರ್ನಾಟಕ ಲೋಚನ

ಸಂಪುಟ ೯ | ಡಿಸೆಂಬರ್ ೧೯೯೬ | ಸಂಚಿಕೆ ೨

9-2

-೨೮-

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು-೫೬೦ ೦೧೯

# 'ಕರ್ನಾಟಕ ಲೋಚನ'



## ಲೇಖನಗಳು-ಟಿಪ್ಪಣಿಗಳು

ಸಂಶೋಧನಾತ್ಮಕ, ಪಾಂಡಿತ್ಯ–ವಿದ್ವತ್ ಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು–ಇವುಗಳ ಮೇಲಣ ವಿಮರ್ಶೆಗಳು ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ–ಟಿಪ್ಪಣಿಗಳು– ಇವುಗಳಿಗೆ 'ಕರ್ನಾಟಕ ಲೋಚನ' ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

## ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. ಲೋಚನದ ಗಾತ್ರ ಪರಿಮಿತವಾದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ, ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibiliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ವಿನಂತಿ.

# ಕರ್ನಾಟಕ ಲೋಚನ

## ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಎಂ. ವಿ. ಸೀತಾರಾಮಯ್ಯರಸ್ತೆ,
ಮಾಸ್ತಿನಗರ, (ಗವೀಪುರ ವಿಸ್ತರಣ), ಬೆಂಗಳೂರು–560 019.

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ

ಸಹಾಯಕ ಸಂಪಾದಕರು : ಎನ್. ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ ೯ ಜೂನ್ ೧೯೯೬ ಸಂಚಿಕೆ ೨

## ಪರಿವಿಡಿ

# Karnataka Lochana

Half-Yearly Journal, Published by B. M. Sri Smaraka Prathisthana Masthi Nagar,
(Gavipuram Extension) Bangalore-560 019



Vol. IX December 1996 No. 2

CONTENTS

# ಸಮಸ್ಯಾಪೂರಣ

[ವಿದ್ವತ್ಪತ್ರಿಕೆಯಾಗಿರುವ ಈ 'ಕರ್ನಾಟಕ ಲೋಚನ' ಸಂಪುಟ ೬, ಸಂಚಿಕೆ ೧, (ಜೂನ್ ೧೯೯೩) 'ಮೊದಲ್ಗೊಂಡು ಸಮಸ್ಯಾಪೂರಣ' ಎಂಬೊಂದು ಅಂಕಣವನ್ನು ಪ್ರಾರಂಭಿಸಲಾಗಿದೆ. ಇದು ಕನ್ನಡಕ್ಕೆ ಅತಿಶಯದ ಲಕ್ಷಣವೆನಿಸುವ ಛಂದೋಬದ್ಧ ಪದ್ಯ ರಚನೆಗೆ ಪ್ರೋತ್ಸಾಹ ನೀಡುವ ಉದ್ದೇಶವುಳ್ಳದ್ದು. ಪ್ರತಿ ಸಂಚಿಕೆಯಲ್ಲಿಯೂ ಅದರ ಮುಂದಿನ ಸಂಚಿಕೆಗಾಗಿ ಸಮಸ್ಯಾ ಪದ್ಯ ವಾಕ್ಯವನ್ನು ಕೊಡಲಾಗುತ್ತಿದೆ. ಒಬ್ಬೊಬ್ಬರಿಂದ ಒಂದು ಪದ್ಯವನ್ನು ಮಾತ್ರ ಸ್ವೀಕರಿಸಲಾಗುತ್ತಿದೆ. ಈ ಸಂಚಿಕೆಗಾಗಿ ಒಂದು ಭಾಮಿನಿಷಟ್ಪದಿಯ ದೀರ್ಘಪಾದವನ್ನು ಕೊಡಲಾಗಿದೆ. ಅದು ಹೀಗಿದೆ—

"ತರಳೆಯರು ತುಂಬಿದರು ಮರಿದುಂಬಿಗಳ ಡೊಂಬಿನಲಿ"

—ಕುಮಾರವ್ಯಾಸಭಾರತ

ಪ್ರಕಟನೆಗಾಗಿ ಬಂದ ಸಮಸ್ಯಾಪೂರ್ತಿ ಪದ್ಯಗಳಿವು—

ಅಂತು ಛಂದೋಬದ್ಧ ಕವಿತೆಯ
ವಿರಚಿಸಲು ಕರ್ನಾಟ ಲೋಚನ
ಕಿರುವುದೊಂದಂಕಣ ಸಮಸ್ಯಾಪೂರಣಾಖ್ಯೆಯಲಿ||
ಬರೆದಿಹರು ಭಾಮಿನಿಯ ಷಟ್ಪದಿ
ಚರಣವದಕಾರನೆಯದಾಗಿರೆ
ತರಳೆಯರು ತುಂಬಿಸರು ಮರಿದುಂಬಿಗಳ ಡೊಂಬಿನಲಿ

—ಟಿ. ಕೇಶವ ಭಟ್ಟ

ನರ ವಸಂತನ ಬರವಿಗೆಂದೆನೆ
ಮರಮರದ ಚಿಗುರೊಡೆದು ತುಂಬಿರೆ
ಬಿರಿಮುಗುಳ ಅರೆಮುಗುಳ ಪೂಗೊಂಚಲ್ಗಳಿದಾಡೆ
ಅರಗಿಳಿಯು ಕೋಗಿಲೆಯು ನಿಡುಸರ
ಪರಿದು ತುಂಬಲು ವನದ ಚೆಲುವಿಂ
ತರಳೆಯರು ತುಂಬಿದರು ಮರಿದುಂಬಿಗಳ ಡೊಂಬಿನಲಿ

—ಸಮೇತನಹಳ್ಳಿ ರಾಮರಾಯ

ಸರಸಿಯೊಳು ಜಲ ಕೇಳಿಗಿಳಿದಿಹ
ಹರಹಿದಗ್ಗಳ ಕುರುಳ ರಾಶಿಯ
ತರುಣಿಯರನೀಕ್ಷಿಸುತ ಗಗನದಿ ವಿಹರಿಸುತ್ತಿರ್ದ

ಸುರವಿತತಿ ನಸುನಗುತ ತೇಲುವ
ಕುರುಳ ಹರವಿಗೆ ನುಡಿದರಾಹಾ
ತರಳೆಯರು ತುಂಬಿದರು ಮರಿದುಂಬಿಗಳ ಡೊಂಬಿನಲಿ

—ವಿದ್ವಾನ್ ತಲೆಂಗಳ ರಾಮಕೃಷ್ಣ ಭಟ್ಟ.

ವರನ ದಿಬ್ಬಣ ಬಂತು ಮಂಗಲೆ
ಯರು ಕಲಶ ಕನ್ನಡಿವಿಡಿದು ನಿಂ
ದರಿಸಿನದ ನೀರೊಡ್ಡೆ ನಾಂದಿದನವನು ಕಣ್ಗಳನು
ಪರಮ ಸ್ವಸ್ತಿಯ ಮಂತ್ರ ಘೋಷದೆ
ಕರೆತರಲು ಮಂಟಪಕೆ ಬಳಿಯಿಂ
ತರಳೆಯರು ತುಂಬಿದರು ಮರಿದುಂಬಿಗಳ ಡೊಂಬಿನಲಿ

—ಟಿ. ಕೃಷ್ಣಭಟ್ಟ, ವಿದ್ವಾನ್

ಉರುಹೊಡೆದು ಓದೋದಿ ಸಜ್ಜಾ
ಗಿರುವ ಹುಡುಗರು ಪೂರ್ವಸಿದ್ಧತೆ
ಯಿರಲಿಯೆನ್ನುವ ಮನೆಯ ಪಾಠಕು ನುಗ್ಗಿ ಬೆವರಿಳಿಸಿ
ವರುಷವೆಲ್ಲವು ಓಧಿ ಪೇಪರು
ತರಿಸಿ ನೋಡಿರೆ ರ್‍ಯಾಂಕುಲಿಸ್ಟಲಿ
ತರಳೆಯರು ತುಂಬಿದರು ಮರಿದುಂಬಿಗಳ ಡೊಂಬಿನಲಿ

—ಅ. ರಾ. ಮಿತ್ರ

ಪರಿಮಳಿಪ ಮಂಗ್ಳೂರ ಮಲ್ಲಿಗೆ
ಯರಳ ಚೆಂಡುಗಳೊಡನೆ ಸಾರಲು
ಬರುತ ಹೂವಾಡಿಗನು ಬೀದಿಯೊಳಂದು ನಿಂದಿರಲು
ನೆರೆಹೊರೆಯ ಮನೆಮನೆಗಳಲಿ ಡಂ
ಗುರ ಮೆರೆಯೆ ಕೊಳ್ಳಲಿಕೆ ತವಕಿಸಿ
ತರಳೆಯರು ತುಂಬಿದರು ಮರಿದುಂಬಿಗಳ ಡೊಂಬಿನಲಿ

ಕೆ. ಪಿ. ರಾಜಗೋಪಾಲ್, ಎಂ. ಎ.

ಲೋಚನದ ಮುಂದಿನ ಸಂಚಿಕೆಗೆ ಸಮಸ್ಯೆ—

'ನಿನಗೆನಸುಂ ಕರುಣಮಿಲ್ಲ ಮರವಾನೆಸನ್ನೆ'

—ಕವಿರಾಜಮಾರ್ಗ

# ಬಂಧುವರ್ಮ : ಕವಿ ಕಾಲ ವಿಚಾರ

ಬಿ. ಎಸ್. ಸಣ್ಣಯ್ಯ

ಬಂಧುವರ್ಮ ರಚಿಸಿರುವ ಕೃತಿಗಳೆಂದರೆ ೨೨ನೆಯ ತೀರ್ಥಂಕರನಾದ ನೇಮಿನಾಥ ಚರಿತೆಯನ್ನೊಳಗೊಂಡ ಹರಿವಂಶಾಭ್ಯುದಯ ; ಜೈನ ಸಿದ್ಧಾಂತದ ಮೂಲತತ್ತ್ವ ಹನ್ನೆರಡು ಅನುಪ್ರೇಕ್ಷೆಗಳ ನಿರೂಪಣೆಯನ್ನೊಳಗೊಂಡ ಜೀವಸಂಬೋಧನೆ ; ಶ್ರಾವಕಿಯರಿಗೆ ಉಪದೇಶರೂಪದಲ್ಲಿರುವ ಸತಿಧರ್ಮಸಾರ. ಮೊದಲೆರಡು ಚಂಪೂ ಕಾವ್ಯಗಳಾಗಿದ್ದು, ಮೂರನೆಯದು ಕಂದಪದ್ಯಗಳಿಂದ ಕೂಡಿದೆ.

ಬಂಧುವರ್ಮ ತನ್ನ ಪೂರ್ವದ ಅಥವಾ ಸಮಕಾಲೀನ ಯಾವ ಕವಿಗಳನ್ನೂ ವಿದ್ವಾಂಸರನ್ನೂ ಗಣಿಸದೆ ತನ್ನ ಕಾವ್ಯರಚನೆ ಮಾಡಿದುದರಿಂದಲೋ ಏನೊ ಈತನ ಕಾವ್ಯಗಳು ಅಷ್ಟಾಗಿ ಪ್ರಚಾರ ಪಡೆಯಲಿಲ್ಲವೆಂದು ತೋರುತ್ತದೆ. ಒಟ್ಟು ಸಾಹಿತ್ಯ ಚರಿತ್ರೆಯನ್ನು ಪರಿವೀಕ್ಷಿಸಿದಾಗ ಈತನು ಒಬ್ಬಂಟಿಗನಾಗಿ ನಿಲ್ಲುತ್ತಾನೆ. ಆದರೆ ಈತನ ಕೃತಿಗಳನ್ನು ಗಮನಿಸಿದಾಗ ಒಬ್ಬ ಪ್ರತಿಭಾವಂತ ಕವಿಯಾಗಿ ಕಂಗೊಳಿಸುತ್ತಾನೆ. ಹರಿವಂಶಾಭ್ಯುದಯ ಮತ್ತು ಸತಿಧರ್ಮಸಾರಗಳ ಒಂದೊಂದೇ ಪ್ರತಿಗಳೂ ; ಜೀವ ಸಂಬೋಧನೆಯ ಕೆಲವು ಪ್ರತಿಗಳೂ ನಮಗೆ ದೊರೆತಿವೆ. ಕವಿಯು ತನ್ನ ಕಾವ್ಯಗಳಲ್ಲಿ ಪೂರ್ವದ ಕವಿಗಳಾರನ್ನೂ ನೆನೆಯುವುದಿಲ್ಲ ; ಅಲ್ಲದೆ ತನ್ನ ಕೃತಿಗಳಲ್ಲೆಲ್ಲಿಯೂ "ನುತ ವೈಶ್ಯೋತ್ತಮ ಬಂಧುವರ್ಮ" ಎಂಬ ಮಾತನ್ನು ಬಿಟ್ಟರೆ ಉಳಿದಂತೆ ಸ್ವವಿಷಯವನ್ನಾಗಲಿ ಕಾಲವನ್ನಾಗಲಿ ಸೂಚಿಸುವುದಿಲ್ಲ. ಆದುದರಿಂದ ಈತನ ಕಾಲನಿರ್ಣಯ ಇತರ ಆಂತರಿಕ ಬಾಹ್ಯ ಆಧಾರಗಳ ಮೇಲೆಯೇ ಆಗಬೇಕಾಗಿದೆ. ಈತನ ಕಾವ್ಯಗಳ ಹಿರಿಮೆಯನ್ನು ಗುರುತಿಸಿದ ಮುಂದಣ ಕೆಲವು ಕವಿಗಳು ಈತನನ್ನು ಸ್ತುತಿಸಿದ್ದಾರೆ.

೧೨೩೫ರಲ್ಲಿದ್ದ ಕಮಲಭವನು ತನ್ನ 'ಶಾಂತೀಶ್ವರ ಪುರಾಣ'ದಲ್ಲಿ ಬಂಧುವರ್ಮನನ್ನು ಸ್ತುತಿಸುವುದರಿಂದ ಈತನಿಗಿಂತ ಪೂರ್ವದಲ್ಲಿ ಬಂಧುವರ್ಮನಿದ್ದಿರಬೇಕೆಂದೂ, ೧೧೭೦ರಲ್ಲಿದ್ದ ಕರ್ಣಪಾರ್ಯನ 'ನೇಮಿನಾಥ ಪುರಾಣ' ದಿಂದ ಬಂಧುವರ್ಮನು ಉಪಕೃತನಾಗಿರುವುದರಿಂದ ಅಲ್ಲಿಂದ ಈಚೆಗಿದ್ದವನೆಂದೂ ಹೇಳಿದ ಕವಿಚರಿತೆಕಾರರು ಈತನ ಕಾಲವನ್ನು ಸು. ೧೨೦೦ ಎಂದು ನಿರ್ಣಯಿಸಿದರು. ಈ ಆಧಾರವನ್ನೇ

ಅನುಸರಿಸಿ ಇತರರೂ ಇದೇ ಕಾಲವನ್ನು ಅಂಗೀಕರಿಸಿದರು. ಈಚೆಗೆ ಡಾ|| ಹಂಪ. ನಾಗರಾಜಯ್ಯನವರು ಸು. ೧೧೯೦ರಲ್ಲಿದ್ದವನೆಂದು ಹೇಳುವ ಬ್ರಹ್ಮಶಿವನು 'ಸಮಯ ಪರೀಕ್ಷೆ'ಯಲ್ಲಿ ಬಂಧುವರ್ಮನನ್ನು ನೆನೆದಿರುವುದನ್ನು ಗುರುತಿಸಿ ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ.

ಅವರು 'ಬಂಧುವರ್ಮನ ಇತಿವೃತ್ತ' [1] ಎಂಬ ಲೇಖನದಲ್ಲಿ "ಬಂಧುವರ್ಮ ಕವಿಯ ಕಾಲವಿಚಾರದಲ್ಲಿ ಹೆಚ್ಚು ಚರ್ಚೆ ನಡೆದಿಲ್ಲ. ಇನ್ನೂ ತನಕ ಖಚಿತತೆ ಸಾಧ್ಯವಾಗದೆ 'ಸುಮಾರು' ಎಂಬ ಅಡ್ಡಗೋಡೆಯ ಮೇಲೆ ಕೂತಿದೆ. ಕವಿ ಚರಿತೆ ಕಾರರು ಹೇಳಿರುವ ಸು. ೧೨೦೦ ಎಂಬುದೇ ಇದುವರೆಗೆ ಸ್ವೀಕೃತವಾಗಿದೆ. (ಸಿ. ಎನ್. ಶಾಂತಾ ಅವರು ಸು. ೧೧೯೦ ಎಂದು ಸೂಚಿಸಿದ್ದಾರೆ). ಬಂಧುವರ್ಮನ ಕಾಲ ವಿಚಾರ ಚರ್ಚೆಯಲ್ಲಿ ಕೆಲವು ತೊಡಕುಗಳಿವೆ. ಮೊತ್ತ ಮೊದಲನೆಯದು ತನ್ನ ಕಾಲವಿಚಾರಕ್ಕೆ ಕವಿ ತೋರಿರುವ ತಾಟಸ್ಥ್ಯ; ಸ್ಪಷ್ಟನೇರ ನಿರ್ದೇಶನ ವಿರದಿದ್ದರೂ ಬೇಡ, ಸುಳಿವು ಸೂಚನೆಗಳಾದರೂ ಕೊಡಬಹುದಿತ್ತು. ಕವಿ ಇಂಥ ಯಾವ ಕಾಲಧ್ವನಿಯನ್ನೂ ಮಾಡದೆ ಕಾಲಾತೀತನಾಗಿ ದಿವ್ಯ ಮೌನವಹಿಸಿರುವುದು ಸಂಶೋಧಕರಿಗೆ ಸವಾಲು. ಬಂಧುವರ್ಮ ಸ್ವಂತವಿಷಯಕ್ಕೂ ನಿರ್ಲಿಪ್ತ; ಪೂರ್ವಾ ಚಾರ್ಯ ಪೂರ್ವಕವಿಸ್ಮರಣೆಗೂ ವಿಮುಖಿ. ಕಾಲ ನಿರ್ಧಾರಕ್ಕಾಗಿ ಅನ್ಯಾನ್ಯ ಅಂತರಿಕ ಬಾಹ್ಯ ಅಧಾರಗಳನ್ನು ಆಶ್ರಯಿಸಬೇಕಾಗಿದೆ" ಎಂದು ಈತನನ್ನು ನೆನೆದಿರುವ ಮುಂದಣ ಕವಿಗಳಲ್ಲಿ ಬ್ರಹ್ಮಶಿವ, ಕಮಲಭವ, ನಾಗರಾಜ, ಜಿನದೇವಣ್ಣ, ಶ್ರೀನೇಮಂಗರಸ ದೊಡ್ಡಯ್ಯ ಎಂಬ ಆರು ಜನರನ್ನು ಹೆಸರಿಸಿದ್ದಾರೆ. ಇವರಲ್ಲಿ ಬಂಧುವರ್ಮನಿಗೆ ಬಹು ಹತ್ತಿರದವನೆಂದು ಬ್ರಹ್ಮಶಿವನನ್ನು ಉತ್ತರ ಗಡಿಕಲ್ಲಾಗಿ ನೆಟ್ಟಿದ್ದಾರೆ. ಹಾಗೆಯೇ ಪೂರ್ವಗಡಿಕಲ್ಲಾಗಿ ಕರ್ಣಪಾರ್ಯನನ್ನು ನಿಲ್ಲಿಸಿದ್ದಾರೆ. 'ಈ ಎರಡೂ ಗಡಿಕಲ್ಲುಗಳಲ್ಲಿ ಹೊಸತೇನೂ ಕಂಡು ಬರುವುದಿಲ್ಲ. ಏಕೆಂದರೆ ಕವಿ ಚರಿತೆಕಾರರಾದಿಯಾಗಿ ಎಲ್ಲರೂ ಪೂರ್ವ ಗಡಿಕಲ್ಲಾಗಿ ಕರ್ಣಪಾರ್ಯನನ್ನೂ, ಉತ್ತರ ಗಡಿಕಲ್ಲಾಗಿ ಖಚಿತವಾಗಿ ಕಾಲ ಗೊತ್ತಿರುವ ಕಮಲಭವನನ್ನೂ ಅಂಗೀಕರಿಸಿದ್ದಾರೆ. ಇಲ್ಲಿಯ ಹೊಸತನವೆಂದರೆ ಬ್ರಹ್ಮ ಶಿವನ ಕಾಲವನ್ನು ಈಗಿನ ಸು. ೧೧೯೦ ರಿಂದ ಹಿಂದಕ್ಕೆ ಕೊಂಡೊಯ್ಯುವುದು. ಈ ಎರಡೂ ಬಾಹ್ಯಾಂತರ ಪ್ರಮಾಣಗಳಿಂದ, ಬಂಧುವರ್ಮನನ್ನು ನಿರ್ದಿಷ್ಟ ಕಾಲದ ಹೊಸ್ತಿಲ ಮೇಲೆ ನಿಲ್ಲಿಸಿದ್ದೇನೆ' ಎಂದಿದ್ದಾರೆ ಮತ್ತೂ ಮುಂದುವರಿದು '೧೧೬೦-೧೧೭೫ರ ನಡುವಣ ಅವಧಿಯಲ್ಲಿ ಬಂಧುವರ್ಮ ಕೃತಿರಚನೆ ಮಾಡಿರಬೇಕು' ಎಂಬ ಮಾತನ್ನೂ ಸೇರಿಸಿದ್ದಾರೆ. ಇದೂ ಅಲ್ಲದೆ "ಹರಿವಂಶಾಭ್ಯುದಯ ಮತ್ತು ಜೀವ

1. ಕವಿ ಬಂಧುವರ್ಮ; ಜಿಜ್ಞಾಸೆ–ಡಾ|| ಹಂಪ ನಾಗರಾಜಯ್ಯ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೩.

ಸಂಬೋಧನೆ ಕಾವ್ಯಗಳು ಕ್ರಮವಾಗಿ ೧೧೬೫ ಮತ್ತು ೧೧೨೦ರಲ್ಲಿ ರಚಿತವಾಗಿವೆಯೆಂದು ಒಪ್ಪಿಕೊಳ್ಳಲು ಅಡ್ಡಿಯಾಗುವ ಅಂಶಗಳು ಇಲ್ಲವೆಂದೆಣಿಸುತ್ತೇನೆ" ಎಂಬ ನಿರ್ಣಯಕ್ಕೆ ಬಂದಿದ್ದಾರೆ.

ಮೊದಲಿಗೆ ಬಾಹ್ಯ ಪ್ರಮಾಣವಾಗಿ ಉತ್ತರ ಗಡಿಕಲ್ಲಾಗಿ ನಿಲ್ಲಿಸಿರುವ ಬ್ರಹ್ಮಶಿವನ ಕಾಲವನ್ನು ನೋಡೋಣ. ಈತನ ಕಾಲವನ್ನು ವಿದ್ವಾಂಸರು ಸು. ೧೩೦೦ ಮತ್ತು ಸು. ೧೧೯೦ ಎಂದು ನಿರ್ಧರಿಸಿದ್ದಾರೆ. ಆದರೆ ಹಂಪನಾ ಅವರು, "ಬ್ರಹ್ಮದೇವನು (ಬ್ರಹ್ಮಶಿವನು) ಸು. ೧೮೮೫ರಲ್ಲಿ 'ಸಮಯ ಪರೀಕ್ಷೆ' ರಚಿಸಿದನೆಂದು ಊಹಿಸಲಾಗಿದೆ. ಅಂತರ ಬಾಹ್ಯ ಆಧಾರಗಳನ್ನು ಅವಲಂಬಿಸಿ ಬ್ರಹ್ಮದೇವ ಕವಿಯ ಕಾಲವನ್ನು ೧೨೨೫ ಎಂದು ನಿರ್ಧರಿಸಬಹುದು" ಎಂದಿದ್ದಾರೆ. ಇದಕ್ಕೆ ಆಧಾರಗಳನ್ನೇನೂ ಕೊಟ್ಟಿರುವುದಿಲ್ಲ. ಅಲ್ಲದೆ ಅವರೇ ಹೇಳುವಂತೆ ಇದನ್ನು 'ಊಹಿಸಲಾಗಿದೆ.' ಹೀಗೆ ಬ್ರಹ್ಮಶಿವನ ಕಾಲವನ್ನು ಸು. ೧೩೦೦ ಎಂಬುದನ್ನು ಬದಲಿಸಲು ಸಾಕಷ್ಟು ಆಧಾರವಿಲ್ಲದಿರುವಾಗ ೧೨೨೫ ಎಂದು ಹೇಳುವುದರಲ್ಲಿ ಅರ್ಥವಿರುವುದಿಲ್ಲ. ಬ್ರಹ್ಮಶಿವನ ಸು. ೧೧೯೦ ಎಂಬ ಕಾಲನಿರ್ಣಯಕ್ಕೆ ವಿದ್ವಾಂಸರು ಕೊಟ್ಟಿರುವ ಕಾರಣಗಳೆಲ್ಲಕ್ಕಿಂತಲೂ ಪ್ರಬಲ ಕಾರಣವೆಂದರೆ ಈತನು ೧೧೯೦ರಲ್ಲಿದ್ದ ಚಂದ್ರಪ್ರಭಪುರಾಣದ ಕರ್ತೃ ಅಗ್ಗಳಕವಿಯನ್ನು ನೆನೆದಿರುವುದು. ಹಂಪನಾ ಅವರು ಈ ಕಾರಣವನ್ನೇ ಕೈಬಿಟ್ಟಿದ್ದಾರೆ. ಹೀಗಿರುವಾಗ ಬ್ರಹ್ಮಶಿವನು ೧೨೨೫ ರಲ್ಲಿದ್ದನೆಂದು ನಿರ್ಧರಿಸುವುದು ಹೇಗೆ ಸಾಧ್ಯ ? ಅಲ್ಲದೆ ಬಂಧುವರ್ಮಕವಿಯ ಕಾಲವೇ ತಿಳಿಯದಿರುವಾಗ ಆತನು ಕೃತಿಗಳನ್ನು ಇಂತಹ ವರ್ಷಗಳಲ್ಲೇ ರಚಿಸಿದ್ದಾನೆಂದು ಹೇಳುವುದು ಎಷ್ಟು ಸಮಂಜಸ ?

ವೀರಣಂದಿಯು ರಚಿಸಿರುವ ಆಚಾರಸಾರದ ಕನ್ನಡ ವ್ಯಾಖ್ಯಾನದ ಕಾಲ ೧೧೫೩ ಎಂದೂ, ಈ ಕೃತಿಯಲ್ಲಿ ಬರುವ ಅನುಪ್ರೇಕ್ಷೆಗಳನ್ನು ಕುರಿತ ವೃತ್ತಗಳನ್ನು ಬಂಧುವರ್ಮನು ಜೀವ ಸಂಬೋಧನೆಯಲ್ಲಿ ಉಪಯೋಗಿಸಿರುವನೆಂದೂ ಹೇಳಿ ಬಂಧುವರ್ಮನ ಕಾಲ ೧೧೫೩ ರಿಂದ ಈಚಿನದು ಎಂದಿದ್ದಾರೆ. ಈಚಿನದು ಎಂದಾಕ್ಷಣ ೧೧೬೫ ಎಂದು ಹೇಳುವುದು ಹೇಗೆ ಸಾಧ್ಯ ? ಮೇಲಾಗಿ ಪೂರ್ವ ಗಡಿಕಲ್ಲಾಗಿ ಕರ್ಣಪಾರ್ಯನೇ ಇರುವಾಗ ಕಾಲನಿರ್ಣಯಕ್ಕಾಗಿ ಇದರ ಅವಶ್ಯಕತೆಯೇ ಇರುವುದಿಲ್ಲ. ಆದರೆ ಶ್ಲೋಕ ಟೀಕುಗಳನ್ನು ಅಳವಡಿಸಿಕೊಂಡಿರುವ ಬಗೆಗೆ ವಿವೇಚನೆ ಮಾಡಬಹುದು.

ಹಂಪನಾ ಅವರು "ಬಂಧುವರ್ಮನು ಪಂಚವಿಂಶತಿ ಮತ್ತು ಆಚಾರಸಾರದಿಂದ ಪದ್ಯ ಟೀಕೆಯನ್ನು ಅಳವಡಿಸಿಕೊಂಡಿದ್ದಾನೆಂಬ ನನ್ನ ಅಭಿಪ್ರಾಯಕ್ಕೆ ಕಾರಣವಿದು :

ಜೀವಸಂ. ಯಲ್ಲಿ ಪಂಚವಿಂಶತಿ ಮತ್ತು ಆಚಾರಸಾರದಿಂದ ಆರಿಸಿದ ಸಂಸ್ಕೃತ ಪದ್ಯ ಸೇರಿಸಿರುವುದು ಆಕಸ್ಮಿಕವಲ್ಲ. ಇದರಲ್ಲಿ ಎರಡು ಉದ್ದೇಶಗಳಿವೆ. ೧ ವಿಷಯ ಪ್ರತಿಪಾದನೆಗೆ ಆಚಾರ್ಯರುಗಳ ಪ್ರಾಮಾಣ್ಯವನ್ನು ಪೋಷಕವಾಗಿ ಒದಗಿಸಿರುವುದು ೨ ಪದ್ಮನಂದಿ-ವೀರಣಂದಿ ಇಬ್ಬರೂ ಬಂಧುವರ್ಮ ಕವಿಗೆ ಹಿರಿಯರು ಸಮಕಾಲೀನರು, ಗುರುಗಳೂ ಆಗಿದ್ದಿರಬಹುದು. ಆದುದರಿಂದ ಬಂಧುವರ್ಮನ ಕಾವ್ಯ ರಚನೆ ೧೧೬೦ರ ತರುವಾಯ ಆಗಿದೆಯೆಂದು ಅಸ್ಖಲಿತವಾಗಿ ಖಚಿತವಾಗಿ ಹೇಳಬಹುದು" ಎಂದಿದ್ದಾರೆ.

ಬಂಧುವರ್ಮನು ಪಂಚವಿಂಶತಿ ಮತ್ತು ಆಚಾರಸಾರಗಳಿಂದ ಶ್ಲೋಕ ಟೀಕುಗಳನ್ನು ಅಳವಡಿಸಿಕೊಂಡಿದ್ದಾನೆಂಬುದಕ್ಕೆ ಕೊಡುವ ಕಾರಣಗಳು ಬಹು ಶಿಥಿಲವಾದವು. ಈ ಶ್ಲೋಕ ಟೀಕುಗಳಿಲ್ಲದಿದ್ದರೂ ಬಂಧುವರ್ಮನ ವಿಚಾರಧಾರೆಗೆ ಯಾವ ಬಾಧಕವೂ ಆಗುವುದಿಲ್ಲ. ಅಲ್ಲದೆ ಇಂತಹ ಸಂದರ್ಭಗಳಲ್ಲಿ ಮೊತ್ತ ಮೊದಲನೆಯದಾಗಿ ಗಮನಿಸಬೇಕಾದುದು ದೊರೆತಿರುವ ಹಸ್ತ ಪ್ರತಿಗಳು. ಈ ಪ್ರತಿಗಳಲ್ಲಿ ಯಾವುದು ಶುದ್ಧ, ಯಾವುದು ಅಶುದ್ಧ ? ಯಾವುದು ಪ್ರಾಚೀನ ಮತ್ತು ಯಾವುದು ಈಚಿನದು ? ಹಸ್ತಪ್ರತಿ ಕಾಲನಮೂದಿತವೆ ಇಲ್ಲವೆ ? ಇಂತಹ ಎಷ್ಟು ಪ್ರತಿಗಳಲ್ಲಿ ಶ್ಲೋಕ ಟೀಕುಗಳಿವೆ ಎಂಬಿತ್ಯಾದಿ ವಿವರಗಳನ್ನು ಪರಿಶೀಲಿಸಬೇಕಾದುದು ಮೊದಲ ಕರ್ತವ್ಯವಾಗಿದೆ.

೧೯೫೮ರಲ್ಲಿ ಮದರಾಸಿನಿಂದ ಪ್ರಕಟವಾಗಿರುವ, ಶ್ರೀ ಎಚ್. ಶೇಷಯ್ಯಂಗಾರ್ಯ ಅವರಿಂದ ಸಂಪಾದಿತವಾದ ಜೀವ ಸಂಬೋಧನೆಯನ್ನು ಗಮನಿಸೋಣ. ಅವರು ಇದರಲ್ಲಿ ಉಪಯೋಗಿಸಿರುವ ಹಸ್ತಪ್ರತಿಗಳು ಎಂಟು ; ಮತ್ತೊಂದು ಅಸಮಗ್ರವಾದ ಮುದ್ರಿತ ಪ್ರತಿ. ಇವುಗಳಲ್ಲಿ ಕವಿಗೆ ಹತ್ತಿರದ ಕಾಲ ನಮೂದಿತವಾದ ಶುದ್ಧ ಹಸ್ತ ಪ್ರತಿಗಳು ಎರಡು. ಕೊನೆಯ ಆರು ಅಧಿಕಾರಗಳನ್ನು ಮಾತ್ರ ಹೊಂದಿರುವ ಶಕ ೧೩೪೭ರಲ್ಲಿ ಪ್ರತಿಯಾದ 'ಝ' ಪ್ರತಿ. ಮತ್ತೊಂದು ಶಕ ೧೩೭೦ರಲ್ಲಿ ಲಿಖಿತವಾದ ಸಮಗ್ರ ಮತ್ತು ಶುದ್ಧವಾದ 'ಖ' ಪ್ರತಿ. ಮತ್ತೆರಡು ಕಾಲ ನಮೂದಿತ ಪ್ರತಿಗಳೆಂದರೆ 'ಛ' ಮತ್ತು 'ಜ'. ಇವುಗಳಲ್ಲಿ 'ಛ' ಪ್ರತಿಯು ಶಕ ೧೭೭೪ರ ಪ್ರತಿಯಾದರೆ 'ಜ' ಪ್ರತಿಯು ಶಕ ೧೬೬೪ರ ಪ್ರತಿ. ಸಂಪಾದಕರೇ ಹೇಳುವಂತೆ ಮೊದಲ ಮೂರು ಓಲೆ ಪ್ರತಿಗಳು (ಖ ಛ ಝ) ಶುದ್ಧವಾಗಿದ್ದು, ಇವುಗಳಲ್ಲಿ ಯಾವ ಶ್ಲೋಕ ಟೀಕುಗಳೂ ಕಂಡು ಬರುವುದಿಲ್ಲ. ಶ್ಲೋಕ ಟೀಕುಗಳನ್ನು ಹೆಚ್ಚಾಗಿ ಹೊಂದಿರುವ 'ಕ' ಪ್ರತಿಯ ಬಗೆಗೆ ಸಂಪಾದಕರು ನೀಡುವ ವಿವರವನ್ನು ಗಮನಿಸಬಹುದು. "ಇದು ಕಾಗದದ ಪ್ರತಿ ..........ಇದರಲ್ಲಿ ಹಲವು ಪಾಠ ಭೇದಗಳಿವೆ. ಕೆಲವು ವಾಕ್ಯಗಳೂ ಪದ್ಯಗಳೂ ಬಿಟ್ಟು ಹೋಗಿವೆ, ಕೆಲವು ಮಾರ್ಪಟ್ಟಿವೆ, ಕೆಲವು ಹೆಚ್ಚಾಗಿವೆ. ಹೀಗೆ ವಾಕ್ಯಗಳಲ್ಲ

ಲ್ಲದೆ ಶಬ್ದಗಳಲ್ಲಿಯೂ ಹೆಚ್ಚು ಮಾರ್ಪಾಡಿದೆ.......ಇದರಲ್ಲಿ ಸಗರ ಚಕ್ರವರ್ತಿ ಕಥೆಯಲ್ಲಿ ಪಾಠಾಂತರವುಂಟು. ನಾಗಕುಮಾರನ ಕಥೆಯು ಗ್ರಂಥದ ಅಂಗವಾಗಿಯೇ ಇದರಲ್ಲಿ ಸೇರಿಸಲ್ಪಟ್ಟಿದೆ." ಹಾಗೆಯೇ ಉಳಿದ ನಾಲ್ಕು ಹಸ್ತಪ್ರತಿಗಳಾದ 'ಗಘಚಜ' ಪ್ರತಿಗಳಲ್ಲಿಯೂ ನಿಯತವಾಗಿ ಶ್ಲೋಕ ಟೀಕುಗಳು ಕಂಡುಬರುವುದಿಲ್ಲ. ಅವುಗಳ ವಿವರವನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

| ಅಧಿಕಾರ | ಆದಿ | ಪ್ರತಿಗಳು | ಅಂತ್ಯ | ಪ್ರತಿಗಳು |
|---|---|---|---|---|
| ೧ | ಶ್ಲೋಕಗಳು | ಗಘಚಜ | ಶ್ಲೋಕ | ಗ |
| ೨ | ಶ್ಲೋಕ + ಟೀಕು | ಒಂದೆರಡು ಪ್ರತಿ | ,, | ಘಚ |
| ೩ | ಶ್ಲೋಕ | ಘಚಜ | ,, | ಘಚಜ |
| ೪ | ,, | ,, | ,, | ಜ |
| ೫ | ,, | ,, | ,, | ? |
| ೬ | ,, | ,, | ,, | ಚಜ |
| ೭ | ,, | ಜಚ | ,, | ? |
| ೮ | ,, | ,, | ,, | ಚ |
| ೯ | ಶ್ಲೋಕ + ಟೀಕು | ,, | ,, | ಘಚಜ |
| ೧೦ | ,, | ,, | ,, | ಚಜ |
| ೧೧ | ,, | ,, | ,, | ,, |
| ೧೨ | ,, | ,, | ,, | ಇಲ್ಲ |

ಈ ಪಟ್ಟಿಯನ್ನು ನೋಡಿದರೆ ಈ ಯಾವ ಪ್ರತಿಯಲ್ಲಿಯೂ ನಿಯತವಾಗಿ ಶ್ಲೋಕ ಟೀಕುಗಳು ಕಂಡುಬರುವುದಿಲ್ಲ. ಹೀಗಿರುವಾಗ ಹಂಪನಾ. ಅವರು ಬಂಧುವರ್ಮನು ಜೀವ ಸಂಬೋಧನೆಯಲ್ಲಿ ಶ್ಲೋಕ ಟೀಕುಗಳನ್ನು ಅಳವಡಿಸಿಕೊಂಡಿರುವುದನ್ನು "ಅಸ್ಖಲಿತವಾಗಿ ಖಚಿತವಾಗಿ ಹೇಳಬಹುದು" ಎನ್ನುವ ಮಾತುಗಳು ನಿರಾಧಾರವಾಗುತ್ತವೆಂಬುದರಲ್ಲಿ ಸಂಶಯವಿಲ್ಲ. ಬಂಧುವರ್ಮನು ಆಚಾರಸಾರ ಪಂಚವಿಂಶತಿ

ಮೊದಲಾದ ಕೆಲವು ಪೂರ್ವಗ್ರಂಥಗಳ ಪ್ರಯೋಜನ ಪಡೆದಿರುವುದೂ ಅವುಗಳಲ್ಲಿ ಕಂಡುಬರುವ ಅಭಿಪ್ರಾಯಗಳನ್ನು ತನ್ನ ಕೃತಿಯಲ್ಲಿ ತನಗೆ ಬೇಕಾದಂತೆ ಬಳಸಿ ಕೊಂಡಿರುವುದೂ ಸಹಜವಾಗಿದೆ. ಆದರೆ ಮೂಲ ಶ್ಲೋಕ ಟೀಕುಗಳನ್ನು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾನೆಂಬುದಕ್ಕೆ ಸಾಕಷ್ಟು ಆಧಾರ ದೊರೆಯುವುದಿಲ್ಲ. ಹಾಗೆಯೇ ಹಂಪನಾ ಅವರು ಕೊಟ್ಟಿರುವ ಕಾರಣಗಳೂ ಬಂಧುವರ್ಮನ ಕಾಲವನ್ನು ಸು. ೧೧೯೪ ರಿಂದ ಬದಲಿಸಲು ಸಾಕಾಗುವುದಿಲ್ಲ. ಹೀಗೆ ಕವಿಯ ಕಾಲವೇ ಸುಮಾರಿನಲ್ಲಿರುವಾಗ ಆತನ ಕೃತಿಗಳು ಇಂತಿಂತಹ ವರ್ಷಗಳಲ್ಲಿಯೇ ರಚಿತವಾದುವೆಂದು ಹೇಳುವುದು ಉಚಿತವಾಗಲಾರದು. □

—•—

# ಅಪ್ರಕಟಿತ ಶಿವಶಾಸ್ತ್ರ ಲಿಖಿತ ಆಗಮ ಗ್ರಂಥ*

ಡಾ॥ ಕೆಳದಿ ವೆಂಕಟೇಶ್ ಜೋಯಿಸ್

ವೀರಶೈವ ಸಿದ್ಧಾಂತ ಪ್ರತಿಪಾದನೆಗೆ ಕೆಳದಿ ಸಂಸ್ಥಾನವು ಒಂದು ಸುಭದ್ರ ನೆಲೆಯಾಗಿತ್ತು. ಆಳರಸರ ಜೊತೆ ಜೊತೆಯಲ್ಲಿಯೇ ಸರ್ವ ಧರ್ಮ ಸಮನ್ವಯತೆಯನ್ನು ಪ್ರತಿಪಾದಿಸುವಂತಹರಾದ ಕೆಳದಿಯ ಪ್ರಜಾವರ್ಗದ ಮಾನ್ಯತೆಯೂ ವೀರಶೈವ ಧರ್ಮಕ್ಕೆ ಈ ಕಾಲದಲ್ಲಿ ದೊರೆತಿತ್ತು. ಕೆಳದಿಯನ್ನಾಳಿದ ಪ್ರಮುಖ ಅರಸುಗಳಲ್ಲಿ ಒಬ್ಬನಾದ ಬಸಪ್ಪನಾಯಕನು (ಕ್ರಿ. ಶ, 1697–1714) ವೀರಶೈವ ಧರ್ಮದ ಪ್ರತಿಪಾದನೆಗಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದ್ದನು. ಲಿಂಗಣ್ಣ ಕವಿಯ ಕೆಳದಿ ನೃಪವಿಜಯವು ಕೆಳದಿ ಬಸಪ್ಪನಾಯಕನು ಕೈಗೊಂಡ ಕ್ರಮಗಳ ಬಗ್ಗೆ [1] ಹಾಗೂ 1,96,000 ಜಂಗಮ ಮೂರ್ತಿಗಳಿಗೆ ಕಂಬಳಿ, ಕಂಥೆ, ಶಿವದಾರ, ವಿಭೂತಿಯದಾರ, ಭಸ್ಮ, ರುದ್ರಾಕ್ಷಿ, ಆಗಮಶಾಸ್ತ್ರ ಲಿಖಿತ ಪುಸ್ತಕ ಮೊದಲಾದವುಗಳನ್ನು ಕೊಡುವುದರ ಮೂಲಕ ವೀರಶೈವ ಧರ್ಮಕ್ಕೆ ತೋರಿದ ಆದರವನ್ನು ಇಕ್ಕೇರಿ ಸಂಸ್ಥಾನ ಚರಿತ್ರೆ ತಿಳಿಸುತ್ತದೆ. [2]

ಈ ಅರಸನು ಪ್ರತಿ ವರ್ಷ ಕಾರ್ತಿಕ ಮಾಸದ ಪ್ರತಿ ಸೋಮವಾರದಲ್ಲೂ ಜಂಗಮ ಪಾದಪೂಜೆ ಪದ್ಧತಿಯನ್ನು ಜಾರಿಗೆ ತಂದನು. ದಾಸೋಹ, ಪುರವರ್ಗನ್ನಮಂಬಾಸುರ ಮಠಮಾನ್ಯಪತ್ರಗಳ ವ್ಯವಸ್ಥೆಯನ್ನು ಮಾಡಿದನು.[3]

ಈವರೆಗಿನ ಸಂಶೋಧನೆಗಳಲ್ಲಿ ಈ ಶಿವಶಾಸ್ತ್ರ ಲಿಖಿತ ಆಗಮ ಗ್ರಂಥ ದೊರೆತಿರಲಿಲ್ಲ. ಈಚೆಗೆ ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಈ ಗ್ರಂಥದ ಕೆಲವು ಗರಿಗಳು ಗೋಚರವಾಗಿವೆ.

ಕೆಳದಿ ವಸ್ತು ಸಂಗ್ರಹಾಲಯದ ಹಸ್ತಪ್ರತಿ ಸೂಚಿಯಲ್ಲಿ ಸೂಚಿತವಾಗಿರುವ ಹಸ್ತ ಪ್ರತಿ ಸಂಖ್ಯೆ 243 (ಬ)ದಲ್ಲಿ 'ಪದಗಳು' ಎಂಬುದಾಗಿ ಸೂಚಿತವಾಗಿರುವ ಗರಿಗಳ

---

* 1995ರಲ್ಲಿ ಬೆಳಗಾವಿಯಲ್ಲಿ ನಡೆದ ಇತಿಹಾಸ ಅಕಾಡೆಮಿ ವಾರ್ಷಿಕ ಸಮ್ಮೇಳನದಲ್ಲಿ ಸಾದರ ಪಡಿಸಿದ ಪ್ರಬಂಧ.

1. ಕೆಳದಿ ನೃಪವಿಜಯ, ಕಸಾಪ, ಬೆಂಗಳೂರು–1977 ಗದ್ಯಾನುವಾದ ಪುಟ 186–87

2. ಇಕ್ಕೇರಿ ಸಂಸ್ಥಾನ ಚರಿತ್ರೆ, ಪುಟ 139, 140, 1931, ಎಂ. ಎಸ್. ಪುಟ್ಟಣ್ಣ.

3. ಸಾ. ಶಿ. ಮರುಳಯ್ಯ, ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ, ಪುಟ 48–49

ಮಧ್ಯದಲ್ಲಿ ಈ ಶಿವಶಾಸ್ತ್ರ ಲಿಖಿತ ಆಗಮ ಗ್ರಂಥದ ಕೆಲವು ಗರಿಗಳು ದೊರತಿವೆ. ಇವು ಒಂಬತ್ತು ಗರಿಗಳಲ್ಲಿ ದೊರೆತಿವೆ. ಇದರ ಪ್ರಮಾಣ 29.2, 5.8 ಸೆಂ. ಮಿ. ಇದೆ.[4] ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಇರುವ ಈ ಗರಿಗಳಲ್ಲಿ ಈಗಾಗಲೇ ಕೆಳದಿ ನೃಪ ವಿಜಯದಲ್ಲಿ ಉಕ್ತವಾಗಿರುವಂತೆ ಜಂಗಮ ಮೂರ್ತಿಗಳಿಗೆ ಆದರೋಪಚಾರವನ್ನು ಮಾಡಿ ಶಿವಶಾಸ್ತ್ರ ಲಿಖಿತ ಪುಸ್ತಕವನ್ನು ಕೊಟ್ಟಿರುವುದು ತಿಳಿಸುತ್ತದೆ. ಈಗ ದೊರೆತಿರುವ ಗರಿಗಳೂ ಸಹ ಕ್ರಮವಾಗಿಲ್ಲದೆ ಅದನ್ನು ಸಂಪಾದಿಸುವುದು ಕಷ್ಟದ್ದಾಗಿದೆ. (ಪುಟ 2, 8, 10, 11, 12, 17, 19, 20, 25, 26, 27, 30 ಹಾಗೂ ಪುಟಸಂಖ್ಯೆ ಇಲ್ಲದ ಒಂದು ಪುಟ ದೊರೆತಿದೆ) ಬೆಂಗಳೂರು ವಿ.ವಿ.ಯಲ್ಲಿ ಈ ಕುರಿತು ಕೆಲವು ಗರಿಗಳಿರುವುದಾಗಿ ಕೇಳಿ ತಿಳಿದಿರುವೆನು.

ಈ ಹಸ್ತ ಪ್ರತಿಗಳಲ್ಲಿ ಬಸವೇಶ್ವರ ಪ್ರಭೋ ಹಾಗೂ ನವಧರಿಪುದೀಶ ಸಿದ್ದೇಶಾ[5] ಎಂಬ ಪ್ರಾರ್ಥನೆ ಹೆಚ್ಚಾಗಿ ಕಂಡುಬರುತ್ತದೆ. ಗರಿಗಳಲ್ಲಿ ಷೋಡಶ ಪೂಜಾ ಫಲ ಶ್ಲೋಕ, ರಾವಣ ಭುಜಂಗ, ಪಾರ್ಥಿವ ಲಿಂಗ ಪೂಜಾ ವಿವರಣ, ಸಮಸ್ಯಾಪೂರ್ಣ, ಕೀರ್ತನೆಗಳು, ಪ್ರತಾಪವರ್ಣನ, ಶಿವಸ್ತುತಿ ಕೈವಾರ ಪದ್ಯ, ಅಷ್ಟಕ, ಸೇವಾಪದ್ಯಗದ್ಯ, ವಿನಾಯಕದೇವರಿಗೆ ಹಸೆಗೆ ಕರೆಯುವ ಪದ, ಕುಮಾರ ಸ್ವಾಮಿಯ ಹಸೆಗೆ ಕರೆದ ಪದ, ವೀರಭದ್ರನ ಹಸೆಗೆ ಕರೆದ ಪದ ಮೊದಲಾದವುಗಳಿವೆ.

**ಗರಿ 2 ಮುಂಭಾಗ :**

....................ರಾವಣ ಭುಜಂಗವ ಬರೆವುದಕ್ಕೆ ಶುಭಮಸ್ತು................ ................ಎಂದು ಪ್ರಾರಂಭವಾಗುತ್ತದೆ.

**ಗರಿ 3 ಮುಂಭಾಗ :**

6. ಂದ ಪಾಡಿಸೆ | ಕೆರಳಲಾಂನೀನೊಂದುರಾಗವನುಸುರೆನು ತೊರೆದು ಪಾಡಿಸಿ ಬಸವೇಂದ್ರನೆಂ ಮಿರ್ವರನೆರದೊಲಿಸಿದವರಿಯಾ ಕೆಳದಿಯಾ 3 ಶ್ರೀ ಶ್ರೀ ಶ್ರೀ ಶ್ರೀ ಶ್ರೀ............

**ಗರಿ 8 ಹಿಂಭಾಗ :**

1. ಬೂಸುರವ್ರಜಬುಕ್ತ ಶಿಷವಿಲಿಪಹೃತ್ಸ ಕಲಾಮಯಂ ವಾಸುಕೀಷ್ಟ ಫಲಪ್ರದಂ ನತಸಾಂಬಕುಷ್ಠ ನಿವಾರಕಂ ಬಾಸುರೈಕ ಕುಮಾರ ಪರ್ವತ ಮೂಲ ಬೂಪ್ರಕಟಾಲಯಂ ಶ್ರೀ ಸುಧರ್ಮ ಪಿಶಾಚ ಜನ್ಮ ವಿಮೊಚಕಂಗುಹಮಾಶ್ರ

4. ಕೆಳದಿ ವಸ್ತು ಸಂಗ್ರಹಾಲಯದ ಹಸ್ತ ಪ್ರತಿ ಸೂಚಿ ಪುಟ 61, 1985

5. ವೇಣುಪುರ (ಬಿದನೂರು, ನಗರ)ದಲ್ಲಿ ಈಗಲೂ ಗುಡ್ಡದ ಮೇಲೆ ಕಾಡಿನಲ್ಲಿ ಗರಿ ಸಿದ್ದೇಶ್ವರನ ದೇವಾಲಯವಿದೆ.

2. ಯೆ 7 ಬೂತಳಾಧಿಕ ಬೂತಿಮತ್ಕೆಳದೀನೃಪಾಲಕ ಶಿಖರೀ ಜಾತಸದ್ಭಸವೇಂದ್ರ ಬೂಪಮನೊರಥಾರ್ಥ ಫಲಪ್ರದಂ ದೂತ ಬಕ್ತ ಜನಾರ್ತಿಮಂಡಲಮರ್ಕ ಕೋಟಿಸಮಪ್ರಬಂ : ದೀನಮಾಯಮಶೆಷರೊಕವರಪ್ರದಂಗುಹ
8. ಮಾಶ್ರಯೆ 8 ..........................................................................
7. ಅಸುರೆಂದ್ರ ಕ್ರೌಂಚವಿದಾರಣಧೀರಂ : ಬಸವೇಂದ್ರ ನೃಪವಾಂಛಿತಾರ್ಥ ದಾತಾರಂ 5 ಶ್ರೀ ಶ್ರೀ

ಗರಿ 10ಮುಂಭಾಗ :

1. ಜಂಗಮ ಬಿರುದಾವಳಿವೃತ್ತ ಕೈವಾರಿ ಪದ್ಯಗಳ ಬರೆವುದಕ್ಕೆ ಶುಭಮಸ್ತು ವೃತ್ತ ಶ್ರೀ ಜಲಜಾಂಬಕಾದಿಸುರಮೌಳಿಮಣಿವ್ರಜದೀಪ್ತಿದೀಪನೀ ರಾಜಿತಪಾದಪದ್ಮ ರಜನೀಕರ ಶೆಖರಜನ್ಸ್ಥಕಾ ರಾಜೆ
2. ಕಹೆಮಪಿಂಗಲಿ ಜಟಾಮಕುಟೊಜ್ವಲಸಾಂಬಕ್ವ ರವಾಂ : ಬೊಜಸಬಾನ್ನಿನೆತ್ರ ಜಯ ಶಂಕರ ಬೊಬಸವೇಶ್ವರ ಪ್ರಬೊ 1.................................... ಎಂಬುದಾಗಿಯೂ,

ಗರಿ 11 ಮುಂಭಾಗ :

3. ................ನಿತ್ಯ ನಿರ್ಮಲ ನಿಷ್ಕ್ರಿಯ ಸಚ್ಚಿದಾನಂದ ಸ್ವರೂಪ ಪರಾತ್ಪರತರ ಪರಮೇಶ್ವರ ಪಂಚಮುವಸ್ತ್ರ ಸರಸೀರುಹೊದ್ಭವ ನಿರರ್ಗಳ ನಿರುಪಮ ಪರಶಿವ ತತ್ವ ಪ್ರತಿಪಾದಕ ಕಾಮಿಕ ಪಾರಮೆಶ್ವರಾದಿ ಶಿವಾಗಮೊ
4. ಕ್ತ ನಿರತಿಶಯ ನಿರಾಚಾರ ವೀರಶೈವಾಚಾರ ಪ್ರವರ್ತಕ ತ್ರಿವಿಧಲಿಂಗಾ ಸಾಮರಸ್ಯ ನಿಜಾನುಭವ ಪ್ರಾಜ್ಞ ಅನಾದಿಭಕ್ತ ನಿರಂಜನ ಜಂಗಮ ಶೂನ್ಯ ಲಿಂಗನಿಷ್ಕಲ ಲಿಂಗಮ ಹಾಲಿಂಗಪ್ರಣವಲಿಂಗ
5. ತತ್ವ ವಿಚಾರ ಪಾರಾವಾರ ಪಾರೀಣ ಆಚಾರಲ್ಲಿಂಗಾದಿಬೆದಬಿಂನಭಕ್ತ ಮಾಹೇ ಶ್ವರ ಪ್ರಸಾದಿ ಪ್ರಾಣಲಿಂಗ ಶರಣೈಕ್ಯಸ್ಥಲರೂಪ ಪಿಂಡಾದಿ ಜ್ಞಾನಶೂನ್ಯಾಂತ್ಯ ವಿಲಸದೆಕೊತ್ತರ ಶತಸ್ಥಳಪರಿ
6. ಶೀಲನಜನಿತ ದಿವ್ಯ ಶಿವಜ್ಞಾನ ನಿರ್ಧೂತಾಖಿಲ ಕಲ್ಮಷಕಲಾಪ ಕ್ರಿಯಾದೀಕ್ಷಾ ಯೋಗದೀಕ್ಷಾ ಜ್ಞಾನದೀಕ್ಷಾ ವಿಜ್ಞಾನದೀಕ್ಷಾದಿಕ್ಷಿತ ಕ್ರಿಯಾಲಿಂಗ ಜ್ಞಾನ ಲಿಂಗಾನುಭವ ಸಂಪಾದಿತಸ್ವಚ
7. ರಷರಾದಿವಿವೇಕಜ್ಞಾನಖಡ್ಗಖಂಡಿತ ಮಲಮಾಯಾದಿ ಪಶುಪಾಶಾದಿ ಲತಾ ವಿತಾನ ಗುರುಲಿಂಗ ಜಂಗಮ ಪಾದೋದಕ ಪ್ರಸಾದ ಬೂತಿರುದ್ರಾಕ್ಷೆ ಮಂತ್ರಾ ಬ್ಯಷ್ಟಾವರಣಸದ್ಭೂಪ

8. ಪಂಚಾಚಾರ ಪರಾಯಣ ನಿಜಪಾದೋದಕ ಪ್ರಸಾದಲೇಶಕೃತಾರ್ಥೀಕೃತಮತಾಂತ್ರಾಸಕ್ತ ಮಸ್ತರ ಬನಾಬ್ಧಿನಿಮಗ್ನಮದಾಂಧರೊಕ ಸಂತ್ರತ ಸಂಚರಣಶೀಲ ನಿಜಚರಣ ಸರೋಜಪರಾಗ

9. ಯಮಾಣ ಪಾಂಸುರೇಶ ಪವಿತ್ರೀಕೃತ ಸಮಸ್ತದಿಗಂತರಾಲ ಸಾನುಗ್ರಹ ಕಟಾಕ್ಷ ವೀಕ್ಷಣ ಮಾತ್ರ ಸಮುದ್ಧೃತ ಚರಣಾಶ್ರಿತ ಪಾದಾನಕ ಜನಜಾತಪಾಂಜಾತ ಚತುರ್ವಿಧ ಸಂಕೇತ ಸಮಯಾಚಾರ

10. ಶೀಲ ಸಂಪಂನ ಜಟಾಮುಕುಟ............(ಲಿಪಿ ಕಾಟು ಹೊಡೆದಿದೆ) ಕಾಷಾಯ ವಸ್ತ್ರ ಕಂಥಾಕಂಬಳದಂಡ ಪಾದಘಂಟಾತ್ರಿಪುಂಡ್ರ ರುದ್ರಾಕ್ಷಮಾಲಿಕಾ ಪ್ರಶಸ್ತ ಪುಸ್ತಕ ಹಸ್ತ ವಸ್ತ್ರಾದಿ ಶಿವಲಾಂಛನ ಲಾಂಛಿತ ದಿವ್ಯ ವಿಗ್ರಹ ಪಂಚಸೂತಕ

11. ವಿವರ್ಜಿತ ಪಂಚಾಕ್ಷರೀ ಮಂತ್ರ ರಹಸ್ಯ ಸುಧಾರಸಪಾನಪರಿಪುಷ್ಟಮಂಗಲಾಂಗ ಸಂಘಟಿತ ಸಜ್ಜಿಕಾ ವಿಭ್ರಾಜಮಾನ ನಾನಾವಿಧ ವಿಚಿತ್ರ ತರಾಘಟನಾಪಟನ ಬಹುವಿಧ ಪವಾಡ ಪ್ರಕಟೀಭೂತ ಪ್ರಭಾವ ನಿರಂಕಶಸ್ವೇಚ್ಛಾ ವಿಹಾರಲೀಲಾ

12. ವಿನೋದ ಸಮುಜ್ವಲ ನಂದೀಶ್ವರದವಜ ಪಟಾದಿವೀರಶೈವ ಬಿರುದಾಂಕ ಕುಮತಿಪಾಷಂಡಿಪಾಪಾತ್ಮ ಪರವಾದಿ ಮಸ್ತಕ ಶೂಲಮಯಾ ಶೂಲಹಲ ಸ್ವಮತ ಪ್ರತಿಪಕ್ಷಬೌದ್ಧ ಚಾರ್ವಾಕ ಕಾಪಾಲಿಕಾದಿ ದುಷ್ಟ ದುರ್ವಾದಿಪರ್ನಾಬಿ ವರ್ಗಗರ್ವ ಪರ್ವ

13. ತವಿದಾರಣವಜ್ರದಂಡಾ ವಿಶಿಷ್ಟಾದ್ವೈತ ಶಿವಮತ ಸಮುದ್ರ ಸಂವರ್ಧನ ಸಂಪೂರ್ಣ ಸುಧಾಕರಂ ಶಿವಾಚಾರ ನಿಂದಕಲೋಕ ಜಲಧರ ಪಟಲ ಸಮುತ್ಸಾರಣಕರಣ ಪ್ರವಣ ಝುಂಝಾನಿಲ ಶಿವನಿಂದ ರಸಿಕ್ಷಾದಕ್ಷ ಶಿವಮತ ಸ್ಥಾಪನಾಚಾರ್ಯ

**ಗರಿ 11 ಮುಂಭಾಗ :**

1. ಶಿವದ್ವೈಷಿ ವಿದ್ರಾವಣ ಬವಿಸಂಗವಿದೂರ ಭವಾಟ ವಿದವಾನಲ ಶಿವಸಮಯ ಕುಮುದವನ ಸುಧಾಕರ ಪರಸಮಯದುರಂತ್ತಧ್ವಾಂತ್ತ ದಿವಾಕರ ಭೂರುದ್ರಾವತಾರ : ಶ್ರೀಮದ್ಗುರುಲಿಂಗ ಜಂಗಮ ಚರಣ ಕಮಲನವಾನಿರತ ಶಿವ

2. ಪದಾಂಭೋಜಭೃಗಾಯಮಾನಾಂತ್ತರಂಗಲಿಂಗಾಂಗ ಸಂಗ ವೀರಶೈವತೊದ್ಧರಣ ರಂಧರ ಶಿವಶರಣ ವತ್ಸಲಸುಧಾರಸಾತಿಮಾಧುರ್ಯಧುರ್ಯನಾನಾವಿಧಭಕ್ಷ.... ಬೋಜ್ಯಾದಿ ಪದಾರ್ಥ ಸಮೇತದಿವ್ಯಾಂಸೊ

3. ಜನಕ್ರಿಯಾನಿರತಿಶಯಾದರ ನಿರಂತರ ಸಂತರ್ಪಿತ ಸಂಣವತೀ ಸಹಸ್ರೋತ್ತರಂಕ್ಷೆ ಶಿವಗಣ ಸಮೂಹ ತದುಚಿತಮೀರ್ಣಮತವಾನ್ಯ. ದಿವ್ಯಾಂಬರಾಭರಣ ವಾಹನ ಕಂಥಾ ಕಂಬಳಿ ಶಿವಸಜ್ಜಿತಾ ಭಸ್ಮರುದ್ರಾಕ್ಷಿ ಮಾಲಾಪ

4. ಕಹಸ್ತಪಸ್ತ್ರಾದಿ ಶಿವಲಾಂಛನೋಪೇತ ಸಮಸ್ತ ವಸ್ತೂತ್ಕರ ತನ್ಮದೊತ್ಸಹವಿಭ ವಾರ್ಥ ಸ್ವಬುದ್ಧಿ ಕೌಶಲಪರಿಕಲ್ಪಿತ ಮಹೋಂನತ ಕುರುಜು ಮೇರು ಮಹಾ ಮೆರು : ಗುಡಿತೋರಣ ಮಕರ ತೋರಣ ಸ್ವರ್ಣ ಸ್ಥಾಲಾರ

5. ಳೀ ತೋರಣ ಕಲಶಾದರ್ಶ ಧ್ವಜ ಚಮರಪತಾಕೊಜ್ಜಲರಂಬಾಸ್ತಂಭಪುಂಡ್ರೇ ಕ್ಷುದಂಹಾದಿ ಮಂಗಲ ಪದಾರ್ಥ ಬಹು ವಿಧವಿಚಿತ್ರ ಪರರಚಿನಾಲಂಕೃತ ಪ್ರತಿಭವನವಿರಾಜಮಾನಸೋಮಸೂರ್ಯವೀಥಿತಾ

6. ಪರಿಶೋಭಿತ ದ್ವಿತೀಯ ಕಲ್ಯಾಣಪುರಾಯರೂಣ ಜಗದ್ವಿಖ್ಯಾತ ವೇಣುಪುರವ ರಾಧೀಶ್ವರ ಮಲ್ಲಮಂಚಿತೊದರಕ್ಷೀರಪಾರಾವಾರರಾಕಾಸುಧಾಕರ ಸಮಸ್ತ ಶುಭಗುಣಸಾಂದ್ರ

7. ಕೆಳದಿ ಬಸವನೃಪಾಲಚಂದ್ರ ಸಕಲಮನೋರಥ ಪೂರಣಕಾರಣ ಮಹಾಮಹಿಮಾ ತಿಶಯ ಪ್ರಭಾವ ಮಹಾಜಂಗಮರೇ ಸರಿಯಾರ್ಗಿ ಮನೀಜಗದೊಳ ಮರ್‍ಝುರೆ ಬಳಿಕೆ ಭಲರೇಪರಾ

8. ಕುಪರಾಕುಪರಾತುರೇ ವಿಜಯಿಭವ ದಿಗ್ವಿಜಯಾಭವಾ 1 ತುರಂಗ ವೃತ್ತ ಜಂಗಮ : ಜಯಜಯ ಪರವಾದಿ ವಿಹಂಗಮ ವಿದಳನ. ದೀರ ಸಾಳ್ವಸು ಸಂಗಮ ಸಜ್ಜಿತಾದ್ರುತವೃ

9. ವಿಬತುರಂಗಮ ಬಸಿತಾಕ್ಷಮಣಿವ್ರಜ ಭೂಷಣ ಶರಣಾಗತ ಸಂಚಯ ತೊಷಣ ಪ್ರತಿ ಪಕ್ಷ ಕದಂಬಕಬಿಷಣ ನಿಗಮಾಗಮ ನಿಶ್ಚಯ ಭಾಷಣ ವಿಮತೊನ್ನತ ದರ್ಪವಿಭೆ

10. ದನ ವಿನಮದ್ಭವ ಪಾಶ ವಿಚ್ಛೆದನಾ ಕಲಿಕಲ್ಮಷ ಕರ್ಮ ನಿಷೂದನ ಸಕಲಾಮಲ ಪುಣ್ಯಯಶೋಧನ ಶಾಂಬವಾಗಮ ಸುಮತೊಬಿರಂಜನಾ ಶಿವದೂಷಿತ ದರ್ಪವಿಭ

11. ಂಜನ ಭಕ್ತಲೋಕಾರ್ತಿಘನತಿಮಿರಾಂಜನ ಶಂಕರಾಕಾರನಿತ್ಯ ನಿರಂಜನ ಮರ್‍ಝು ಪೂತುರೆ ಚಾಗಂಬಲರೆ ಧಿರುಧಿರಪಣಕುರೆದಿಗ್ವಿಜಯಿಾಬವ ಬಳಿರೆ ಜಂಗಮಾ 2 ಶ್ರೀ ಶ್ರೀ ಶ್ರೀ

ಹೀಗೆ ಗುರುಲಿಂಗ ಜಂಗಮರನ್ನು ಗೌರವಾದರಗಳಿಂದ ಕಂಡುಕೊಂಡುದನ್ನು ಹಸ್ತ ಪ್ರತಿಯಲ್ಲಿ ದಾಖಲಿಸಲಾಗಿದೆ. ಓಲೆಗರಿ ಸಂಖ್ಯೆ 11ರ ಮುಂಭಾಗದಲ್ಲಿ ಸಾಲು

7ರಲ್ಲಿ ಕಂಡುಬರುವ 'ಗುರುಲಿಂಗ ಜಂಗಮ ಪಾದೋದಕ ಪ್ರಸಾದ ಬೂತಿರುದ್ರಾಕ್ಷ ಮಂತ್ರಾಬ್ಯಷ್ಟಾವರಣ, ಷಡ್ವಿಧ ಪಂಚಾಚಾರ ಪರಾಯಣ ನಿಜಪಾದೋದಕ ಪ್ರಸಾದಲೆಶಕೃತಾರ್ಥಿಕೃತ ಮತಾಂತ್ರರಾಸಕ್ತ ಮಸ್ತರ ಜವಾಬ್ದಿನಿಮುಗ್ನಮದಾಂಧ ಲೋಕ' ಮುಂತಾದ ವಿಚಾರಗಳೂ, ಸಾಲು ಹತ್ತರಲ್ಲಿ ಕಂಡುಬರುವ ಕಾಷಾಯ ವಸ್ತ್ರ ಕಂಥಾ ಕಂಬಳ ದಂಡ ಪಾದಘಂಟಾ ತ್ರಿಪುಂಡ್ರ ರುದ್ರಾಕ್ಷಮಾಲಿಕಾ ಪ್ರಶಸ್ತ ಪುಸ್ತಕ ಹಸ್ತ ವಸ್ತ್ರಾದಿ ಶಿವಲಾಂಛನ ಲಾಂಛ್ವಿತ ದಿವ್ಯ ವಿಗ್ರಹ ಪಂಚಸೂತಕ, ಸಾಲು ಹನ್ನೊಂದರಲ್ಲಿ ಕಂಡುಬರುವ ವಿವರ್ಜಿತ ಪಂಚಾಕ್ಷರೀ ಮಂತ್ರ ರಹಸ್ಯ ಸುಧಾರಸಪಾನ ಸಂಪುಷ್ಟಮಂಗಲಾಂಗ ಸಂಘಟಿತ ಸಜ್ಜಿಕಾ ವಿಬ್ರಾಜಮಾನ ನಾನಾ ವಿಧ ವಿಚಿತ್ರ ತರಾಘಟನಾ ಪಟನ ಬಹುವಿಧ ಪವಾಡ ಪ್ರಕಟೀಬೂತ ಪ್ರಭಾವ ನಿರಂಕಶಸ್ವೆಚ್ಛಾ ವಿಚಾರಲೀಲಾ, (ಸಾಲು ಹನ್ನೆರಡು) ವಿನೋದ ಸಮುಜ್ವಲ ನಂದೀಶ್ವರ ಧ್ವಜ ಪಟಾದಿ ವೀರಶೈವ ಬಿರುದಾಂಕ ಇತ್ಯಾದಿಗಳು ಕೆಳದಿ ನೃಪವಿಜಯದ ಮಾತುಗಳನ್ನು ಪುಷ್ಟೀಕರಿಸುವುದಲ್ಲದೆ ಇದು ಶಿವಶಾಸ್ತ್ರ ಲಿಖಿತ ಆಗಮ ಗ್ರಂಥದ ಓಲೇಗರಿಗಳು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅಲ್ಲದೆ ಇದೇ ಗರಿಯ ಹಿಂಭಾಗದ 7ನೆಯ ಸಾಲಿನಲ್ಲಿ ಕೆಳದಿ ನೃಪಾಲಚಂದ್ರ ಸಕಲ ಮನೋರಥ ಪೂರಣ ಮಹಾಮಹಿಮಾತಿಶಯ ಪ್ರಭಾವ ಮಹಾಜಂಗಮುರೇ ಎಂಬ ಮಾತುಗಳು ಇದು ಕೆಳದಿ ಬಸಪ್ಪ ನಾಯಕನ ಕಾಲದಲ್ಲಿ ರಚಿಸಲ್ಪಟ್ಟಿರುವುದನ್ನು, ಅಂದು ಜಂಗಮವರೇಣ್ಯರಿಗೆ ದೊರೆಯುತ್ತಿದ್ದ ಗೌರವವನ್ನೂ ಸೂಚಿಸುತ್ತದೆ. ಶಿವಶಾಸ್ತ್ರಕ್ಕೆ ಸಂಬಂಧಪಟ್ಟ ವಿಚಾರವನ್ನು ತಿಳಿಸುತ್ತವೆ. ಅಸಮಗ್ರ ಗರಿಗಳು ಆಗಮ ಶಾಸ್ತ್ರಕ್ಕೆ ಸಂಬಂಧಿಸಿದಂಥವೂ ಆಗಿರಬಹುದು.

ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಸುರಕ್ಷಿಸಲ್ಪಟ್ಟಿರುವ ಈ ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕದ ಓಲೆಗಳು ಅಸಮಗ್ರವಾಗಿವೆ. ಸಮಗ್ರ ಆಕರ ಓಲೆಗಳು ದೊರೆತಲ್ಲಿ ಕೆಳದಿ ಅರಸರು ವೀರಶೈವ ಧರ್ಮದ ಅಭಿವೃದ್ಧಿಗೆ ನೀಡಿದ ಪ್ರೋತ್ಸಾಹವನ್ನು ಕುರಿತು ಮುಂದಿನ ಸಂಶೋಧನೆಗೆ ದಾರಿದೀಪವಾಗುತ್ತದೆ.

□

---

ಈ ಪ್ರಬಂಧ ಮಂಡನೆಗೆ ಅವಕಾಶ ಮಾಡಿಕೊಟ್ಟ ಕೆಳದಿ ವಸ್ತು ಸಂಗ್ರಹಾಲಯದ ಅಧ್ಯಕ್ಷರು ಹಾಗೂ ವಿಶ್ವಸ್ತ ಮಂಡಳಿಯ ಸದಸ್ಯರಿಗೆ ಕೃತಜ್ಞನಿದ್ದೇನೆ.

# ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ನಾಡು–ನುಡಿ ಪ್ರಜ್ಞೆ

ಡಾ|| ಪಿ. ವಿ. ನಾರಾಯಣ

'ಕನ್ನಡ' ಶಬ್ದವನ್ನು ಹಿಂದೆ ದೇಶವಾಚಿ ಹಾಗೂ ಭಾಷಾವಾಚಿ ಎರಡೂ ಅರ್ಥಗಳಲ್ಲಿ ಬಳಸಲಾಗುತ್ತಿತ್ತು. ಈಗ ಕನ್ನಡ ಎಂಬುದು ಭಾಷಾವಾಚಿಯಾಗಿ ಹಾಗೂ ಕರ್ನಾಟಕ ದೇಶವಾಚಿಯಾಗಿ ಬಳಕೆಯಾಗುತ್ತಿದೆ. ನಮಗೆ ದೊರಕಿರುವ ಅತ್ಯಂತ ಪ್ರಾಚೀನ ಉಲ್ಲೇಖ 'ಕರ್ನಾಟಕ, ಕನ್ನಡವಲ್ಲ'. ಪ್ರಾಯಶಃ ಕರ್ನಾಟಕ ಕನ್ನಡ ಶಬ್ದದ ಸಂಸ್ಕೃತರೂಪವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕನ್ನಡ ಮೊದಲು ದೇಶವಾಚಿಯಾಗಿಯೇ ಬಳಕೆಗೆ ಬಂದಿರಬೇಕು. ಅನಂತರ ಅಲ್ಲಿನ ಜನ ರೂಢಿಸಿಕೊಂಡ ಭಾಷೆಗೂ ಅದು ಅನ್ವಯಿಸಿರಬೇಕು. ಇದು ಸಹಜವೇ. ಏಕೆಂದರೆ ಮೊದಲು ದೇಶ, ಆಮೇಲೆ ಭಾಷೆ, ಕರ್+ನಾಟಾ+ಅಕ (ಕಪ್ಪುಮಣ್ಣಿನ ಪ್ರದೇಶ) ಅಥವಾ ಕರು+ನಾಡು (ಎತ್ತರದ ಪ್ರದೇಶ) ಎಂಬುದು ಕನ್ನಡ ಪದದ ನಿಷ್ಪತ್ತಿಯೆಂದು ವಿದ್ವಾಂಸರು ವಿವರಿಸುತ್ತಾರೆ. ಹಾಗಾಗಿ ಕನ್ನಡ ಮೊದಲು ದೇಶವಾಚಿ, ಆಮೇಲೆ ಭಾಷಾವಾಚಿ ಎಲ್ಲೆಡೆಯೂ ಇದೇ ಆಗಿದೆ ; ದೇಶದ ಹೆಸರೇ ಭಾಷೆಗೂ ಅನ್ವಯಿಸಿದೆ. ಗ್ರೀಸ್/ಗ್ರೀಕ್ ಫ್ರಾನ್ಸ್/ಫ್ರಾನ್ಸೀ, ಇಂಗ್ಲೆಂಡ್/ಇಂಗ್ಲಿಷ್, ಫಿನ್‌ಲಂಡ್/ಫಿನ್ನಿಷ್ ಇತ್ಯಾದಿ.

ನಮಗೆ ದೊರೆಯುವ ಅತ್ಯಂತ ಪ್ರಾಚೀನ ಉಲ್ಲೇಖ 'ಕನ್ನಡ'ದ ಸಂಸ್ಕೃತರೂಪವಾದ 'ಕರ್ನಾಟಕ' ಮಹಾಭಾರತದಲ್ಲಿ, ಎಂದರೆ ಕ್ರಿ.ಪೂ. ೩–೪ನೇ ಶತಮಾನದಲ್ಲಿ ಅಲ್ಲಿ 'ಕರ್ನಾಟಕ' ಶಬ್ದವು ಇತರ ಅನೇಕ ದೇಶಗಳ ಹೆಸರಿನ ಜೊತೆಗೆ ಉಲ್ಲೇಖಗೊಂಡಿದೆ. ದ್ರಾವಿಡ, ಕೇರಲ, ಮೂಷಿಕಾ ಇತ್ಯಾದಿ. ಅಲ್ಲದೆ ಈಗ ನಾವು ಕನ್ನಡ ಪ್ರದೇಶಗಳೆಂದು ಗುರುತಿಸುವ ವನವಾಸಿಯ (ಬನವಾಸಿ) ಮಹಿಷಿಕ (ಮಹಿಷ ಮಂಡಲ), ಕುಂತಲ-ಇತ್ಯಾದಿ ಪ್ರದೇಶಗಳು ಉಲ್ಲೇಖಗೊಂಡಿವೆ.

ಕನ್ನಡ ಭಾಷೆಯೂ ಕ್ರಿ. ಪೂ. ನಾಲ್ಕನೆಯ ಶತಮಾನದ ಹೊತ್ತಿಗೇ ಜನ ಬಳಕೆಯಲ್ಲಿತ್ತೆಂದು ವಿದ್ವಾಂಸರು ಭಾವಿಸುತ್ತಾರೆ. ಕನ್ನಡಿಗರು ವ್ಯಾಪಾರ ಸಂಬಂಧ ನಿರಿಸಿಕೊಂಡಿದ್ದ ಗ್ರೀಕರ ಮೇಲೆ, ಎಂದರೆ ಆ ಭಾಷೆಯ ಮೇಲೆ ಕನ್ನಡದ ಪ್ರಭಾವವಾಗಿದೆಯೆಂದು ಹೇಳುತ್ತಾರೆ. ಕ್ರಿ. ಪೂ. ಕಾಲದ ಗ್ರೀಕ್, ಪ್ರಹಸನವೊಂದರಲ್ಲಿ

ಕೆಲವು ಕನ್ನಡ ವಾಕ್ಯಗಳನ್ನೂ ಶಬ್ದಗಳನ್ನೂ ಕೆಲವು ವಿದ್ವಾಂಸರು ಗುರುತಿಸುತ್ತಾರೆ. ಹಾಗೆಯೇ ಕ್ರಿಸ್ತಶಕದ ಪ್ರಾರಂಭದಲ್ಲಿ ರಚಿತವಾದ 'ಗಾಥಾಸಪ್ತಶತೀ' ಎಂಬ ಪ್ರಾಕೃತ ಭಾಷೆಯ ಕಾವ್ಯದಲ್ಲಿ ಹಲವಾರು ಕನ್ನಡ ಶಬ್ದಗಳಿವೆಯಂತೆ.

ಕನ್ನಡ ನಾಡು ಅಥವಾ ಕರ್ನಾಟಕ ಎಂದರೆ ಈಗ ನಮಗೆ ಇಪ್ಪತ್ತು ಜಿಲ್ಲೆಗಳ ಭೂ ಪ್ರದೇಶವನ್ನು ಸೂಚಿಸುವ ಭೂಪಟ ನೆನಪಿಗೆ ಬರುತ್ತದೆ. ಎಂದರೆ ಕರ್ನಾಟಕವು ಭೂಪಟದಿಂದಾಗಿ ನಮಗೆ ಮೂರ್ತವಾಗುತ್ತದೆ. ಆದರೆ ಅದರಲ್ಲಿ ಎಷ್ಟೊಂದು ವೈವಿಧ್ಯಪೂರ್ಣವಾದ ಭಾಗಗಳಿವೆ ! ಇದು ನಾಡು ಸುತ್ತಿದವರಿಗೆ ಅನುಭವಕ್ಕೆ ಬಂದಿರುತ್ತದೆ. ಈಗ ನಾವು ಕರ್ನಾಟಕವನ್ನು ಮೂರ್ತವಾದ ಭೂಪಟವಾಗಿ ಕಾಣಲು ಸಾಧ್ಯವಾಗಿರುವುದು ಕನ್ನಡಿಗರೆಲ್ಲ (ತಾತ್ವಿಕವಾದ ನೆಲೆಯಲ್ಲಿ) ಒಂದೇ ರಾಜ್ಯಾಡಳಿತದ ವ್ಯಾಪ್ತಿಗೆ ಬಂದಿರುವ ಕಾರಣದಿಂದ. ಆದರೆ ಆಧುನಿಕ ಪೂರ್ವಕಾಲದಲ್ಲಿ ಕರ್ನಾಟಕ ಅಥವಾ ಕನ್ನಡ ನಾಡು ಎಂದರೆ ಯಾವುದಾಗಿತ್ತು ಎಂಬ ಪ್ರಶ್ನೆ ಏಳುತ್ತದೆ.

ಈಚಿನವರೆಗೂ ಕರ್ನಾಟಕವನ್ನು ಛಪ್ಪನ್ನೈವತ್ತಾರು, ದೇಶಗಳಲ್ಲಿ ಒಂದೆಂದು ಭಾವಿಸಲಾಗಿತ್ತು. ಆದರೆ ಛಪ್ಪನ್ನೈವತ್ತಾರು ದೇಶಗಳ ಕಲ್ಪನೆಯೂ ತುಂಬ ಹಿಂದಿನದಾಗಿರುವಂತೆ ತೋರುವುದಿಲ್ಲ. ನಮ್ಮ ಕಾವ್ಯನಾಟಕ ಶಾಸನಗಳಲ್ಲಿ ಇವುಗಳ ಪ್ರಸ್ತಾಪ ಬರುತ್ತದೆ. ಕಾಲ ಕಾಲಕ್ಕೆ ಈ ಐವತ್ತಾರು ದೇಶಗಳ ಪಟ್ಟಿ ವ್ಯತ್ಯಾಸಗೊಂಡಿದೆ. ಅಲ್ಲ, ಆಗಲೇ ಮಹಾಭಾರತದ ಉಲ್ಲೇಖ ನೋಡಿದಾಗ ಹೇಳಿದಂತೆ, 'ಕರ್ನಾಟಕ'ದ ಜೊತೆಗೆ ಈ ಇತರ ಹಲವಾರು 'ಕನ್ನಡ' ಪ್ರದೇಶಗಳ ಹೆಸರೂ ಕಾಣಿಸುತ್ತವೆ. ಎಲ್ಲ ಪಟ್ಟಿಗಳಲ್ಲಿ 'ಕರ್ನಾಟಕ'ದ ಹೆಸರು ಇರುತ್ತದೆ. ಆದರೆ ಅದರ ಭೌಗೋಳಿಕ ವ್ಯಾಪ್ತಿ ಎಂಥದು ಎಂಬುದು ಎಲ್ಲೂ ಸ್ಪಷ್ಟವಾಗುವುದಿಲ್ಲ. ಇದು ಕನ್ನಡ ರಾಜರು ಆಳಿದ ಭಾಗವಾಗಿತ್ತು ಎಂದು ಹೇಳಲೂ ಬರುವುದಿಲ್ಲ. ಕನ್ನಡ ಪ್ರದೇಶದ ಬೇರೆ ಬೇರೆ ತುಣುಕುಗಳನ್ನು ಅನೇಕ ರಾಜರು ಒಂದೇ ಕಾಲದಲ್ಲಿ ಆಳುತ್ತಿದ್ದರು. ಅಲ್ಲದೆ, ಕನ್ನಡದ ಕೆಲವು ರಾಜರು ಆಳುತ್ತಿದ್ದ ಸಾಮ್ರಾಜ್ಯವು ಕನ್ನಡೇತರ ಪ್ರದೇಶಗಳನ್ನೂ ಕೆಲವೇಳೆ ಒಳಗೊಂಡಿರುತ್ತಿತ್ತು. ಎಂದರೆ ಕನ್ನಡ ಮಾತನಾಡುವ ಜನಗಳೆಲ್ಲ ಸೇರಿದ ಒಂದೇ ರಾಜಕೀಯ ಘಟಕ 1956ರ ವರೆಗೆ ಇರಲೇ ಇಲ್ಲ ! ಆದರೂ ಕನ್ನಡನಾಡು ಎಂಬ ಪರಿಕಲ್ಪನೆ ಇತ್ತು, ಗಾಢವಾಗಿತ್ತು. ಅವನ್ನು ಕುರಿತು ಬರೆದವರು ಪ್ರೀತಿಯಿಂದ ಆ ಕೆಲಸ ಮಾಡುತ್ತಾರೆ.

ಆಗಲೇ ಗಮನಿಸಿದಂತೆ ಅತ್ಯಂತ ಪ್ರಾಚೀನವಾದ 'ಕರ್ನಾಟಕ' ಉಲ್ಲೇಖದ ಆಕರವೆಂದರೆ ಮಹಾಭಾರತ. ಅಲ್ಲಿಯೇ ಆ ಶಬ್ದದೊಡನೆ ಇತರ ದೇಶಗಳ ಹೆಸರುಗಳೂ

ಇವೆ. ಕನ್ನಡ ಪ್ರದೇಶಗಳೂ ಬೇರೆ ಇವೆ. ಕನ್ನಡದ ಅತ್ಯಂತ ಪ್ರಾಚೀನ ಗ್ರಂಥ ವಾದ ಕ್ರಿ.ಶ. 850ರ ಕವಿರಾಜಮಾರ್ಗದಲ್ಲಿ ಕನ್ನಡನಾಡು, ಕನ್ನಡ ನುಡಿ, ಕನ್ನಡ ಜನರ ಬಗ್ಗೆ ಪ್ರೀತಿ ಪುರಸ್ಸರವಾದ ವಿವರಣೆಗಳಿವೆ. ಬಹು ಪ್ರಖ್ಯಾತವಾದ ಅಲ್ಲಿನ ಪದ್ಯ ವೊಂದು ಕನ್ನಡ ನಾಡಿನ ವಿಸ್ತಾರವನ್ನೂ ವೈಶಿಷ್ಟ್ಯವನ್ನೂ ಪ್ರಸ್ತಾಪಿಸುತ್ತದೆ. "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ ವಿಲೀನವಿಶದ ವಿಷಯವಿಶೇಷಂ" ದಕ್ಷಿಣದ ಕಾವೇರಿ ಉತ್ತರದ ಗೋದಾವರಿ ನದಿಗಳ ನಡುವಣ ಭೂಪ್ರದೇಶವನ್ನೆಲ್ಲ ಕವಿರಾಜ ಮಾರ್ಗಕಾರ ಕನ್ನಡ ನಾಡು ಎನ್ನುತ್ತಿದ್ದಾನೆ. ಇದರ ಸ್ಪಷ್ಟ ಅರ್ಥ ನನಗೆ ಆಗಲು ಸಾಧ್ಯವಿಲ್ಲ. ಏಕೆಂದರೆ ಈ ಪ್ರದೇಶದಲ್ಲಿ ಈಗಿರುವುದು ಮಾತ್ರವಲ್ಲ. ಹಿಂದೆಯೂ ಬೇರೆ ಭಾಷೆಗಳು ಬಳಕೆಯಲ್ಲಿದ್ದದ್ದು ಸ್ಪಷ್ಟ, ಅವು ತೆಲುಗು, ತಮಿಳುಗಳಂತಹ ಭಾಷೆಗಳು. ಪ್ರಾಯಶಃ ಕನ್ನಡ ನಾಡು ಎಂದರೆ ಕನ್ನಡ ಭಾಷೆ ಮಾತಾಡುವ ಜನರು—ಈ ಎರಡು ನದಿಗಳ ನಡುವಣ ವಿಸ್ತಾರ ಪ್ರದೇಶದಲ್ಲಿ ವ್ಯಾಪಿಸಿದ್ದಾರೆ ಎಂಬುದು (ಇತರ ಭಾಷೆಗಳ ಜನರಲ್ಲದೆ) ಕವಿರಾಜಮಾರ್ಗಕಾರನ ಅಭಿಪ್ರಾಯವಿರ ಬಹುದು. ಅಲ್ಲದೆ ಈ ವಿವರಣೆ ಕನ್ನಡಿಗರು ವಾಸಿಸುತ್ತಿದ್ದ ಒಂದು ರಾಜಕೀಯ ಘಟಕ ಎಂಬುದನ್ನಂತೂ ಸೂಚಿಸುತ್ತಿಲ್ಲ. ಏಕೆಂದರೆ ಆ ಕಾಲದಲ್ಲಿ ಕನ್ನಡದ ಜನರಿದ್ದ ಪ್ರದೇಶ ವೆಲ್ಲ ಒಂದು ರಾಜಕೀಯ ವ್ಯಾಪ್ತಿಗೂ ಬಂದಿರಲಿಲ್ಲ. ಈ ಗ್ರಂಥ ರಚಿತವಾದ ಕಾಲ ದಲ್ಲಿದ್ದ ದೊರೆ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಚಕ್ರಾಧಿಪತ್ಯವು ಈಗಿನ ಹಳೆಯ ಮೈಸೂರಿನ ಪ್ರಾಂತ್ಯವನ್ನು ಒಳಗೊಂಡಿರಲಿಲ್ಲ. ಹಾಗೆಯೇ ತುಂಗಭದ್ರಾ ನದಿಯ ಪ್ರದೇಶದಿಂದ ಬರೋಡೆಯವರೆಗಿನ ಪಶ್ಚಿಮ ಭೂಭಾಗವನ್ನೂ ವ್ಯಾಪಿಸಿತ್ತು. ಹಾಗಾಗಿ ಕವಿರಾಜಮಾರ್ಗಕಾರನು ಹೇಳುವ ಕನ್ನಡ ನಾಡಿನ ವ್ಯಾಪ್ತಿಗೂ, ಆಗ ಪ್ರಚಲಿತವಿದ್ದ ಕನ್ನಡ ದೊರೆಯ ರಾಜ್ಯವ್ಯಾಪ್ತಿಗೂ ಸಂಬಂಧವಿಲ್ಲ.

ಅಂತೆಯೇ ಹದಿಮೂರನೆಯ ಶತಮಾನದಲ್ಲಿದ್ದ ಕನ್ನಡ ಕವಿ ಆಂಡಯ್ಯನೆಂಬ ವನು ಪ್ರಾಯಶಃ ಕದಂಬ ಕಾಮದೇವನೆಂಬ ರಾಜನ ಕಾಲದಲ್ಲಿದ್ದವನು. ಅವನು ತನ್ನ 'ಕಬ್ಬಿಗರ ಕಾವ' ಎಂಬ ಕಾವ್ಯದಲ್ಲಿ "ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆಲ್ಲೆಲರಿಂ ಪೂತಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ" ಎಂದು ಕನ್ನಡ ನಾಡಿನ ಪ್ರಕೃತಿಸೌಂದರ್ಯವನ್ನೂ ಸಮೃದ್ಧಿಯನ್ನೂ ವರ್ಣಿಸಿದ್ದಾನೆ. ಆದರೆ ಈ ವರ್ಣನೆ ಸಮಗ್ರ (ಈಗಿನ) ಕನ್ನಡನಾಡಿಗೆ ಅನ್ವಯಿಸಲಾಗದು. ಏಕೆಂದರೆ ಮಳೆ ಕೊರತೆಯಿರುವ, ನೀರಿನ ಅಭಾವವಿರುವ ಪ್ರದೇಶಗಳು ನಮ್ಮ ನಾಡಿನಲ್ಲಿ ಸಾಕಷ್ಟಿವೆ; ಮೆಲ್ಲೆಲರು ಬೀಸದ ಪ್ರಖರತಾಪದ ಪ್ರದೇಶಗಳಿವೆ. ಕನ್ನಡ ನಾಡಿನ ಸೌಂದರ್ಯ ವನ್ನು ಈ ರೀತಿ ವರ್ಣಿಸಿದ ಕವಿ ಯಾವ ಭಾಗದವನೋ ತಿಳಿಯದು. ಆ ಕಾಲದಲ್ಲಿ ಕನ್ನಡದ ಪ್ರಸಿದ್ಧ ರಾಜರೆಂದರೆ ಹೊಯ್ಸಳರು. ಅವರ ರಾಜ್ಯವು ಕಾವೇರಿ ನದಿಯ

ಪ್ರದೇಶದಿಂದ ಉತ್ತರಕ್ಕೆ ಪಟ್ಟದಕಲ್ಲಿನವರೆಗೆ ಇತ್ತು ; ಆದರೆ ಕನ್ನಡನಾಡಿನ ಕರಾವಳಿಯಾಗಲೀ, ಬಾದಾಮಿಯಿಂದ ಉತ್ತರ ಭಾಗದ ಕನ್ನಡ ಪ್ರದೇಶ ವಾಗಲೀ ಹೊಯ್ಸಳ ಸಾಮ್ರಾಜ್ಯದ ಭಾಗವಾಗಿರಲಿಲ್ಲ. ಆ ಭಾಗದಲ್ಲಿ ಯಾದವರು ಆಳುತ್ತಿದ್ದರು.

ಮುಂದೆ ಬಂದರೆ ವಿಜಯನಗರವನ್ನು "ಕರ್ನಾಟಕ ಸಾಮ್ರಾಜ್ಯ" ವೆಂದೇ ಕರೆಯಲಾಗುತ್ತಿತ್ತು. ಅದರ ಸಂಸ್ಥಾಪನೆಗೆ ಕಾರಣಕರ್ತರೆನ್ನಲಾದ ವಿದ್ಯಾರಣ್ಯರು "ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ" ಎಂಬ ಕೀರ್ತಿಗೆ ಪಾತ್ರರಾದವರು. ಆದರೆ ವಿಜಯನಗರದ ವ್ಯಾಪ್ತಿಯಲ್ಲಿ ಕನ್ನಡದ ಭಾಗಗಳಾದ ಕರಾವಳಿ ಪ್ರದೇಶ, ಕಲ್ಬುರ್ಗಿ, ರಾಯಚೂರು, ಬೀದರ್ ಜಿಲ್ಲೆಗಳು ಸೇರಿರಲಿಲ್ಲ. ಆದರೂ ಆ ಸಾಮ್ರಾಜ್ಯ "ಕರ್ನಾಟಕ ಸಾಮ್ರಾಜ್ಯ" ವಾಗಿತ್ತು. ಈ ಸಾಮ್ರಾಜ್ಯದ ಒಬ್ಬ ದೊರೆಯಾದ ಪ್ರೌಢದೇವರಾಯನನ್ನು ಕಾಣಲು ಆಂಧ್ರದ ಕವಿ ಶ್ರೀನಾಥ (ಕ್ರಿ.ಶ. 14ನೇ ಶತಮಾನ) ಒಮ್ಮೆ ಬಂದನಂತೆ. ಆತನು ಗುಂಟೂರಿನ ಕಡೆಯವನು, ರೆಡ್ಡಿ ರಾಜನ ಆಳಿಕೆಯಲ್ಲಿದ್ದ ವನು. ಎಷ್ಟು ದಿನ ಆದರೂ ಆತನಿಗೆ ವಿಜಯನಗರದ ಚಕ್ರವರ್ತಿಯ ದರ್ಶನ ಸಿಗಲಿಲ್ಲ. ಈ ಕಾಯುವಿಕೆಯ ಕಾಲದಲ್ಲಿ ಅವನು ಆಹಾರ, ವೇಷಭೂಷಣಗಳ ಕಾರಣದಿಂದ ತೊಂದರೆಗೊಳಗಾದ. ಆಗ ಆತನು ತನ್ನ ಕಷ್ಟಗಳನ್ನೆಲ್ಲ ವಿವರಿಸುವ ಒಂದು ಚಾಟು ಪದ್ಯವನ್ನು ಹೇಳಿದನಂತೆ. ಕಷ್ಟ ನಿರೂಪಣೆಯ ಕೊನೆಗೆ ಆತ ಉದ್ಗರಿಸಿದ್ದು ಹೀಗೆ "ತಲ್ಲೀ ಕನ್ನಡರಾಜ್ಯಲಕ್ಷ್ಮೀ ದಯಲೇದಾನೇನು ಶ್ರೀನಾಥುಡನ್" (ತಾಯಿ, ಕನ್ನಡ ರಾಜ್ಯಲಕ್ಷ್ಮಿಯೆ, ಈ ಶ್ರೀನಾಥನ ಮೇಲೆ ನಿನಗೆ ದಯೆ ಬಾರದೆ ?) * ಈ ಪದ್ಯವು ಈ ಶ್ರೀನಾಥನದೇ ಎನ್ನಲು ಖಚಿತ ಆಧಾರಗಳಿಲ್ಲ. ಆದರೆ ಯಾವ ತೆಲುಗಿನವನೇ ಹೇಳಿರಲಿ ಅವನು ಸಂಬೋಧಿಸಿದ 'ಕನ್ನಡ ರಾಜ್ಯಲಕ್ಷ್ಮಿ'ಯ ಪರಿಕಲ್ಪನೆಯು ದೃಷ್ಟಿಯಿಂದ ಇದು ಮುಖ್ಯವಾಗಿದೆ.

ಈ ಮೇಲೆ ಹೇಳಿದ ನಿದರ್ಶನಗಳಿಂದ ನಮಗೆ ತಿಳಿಯುವುದಿಷ್ಟು—ಈ ಕವಿಗಳಿಗೆ ತಮ್ಮ ಕಾಲದ ರಾಜಕೀಯ ಪರಿಸ್ಥಿತಿಯ ಅರಿವಿದ್ದರೂ ಅವರು ಕನ್ನಡ ರಾಜ್ಯವನ್ನು ಕುರಿತು ಹೇಳುವಾಗ, ರಾಜಕೀಯ ಘಟಕದ ಹೊರತಾದ ಪರಿಕಲ್ಪನೆ ಅವರ ಮನಸ್ಸಿನಲ್ಲಿದೆ. ಕನ್ನಡ ನಾಡು ಆ ಕವಿಗಳಿಗೆ ರಾಜಕೀಯ ಭೂಭಾಗವಲ್ಲ. ಹಾಗೆಯೇ ಕನ್ನಡ ಭಾಷೆಯಾಡುವ ಜನಗಳಿದ್ದ ಯಾವ ಭೂಭಾಗವನ್ನೇ ಆಳಲಿ, ತಾವು ಆಳುವ ರಾಜ್ಯ ವನ್ನು 'ಕರ್ನಾಟಕ' ಎಂದು ರಾಜರುಗಳು ಕರೆದುಕೊಳ್ಳುತ್ತಿದ್ದರು. ವಿಜಯನಗರ

---

* ಆತನ ಹೆಸರಿಗೆ ಅಂಟಿಸಲಾದ ಇನ್ನೊಂದು ಚಾಟು ಪದ್ಯವು "ಛಪ್ಪರೀಮನು ಚುಂಡ್ರು, ನಾಕೇಮಿ ಕೊರತ, ನಾ ಕವಿತ್ವಂಬು ನಿಜಮು ಕರ್ನಾಟಭಾಷಾ" ಎನ್ನುತ್ತದೆ. (ಯಾರು ಏನೇ ಅನ್ನಲಿ ನನಗೇನು ಕೊರತೆ ನನ್ನ ಕವಿತ್ವದಲ್ಲಿ ನಿಜವಾದ ಕರ್ನಾಟಕ ಭಾಷೆ)

ವನ್ನು "ಕರ್ನಾಟಕ ಸಾಮ್ರಾಜ್ಯ"ವೆಂದು ಕರೆಯುತ್ತಿದ್ದುದನ್ನೂ, ವಿದ್ಯಾರಣ್ಯರು "ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ"ರೆಂದು ಹೆಸರಾಗಿದ್ದುದನ್ನೂ ಹಿಂದೆಯೇ ಉಲ್ಲೇಖಿಸಿದ್ದೇವೆ. ಮೈಸೂರು ಅರಸರು ತಮ್ಮನ್ನು "ಕರ್ನಾಟಕ ರತ್ನ ಸಿಂಹಾಸನಾಧೀಶ್ವರ"ರೆಂದು ಕರೆದುಕೊಂಡಿದ್ದಾರೆ. ಒಡೆಯರ್ ವಂಶದ ರಾಜರು ಆಳಿದ ಭೂಭಾಗವನ್ನು ಆ ಕಾಲದ ಅನೇಕ ಕವಿಗಳು 'ಕರ್ನಾಟಕ'ವೆಂದೇ ಕರೆಯುತ್ತಾರೆ.

ಎಂದರೆ ಆಧುನಿಕ ಪೂರ್ವಕಾಲದಲ್ಲಿ ಕರ್ನಾಟಕವೆಂಬುದು ಒಂದು ಭಾಷಿಕ-ಸಾಂಸ್ಕೃತಿಕ ಪರಿಕಲ್ಪನೆಯಾಗಿತ್ತು, ರಾಜಕೀಯ ವಾಸ್ತವಕ್ಕೆ ಅದು ದೂರವಾಗಿತ್ತು 'ಕರ್ನಾಟಕ' ಎಂಬುದು ಕನ್ನಡ ಎಂಬ ಪದದ ಸಂಸ್ಕೃತ ರೂಪವಾದ್ದರಿಂದ ಅದು ಕನ್ನಡಿಗರು ವಾಸಿಸುವ ಭಾಗ ಎಂಬ ಅರ್ಥವನ್ನು ಪಡೆದಿದ್ದರೂ, ಅದು ನಿರ್ದಿಷ್ಟ ರಾಜಕೀಯ ಭೂಭಾಗಕ್ಕೆ ಅನ್ವಯಿಸುತ್ತಿರಲಿಲ್ಲ. ರಾಜಕೀಯ ಬೇರೆ, ಕರ್ನಾಟಕವು ಬೇರೆ. ಎಂದರೆ 'ಕರ್ನಾಟಕ' ಎಂಬುದು ಒಂದು ಅಮೂರ್ತ ಅನುಭವಸಂಬಂಧೀ ಪರಿಕಲ್ಪನೆಯಾಗಿತ್ತು. ಯಾವ ರಾಜನ ಆಳಿಕೆಯಲ್ಲಿ ತಾನಿದ್ದರೇನು ತಾನು ಕನ್ನಡ ನಾಡವನು ಎಂಬ ಪ್ರೀತಿ ಇವರೆಲ್ಲರಲ್ಲಿ ಕಾಣುತ್ತದೆ. "ಎಲ್ಲಾದರೂ ಇರು ಎಂತಾದರು ಇರು; ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಕುವೆಂಪು ಅವರ ಹಾಡೂ ನಮ್ಮೆಲ್ಲರ ಹೃದಯಸ್ಥ ಕರ್ನಾಟಕದ ಕಲ್ಪನೆಗೆ ಮಾತು ಕೊಟ್ಟಂತಿದೆ. "ನೀ ಮೆಟ್ಟುವ ನೆಲ ಅದೆ ಕರ್ನಾಟಕ, ನೀನೇರುವ ಮಲೆ ಸಹ್ಯಾದ್ರಿ, ನೀ ಮುಟ್ಟುವ ಮರ ಶ್ರೀಗಂಧದ ಮರ ನೀ ಕುಡಿಯುವ ನೀರ್ ಕಾವೇರಿ" ಎಂಬ ಮಾತುಗಳು ಕನ್ನಡತನ-ಕರ್ನಾಟಕತ್ವಗಳು ಅನುಭವಕ್ಕೆ ಸಂಬಂಧಿಸಿದ ವಿಷಯ ಎಂಬ ಅಂಶವನ್ನು ಮನದಟ್ಟು ಮಾಡುತ್ತವೆ.

ಕನ್ನಡಿಗರು ತಮ್ಮ ಭಾಷೆಯಲ್ಲಿ ಬರವಣಿಗೆಯನ್ನು ಪ್ರಾರಂಭ ಮಾಡಿದ್ದೇ ತಮ್ಮತನದ ಪ್ರಜ್ಞೆ ಜಾಗೃತಗೊಂಡ ಕುರುಹು. ಸಂಸ್ಕೃತ-ಪ್ರಾಕೃತಗಳಂತಹ ಧಾರ್ಮಿಕ ಸಾಹಿತ್ಯವಿದ್ದ ಭಾಷೆಗಳನ್ನು ತೊರೆದು ಆಡುನುಡಿಯನ್ನು ಬರಹಕ್ಕೆ ಬಳಸಿದ್ದು ಕನ್ನಡ ಭಾಷೆಯ ಪ್ರಜ್ಞೆ ಎಚ್ಚರಗೊಂಡು ಕಾರ್ಯಪ್ರವೃತ್ತವಾದ ಮೊದಲ ನಿರ್ಣಾಯಕ ಹಂತ. ಶ್ರೀವಿಜಯ ತನ್ನ 'ಕವಿರಾಜ ಮಾರ್ಗ'ದಲ್ಲಿ ನಾಡು-ನುಡಿಗಳ ಬಗೆಗಿನ ಎಚ್ಚರವನು ಬಹು ತೀವ್ರವಾದ ರೀತಿಯಲ್ಲಿ, ಮಾತುಗಳಲ್ಲಿ ವ್ಯಕ್ತಪಡಿಸುತ್ತಾನೆ. ಜನರ ಸ್ವಭಾವವಾದ ಕಾವ್ಯರಚನಾಶಕ್ತಿಯನ್ನು ಹೊಗಳುತ್ತಾನೆ. ಅವನ ಕಾಲವಾದ ಒಂಬತ್ತನೆಯ ಶತಮಾನದ ಹೊತ್ತಿಗೆ ಕನ್ನಡ ಭಾಷೆ ಹಲವಾರು ಶತಮಾನಗಳ ಕಾಲ ಕಾವ್ಯದಲ್ಲಿ ಬಳಕೆಗೊಂಡು ತನ್ನ ಹಸಿತವನ್ನು ಕಳೆದುಕೊಂಡಿತ್ತೇನೋ; ಅದ್ದರಿಂದಲೇ ಕಾವ್ಯರಚನೆಯ

'ನೀತಿ ನಿರಂತರ ಕ್ರಮ'ವನ್ನು ವಿವರಿಸುವಾಗ ಕವಿರಾಜಮಾರ್ಗಕಾರ ಮಿಕ್ಕ ಅಂಶಗಳೊಡನೆ "ಒಂದೆ ನಾಟ್ಟುಡಿಯ ಬೆಡಂಗೆ ಕನ್ನಡದ ವಿಕಟಾಕ್ಷರಂಗಳೊಳ್ ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ" ಭಾಷೆಯ ಬಳಕೆಯಿರಬೇಕೆಂದು ಒತ್ತಿ ಹೇಳುತ್ತಾನೆ (ಕವಿರಾಜಮಾರ್ಗ 1. ೧೪೯). 'ನಾಟ್ಟುಡಿ' ಪ್ರಾಯಶಃ ದೇಸಿ ; ದೇಸಿ ಎಂದರೆ ಜನಪರತೆ. ಹಾಗಾಗಿ ಶಿಷ್ಟ ಕಾವ್ಯವು ಜನಪರವಾಗಬೇಕಾದಾಗ ಜಾನಪದ ಸತ್ವವನ್ನು ಒಳಗೊಳ್ಳಬೇಕಾದ ರೀತಿಯನ್ನಿದು ಪ್ರಾಯಶಃ ಸೂಚಿಸುತ್ತದೆ. ಪಂಪನಂತೂ ಈ 'ದೇಸಿಯ' ಬಗ್ಗೆ ಹಲವೆಡೆ ಪ್ರಸ್ತಾಪಿಸುತ್ತಾನೆ. ಕಾವ್ಯವು ಸುಗ್ಗಿಯ ಮಾವಿನ ಮರದಂತೆ ಮನೋಹರವಾಗಬೇಕಾದರೆ "ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು" ಎನ್ನುತ್ತಾನೆ. (ವಿಕ್ರಮಾರ್ಜುನ ವಿಜಯ I. 8),* ತನ್ನ ಭಾರತ ಕಾವ್ಯವು ಮುನ್ನಿನ ಕಾವ್ಯಗಳನ್ನೆಲ್ಲ ಇಕ್ಕಿ ಮೆಟ್ಟಲು ಕಾರಣ, ಇತರ ಅಂಶಗಳೊಂದಿಗೆ, ಅಲ್ಲಿರುವ 'ಕೃತ ದೇಸಿ' ಎನ್ನುತ್ತಾನೆ (ಅದೇ : xiv–೫೯). ಅಂತೆಯೇ ತಾನು ನಾಡೊವಜನಾದುದು ತನ್ನ ಕಾವ್ಯದಲ್ಲಿ "ಉಣ್ಮಿ ಪೊಣ್ಮುವ ದೇಸಿಗಳಿಂದ" ಎಂದೂ ಹೇಳಿಕೊಳ್ಳುತ್ತಾನೆ (xiv. ೭೨). ಪಂಪನ ಈ 'ದೇಸಿ' ಪರವಾದ ನಿಲವು ಅವನ ಸಮಸ್ತ ಭಾರತವು ಕನ್ನಡತನದಿಂದ ತುಂಬಿರುವಂತೆ ಮಾಡಿದೆ. *

ಮುಂದಿನ ಕನ್ನಡ ಚಂಪೂ ಕವಿಗಳು ಈ 'ದೇಸಿ'ಯಿಂದ ದೂರವಾದರೂ ಪಂಪನ ವೈಶಿಷ್ಟ್ಯವೆಂದರೆ ಅವನ 'ದೇಸಿ' ಎಂದು ಅನೇಕ ಕವಿಗಳು ಹೊಗಳುತ್ತಾರೆ. ನಯಸೇನ (ಕ್ರಿ. ಶ. ೧೧೧೨) ಭಾಷೆಯ ಸೊಗಡನ್ನು ಮತ್ತೆ ತನ್ನ ಕಾವ್ಯಗಳಲ್ಲಿ ತರಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದ ಚಂಪೂ ಕವಿ. ಅವನು ಕನ್ನಡ ಕಾವ್ಯಗಳಲ್ಲಿ ಸಂಸ್ಕೃತ ಮೇಲುಗೈಯಾಗುವುದನ್ನು ಗಟ್ಟಿಯಾಗಿ ಪ್ರತಿಭಟಿಸಿದ ಮೊದಲ ಕವಿ. ಹೊಸಗನ್ನಡದಲ್ಲಿ ಕಾವ್ಯ ಬರೆಯ ಹೊರಟು 'ಕನ್ನಡಮಂ ಚಿತಿಂಸಿ ಕೊಡಲಾಱದೆ, ಅಕ್ಕಟ ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ' ಎಂದು ಆತ ಅಣಕವಾಡುತ್ತಾನೆ (ಧರ್ಮಾಮೃತ I–೪೧). ಇಲ್ಲಿ ಕನ್ನಡದಲ್ಲಿ ಚಿಂತಿಸಿ ಸಂಸ್ಕೃತ ಭೂಯಿಷ್ಠ ಶೈಲಿಯನ್ನು ಬಳಸುವವನ ವಿಡಂಬನೆ ಇದ್ದಂತಿದೆ. ಆಲೋಚನೆ ಒಂದು ಭಾಷೆಯಲ್ಲಿ, ಶೈಲಿ ಇನ್ನೊಂದು ಭಾಷೆಯ ಮೇಲೆ ವಾಲಿರುವುದರ 'ಇಬ್ಬೋಡು' ಅವನ ಮನಸ್ಸಿನಲ್ಲಿರಬೇಕು. ಹಾಗೆಯೇ ಕನ್ನಡದಲ್ಲಿ ಚಿಂತಿಸಿದರೂ 'ಮಿಸುಕದ ಸಕ್ಕದ ಮನಿಕ್ಕುವ' ಕವಿಯ ಬಗ್ಗೆ ಅವನ ಆಕ್ರೋಶವಿದೆ. ಸಂಸ್ಕೃತ 'ಮಿಸುಕದ'–ಎಂದರೇನು? ಪ್ರಾಯಶಃ ಅದು ಜನನುಡಿಯಲ್ಲದ್ದರಿಂದ ಜನರ ಭಾವನೆಗಳಿಗೆ ಸ್ಪಂದಿಸಲಾರದ್ದು.

* ಈ ಪದ್ಯದ ವಿವರಣೆಗೆ, ಪಾಠಾಂತರ ನಿರ್ಧಾರದ ಚರ್ಚೆಗೆ ನೋಡಿ : ಟಿ.ವಿ. ನಾರಾಯಣ 'ಕನ್ನಡದಲ್ಲಿ ಚಂಪೂ' ಕೆಲವು ಚಿಂತನೆಗಳು (ಕರ್ನಾಟಕ ಲೋಚನ vi. 1 : ಪು ೫)

ಪಂಪನ ದೇಸಿಯ ಸ್ವರೂಪ ಚರ್ಚೆಗೆ ನೋಡಿ : ಮೇಲಿನ ಲೇಖನ ಪು ೫–೯

ಎಂಬುದು ಅವನ ಭಾವನೆಯಾಗಿರಬೇಕು. ಜನಬಳಕೆಯ ಭಾಷೆ ಸದಾ ಬದಲಾಯಿಸುವಂತಹುದು, ಧ್ವನಿ ಶಕ್ತಿಯನ್ನು ಪಡೆಯುವಂತಹುದು. ಹಾಗಾಗಿ ಜನಭಾಷೆಯಾದ ಕನ್ನಡದಲ್ಲಿ ಚಿಂತಿಸಿ, ಜನದೂರವಾದ ಸಂಸ್ಕೃತದಿಂದ ಕಾವ್ಯಭಾಷೆಯು ಕೂಡಿರುವುದರ ಅಸಾಮಂಜಸ್ಯ ನಯಸೇನನ ಗಮನ ಸೆಳೆದಿದೆ. ಅದಕ್ಕೆ ಅನುಗುಣವಾಗಿಯೇ ಆ ಮುಂದಿನ ಪದ್ಯದಲ್ಲಿಯೇ ಅವನು ಕನ್ನಡದಲ್ಲಿ ಸಂಸ್ಕೃತ ಮಾತುಗಳನ್ನು ಬೆರಸುವುದನ್ನು ತುಪ್ಪ-ಎಣ್ಣೆಗಳನ್ನು ಸೇರಿಸುವುದಕ್ಕೆ ಹೋಲಿಸುತ್ತಾನೆ. ಅವನ ದೃಷ್ಟಿಯಲ್ಲಿ ಕನ್ನಡ ಘೃತ, ಸಂಸ್ಕೃತ ತೈಲ !

ಚಂಪೂ ಪರಂಪರೆಯಲ್ಲಿ ಕನ್ನಡದ ಬಗ್ಗೆ ಪ್ರಜ್ಞಾಪೂರ್ವಕವಾಗಿ ವಾದಮಾಡಿದವನೆಂದರೆ ಹದಿಮೂರನೆಯ ಶತಮಾನದ ಆಂಡಯ್ಯ (ಕ್ರಿ. ಶ. ೧೨೩೫). ಸಂಸ್ಕೃತವನ್ನು ಬೆರಸದೆ ಕನ್ನಡದಲ್ಲಿ ಕಾವ್ಯವನ್ನು ಬರೆಯಲು ಸಾಧ್ಯವಿಲ್ಲ ಎಂದು ಭಾವಿಸಿದ್ದ ಹಿಂದಿನ ಕವಿಗಳನ್ನು ಅವನು ತನ್ನ 'ಕಬ್ಬಿಗರ ಕಾವ'ದಲ್ಲಿ ತರಾಟೆಗೆ ತೆಗೆದುಕೊಂಡಿದ್ದಾನೆ. ಅಲ್ಲದೆ ಕಾವ್ಯಭಾಷೆಯು 'ಮಾತನಾಡಿದವೊಲಂದಮನಾಳ್ದಿರ' ಬೇಕೆಂದು ಪ್ರತಿಪಾದಿಸುತ್ತಾನೆ. ತನ್ನ ಕಾವ್ಯವು 'ದೇಸಿಯ ಗೊತ್ತು' 'ಜಾಣ್ಣುಡಿಯ ತಾಯ್ಮನೆ' ಎಂದು ಹೇಳಿಕೊಳ್ಳುತ್ತಾನೆ. "ಕನ್ನಡದೊಳ್ಪಿನ ನುಡಿಯಂ ಮುನ್ನಿದರೊಳೆ ನೋಡಿ ತಿಳಿದುಕೊಳ್ವುದು ಚದುರಂ" ಎಂದೂ ತನ್ನ ಕಾವ್ಯದ ಬಗ್ಗೆ ಹೇಳಿಕೊಳ್ಳುತ್ತಾನೆ. ಸಂಸ್ಕೃತ ಪದಗಳನ್ನು ನೇರವಾಗಿ ಬಳಸದ ನಿಷ್ಕೃಷ್ಟವ್ರತ ಇವನದು ; ದೇಶ್ಯದೊಡನೆ ತದ್ಭವಗಳನ್ನು ಮಾತ್ರ ಸೇರಿಸುವ ಹಟ. ಅದನ್ನೇ ಈತ 'ಅಚ್ಚಗನ್ನಡ' ಎಂದು ಕರೆಯುತ್ತಾನೆ ! 'ಮಾತನಾಡಿದವೊಲಂದಮನಾಳ್ದಿರೆ' ಕಾವ್ಯವಿರಬೇಕೆಂದು ಇವನ ಆದರ್ಶ. ಆದರೆ ಈತನ ಕಾವ್ಯ ಹಾಗಿದೆಯೇ ? ಹೀಗಾಗಿ ಇವನ ನಿಲವು ಸರಿಯಾದದ್ದಾದರೂ ಭಾಷಾ ನಿರ್ವಹಣೆ ಅವಾಸ್ತವ ಮಾರ್ಗವನ್ನು ಅನುಸರಿಸಿತು.

ಚಂಪೂಕವಿಗಳು ಸಂಸ್ಕೃತದ ಕಾವ್ಯ ಮಾದರಿಗಳನ್ನು ಹೊಂದಿದ್ದವರು ; ವಸ್ತು, ಛಂದಸ್ಸು, ಶೈಲಿ ಮುಂತಾದುವಲ್ಲಿ ಸಂಸ್ಕೃತದ ದಟ್ಟ ಪ್ರಭಾವ ಇಲ್ಲಿದೆ. ಆದರೆ ಪಂಪನಂತಹ ಶಕ್ತಕವಿಗಳು ಈ ಚೌಕಟ್ಟಿನಲ್ಲೆ 'ದೇಸಿ'ಯನ್ನು ಹೊಂದಿಸಿದವರು. ಭಾಷೆ-ಶೈಲಿಗಳಲ್ಲದೆ, ಭಾವನೆ-ಅನುಭಾವ- ಕಾಣ್ಕೆಗಳಲ್ಲಿ ದೇಸಿ ಹುದುಗಿದೆ. ಇದು ಪ್ರಜ್ಞಾಪೂರ್ವಕವಾಗಿ ನಡೆದದ್ದು, ಜನರಿಗೆ ತಮ್ಮ ಕಾವ್ಯ ತಲುಪಬೇಕೆಂದು ಕಿಂಚಿತ್ತಾದರೂ ಆ ಕವಿಗಳಿಗೆ ಆಸೆಯಿದ್ದುದರಿಂದ. ಏಕೆಂದರೆ ಕನ್ನಡದಲ್ಲಿ ಚಂಪೂಪ್ರಕಾರವನ್ನು ಸಮೃದ್ಧಿಗೊಳಿಸಿದ ಕವಿಗಳು ಜೈನ ಕವಿಗಳು. ಅವರು ಸಂಸ್ಕೃತ ಪ್ರತಿನಿಧಿಸುತ್ತಿದ್ದ ವೈದಿಕ ವಿರುದ್ಧವಾದ ನೆಲೆಯಿಂದ ಹೊರಗಿದ್ದುದರಿಂದ ಕನ್ನಡದಲ್ಲಿ ಬರೆದರು. ಆದರೆ ಜನರೆಡೆಗೆ ಹೋಗುವ ಇರಾದೆಯಾಗಲೀ ತುರ್ತಾಗಲೀ ಇರದಿದ್ದ ಬ್ರಾಹ್ಮಣ ಕವಿಗಳು ನಾಗ

ನರ್ಮ-ದುರ್ಗಸಿಂಹರಂತೆ ಸಂಸ್ಕೃತ ಕಾವ್ಯಗಳನ್ನು ನೇರವಾಗಿ ಕನ್ನಡಕ್ಕೆ ಇಳಿಸಿದರು; ಅಥವಾ ರುದ್ರಭಟ್ಟನಂತೆ ಸ್ವಂತ ಕೃತಿಯನ್ನು ಬರೆದರೂ ಸಂಸ್ಕೃತ ಭೂಯಿಷ್ಠ ಶೈಲಿಯನ್ನು ಅನುಸರಿಸಿದರು. ಎಂದರೆ ಜನಪರತೆಯ ಮನೋಭಾವವೇ ಕವಿಗಳನ್ನು ಕನ್ನಡದೆಡೆಗೆ, ಅಥವಾ ಅದರಲ್ಲಿ ಸರಳತೆಯೆಡೆಗೆ ಸೆಳೆಯುವ ಅಂಶ.

ಈ ಜನಪರ ಮನೋಭಾವವು ನೂರಕ್ಕೆ ನೂರರಷ್ಟಿದ್ದರಿಂದಲೇ ಹನ್ನೆರಡನೇ ಶತಮಾನದ ವಚನಕಾರರ ಭಾಷೆ ಜನಭಾಷೆಯನ್ನೇ ಆಶ್ರಯಿಸಿತು. ವಚನಗಳಿಗೆ ಮೂಲತಃ ಸಾಹಿತ್ಯಕ ಆಶಯಗಳೇನಿರಲಿಲ್ಲ; ಹತ್ತೊಂಬತ್ತನೇ ಶತಮಾನದ ವರೆಗೂ ವಚನಗಳನ್ನು 'ಶಾಸ್ತ್ರ'ಗಳೆಂದೇ ಪರಿಗಣಿಸಲಾಗುತ್ತಿತ್ತು. ಆಧುನಿಕ ದೃಷ್ಟಿಯಲ್ಲಿ ಅವು ಕಾವ್ಯತ್ವವನ್ನು ಪಡೆದ ರಚನೆಗಳಾಗಿ ಕಂಡು ಬಂದವು. ವಚನಕಾರರಲ್ಲಿ ಸಂಪೂರ್ಣ ವೈದಿಕ ವಿರೋಧಿ ನಿಲುವನ್ನು ನಾವು ಕಾಣಬಹುದು. ವೇದ ಶಾಸ್ತ್ರ ಪುರಾಣಗಳಂತಹ ವೈದಿಕ ಧಾರ್ಮಿಕ ರಚನೆಗಳ ವಿರೋಧ ('ವೇದಗಳೆಂಬುದು ಬ್ರಹ್ಮನ ಬೂಟಾಟ್ಟ ಎಂಬ ಅಲ್ಲಮನ ವಚನ); ಯಜ್ಞ ವಿರೋಧ (ಮಾತಿನ ಮಾತಿಂಗೆ ನಿನ್ನ ಕೊಂದ ಹರೆಂದು'ಎಂಬ ಬಸವಣ್ಣನ ವಚನ); ದೇವಸ್ಥಾನ ವಿರೋಧ '(ಲಿಂಗಪ್ರತಿಷ್ಠೆ ನಾಯಕ ನರಕ' ಎಂಬುದು ಅಲ್ಲಮನ ನುಡಿ); ಮೂರ್ತಿಪೂಜೆಯ ವಿರೋಧ; ವರ್ಣ ಜಾತಿ ವಿರೋಧ 'ಚತುವರ್ಣಾತೀತನೀ ವೀರಶೈವ ನೋಡಾ' ಎಂಬ ಸಿದ್ಧರಾಮನ ಮಾತು) ಮುಂತಾದುವೆಲ್ಲ ಸ್ಪಷ್ಟವಾದ ವೈದಿಕವಿರೋಧೀ ನಿಲವನ್ನೇ ಸೂಚಿಸುತ್ತವೆ. ವೈದಿಕವಿರೋಧಿ ಎಂದರೆ ಯಜಮಾನ ಸಂಸ್ಕೃತಿಯ ವಿರೋಧ, ವ್ಯವಸ್ಥೆಯ ವಿರುದ್ಧದ ಪ್ರತಿಭಟನೆ ಎಂದಷ್ಟೇ ಅರ್ಥ. ವ್ಯವಸ್ಥೆ ಜನದೂರವಾದರಿಂದ ಅದು ಸ್ಥಾವರವೆನ್ನಿಸಿತು; ಜನಪರತೆ ಜಂಗಮವೆನ್ನಿಸಿತು. ಹಾಗಾಗಿ ಭಾಷೆಯ ನೆಲೆಯಲ್ಲಿ ಸಂಸ್ಕೃತ ವ್ಯವಸ್ಥೆಯ ಸಂಕೇತವಾಗಿ, ಆಡುನುಡಿಯಾದ ಕನ್ನಡ ಜಂಗಮವಾಯಿತು. ಹೀಗೆಂದು ವಚನಕಾರರು ನೇರವಾಗಿ ಎಲ್ಲೂ ಹೇಳಲಿಲ್ಲ. ಆದರೆ ಅವರ ಧೋರಣೆ ಅದನ್ನು ಧ್ವನಿಸುತ್ತದೆ. "ಸ್ಥಾವರ ಭಕ್ತಂಗೆ ಸೀಮೆಯಲ್ಲದೆ ಘನಲಿಂಗಜಂಗಮಕ್ಕೆ ಸೀಮೆಯೆಲ್ಲಿಯದು ? ಅಂಬುಧಿಗೆ ಸೀಮೆಯಲ್ಲದೆ ಹರಿವ ನದಿಗೆ ಸೀಮೆಯಲ್ಲಿಯದು ?" ಎಂದು ಪ್ರಶ್ನಿಸುವ ಬಸವಣ್ಣನ ಮಾತಿನಲ್ಲಿ ಈ ಧೋರಣೆಯೇ ಕಾಣಿಸುತ್ತದೆ. ಅಪಾರವಾದರೂ ಗಂಭೀರವಾದರೂ ಸಮೃದ್ಧವಾದರೂ ಸಮುದ್ರದಂತಹ ಸಂಸ್ಕೃತ; ಕಿರಿದಾದರೂ ಚಲನಶೀಲವಾದ ನದಿಯಂತಹ ಕನ್ನಡ. ಇವೆರಡರ ಹೋಲಿಕೆಯೇ ಈ ಮಾತಿನಲ್ಲಿರುವಂತಿದೆ.

'ಕನ್ನಡ' ಎಂಬ ಶಬ್ದವನ್ನು ವಚನಕಾರರು ಎಲ್ಲಿಯೂ ಭಾಷಾವಾಚಿಯಾಗಿಯಾಗಲೀ, ದೇಶವಾಚಿಯಾಗಿಯಾಗಲೀ ಬಳಸಿಲ್ಲ. 'ಕನ್ನಡ'ಎಂಬ ಶಬ್ದವು 'ಕಣ್ಣದ್ದ > ಕಣ್ಣಡ - ಕಣ್ಣಡ' ಈ ನಿಷ್ಪತ್ತಿಯ ಕಣ್ಣ ಮುಂದಿನ ತೆರೆ ಎಂಬರ್ಥದಲ್ಲಿ; 'ಭ್ರಮೆ'

ಎಂಬರ್ಥದಲ್ಲಿ ಬಳಕೆಯಾಗಿದೆ. ಆದರೆ ವಚನಕಾರರು ಕನ್ನಡವನ್ನು ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡ ರೀತಿಯಂತೂ ಅನನ್ಯವಾದದ್ದು. ಅವರ 'ಭಾಷಾಪ್ರಜ್ಞೆ'ಯು ಮಾತಿನಲ್ಲಿ ಹೇಳಿಕೆಯಲ್ಲಿ ಕಾಣಿಸುವುದೇ ಇಲ್ಲ ; ಏನಿದ್ದರೂ ಕನ್ನಡವನ್ನು ಬಳಸುವ ರೀತಿಯಲ್ಲಿ ಅದು ವ್ಯಕ್ತವಾಗುತ್ತದೆ. ಕನ್ನಡದಂತಹ ಜನರ ನುಡಿಯನ್ನು ಸಂಸ್ಕೃತವನ್ನು ಬಿಟ್ಟು ಆಧ್ಯಾತ್ಮಿಕ-ದೈವಸಂಬಂಧೀ ವಿಚಾರಗಳನ್ನು ಹೇಳಲು ಬಳಸಿದ್ದೇ ಸಂಸ್ಕೃತದ ವಿರುದ್ಧ, ಅದು ಸಂಕೇತಿಸುವ ವ್ಯವಸ್ಥೆಯ ವಿರುದ್ಧ ವಚನಕಾರರು ವ್ಯಕ್ತಪಡಿಸಿದ ಅತ್ಯಂತ ಗಟ್ಟಿಯಾದ ಪ್ರತಿಭಟನೆ. ವಚನಕಾರರಿಗೆ ಜನರನ್ನು ತಲುಪುವುದು ಏಕೈಕ ಗುರಿಯಾಗಿತ್ತು : ಹಾಗಾಗಿ ಜನರ ಭಾಷೆಯಾದ ಕನ್ನಡವನ್ನು ಅವರು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸುವುದೂ ಅನಿವಾರ್ಯವಾಯಿತು. ಕನ್ನಡಪರ ಧೋರಣೆಗಳಿಲ್ಲದೆ ಜನವಾಣಿಯಾದ ಕನ್ನಡವನ್ನು ದೇಶವಾಣಿಯಾಗಿಸಿದ ಅಪೂರ್ವ ಕ್ರಾಂತಿಕಾರಕ ಹೆಜ್ಜೆ ಅದು. ಅದಕ್ಕೆ ಕಾರಣ ಅವರಿಗೆ ತಮ್ಮಲ್ಲಿದ್ದ ಆತ್ಮವಿಶ್ವಾಸ, ತಮ್ಮ ಭಾಷೆಯಾದ ಕನ್ನಡದ ಬಗೆಗಿದ್ದ ಅನನ್ಯ ನಂಬಿಕೆ. ಹೇಳಬೇಕಾದ ತಮಗೆ ಚೈತನ್ಯವಿದ್ದರೆ, ತಮ್ಮ ಭಾಷೆಗೆ ಹೇಳುವ ಶಕ್ತಿ ಬರುತ್ತದೆಂಬ ಅಪೂರ್ವವಾದ ಆತ್ಮನಂಬಿಕೆ ಅದು. ಅದರಿಂದ ಜನಸಾಮಾನ್ಯರ ಆತ್ಮವಿಶ್ವಾಸ ಕುದುರಲೂ ಕಾರಣವಾಯಿತು. ಇನ್ನೂರಕ್ಕೂ ಹೆಚ್ಚಿನ ಸಂಖ್ಯೆಯ ವಚನಕಾರರು, ಮೂವತ್ತರಷ್ಟು ಮಂದಿ ವಚನಕಾರ್ತಿಯರು ಮೊತ್ತಮೊದಲ ಬಾರಿಗೆ ನೆರೆ ಬಂದ ಹೊಳೆಯಂತೆ ಭೋರ್ಗರೆದು ಆ ಕಾಲದಲ್ಲಿ ವಚನ ರಚನೆ ಮಾಡಿದರು. ಕನ್ನಡವನ್ನಷ್ಟೇ ಅಲ್ಲ, ಸಮಾಜ ರಚನೆ ಅತ್ಯಂತ ಕೆಳವರ್ಗದ ಜನರಲ್ಲಿ ತಾವೂ ಹೇಳಬೇಕಾದದ್ದಿದೆ ಎಂಬ ಭಾವನೆಯನ್ನು ತೀವ್ರವಾಗಿಸಿದ್ದು, ಯಾವ ಸಂಕೋಚವೂ ಇಲ್ಲದೆ ಅದನ್ನು ಹೇಳುವಂತೆ ಮಾಡಿದ್ದು ವಚನ ಚಳುವಳಿಯ ದೊಡ್ಡ ಧನಾತ್ಮಕ ಅಂಶ. ಇಷ್ಟು ಮಂದಿ ಲೇಖಕರು ಸಮಾಜದ ಎಲ್ಲ ಸ್ತರಗಳಿಂದ ಬಂದವರು. ಅದರಲ್ಲೂ ಕೆಳವರ್ಗದವರೇ ಹೆಚ್ಚಾಗಿದ್ದು ಬರಹದಲ್ಲಿ ತೊಡಗಿದ ಘಟನೆ ಬೇರೆಲ್ಲೂ ನಡೆದಂತೆ ಕಾಣದು. ಆ ದೃಷ್ಟಿಯಲ್ಲಿ ವಚನಕಾರರು ಕನ್ನಡದ ಸಾಧ್ಯತೆಗಳ ಬಗ್ಗೆ ತೋರಿದ ನಂಬಿಕೆ, ಅದನ್ನು ಸೂರೆಗೊಂಡ ಬಗೆ ಏಕಮೇವ ಘಟನೆಯಾಗಿದೆ.

ವಚನಕಾರರು ಹೀಗೆ ಕನ್ನಡವನ್ನು ಆಶ್ರಯಿಸಿದ್ದು ಮುಂದಿನ ವೀರಶೈವ ಕವಿಗಳಿಗೆ ಮಾರ್ಗದರ್ಶಕವಾಯಿತು. ಹರಿಹರನಂತಹ ಕವಿಗಳು ವಚನಕಾರರ ದಟ್ಟ ಪ್ರಭಾವಕ್ಕೆ ಒಳಗಾಗಿ ಕಾವ್ಯರಚನೆ ಮಾಡಿದರು. ಹರಿಹರನು ತನ್ನ ಕಾವ್ಯಗಳ ವಸ್ತುವಿನ ಆಯ್ಕೆಯಲ್ಲಿ ಛಂದಸ್ಸನ್ನು ಆರಿಸಿಕೊಂಡದ್ದರಲ್ಲಿ ತನ್ನ ಕಾವ್ಯನಾಯಕರನ್ನಾಗಿ ಮಾಡಿಕೊಂಡ ಕೆಳವರ್ಗದ ವ್ಯಕ್ತಿಗಳ ಬಗ್ಗೆ ತೋರಿದ ಗೌರವದಲ್ಲಿ ಅಸೀಮ ಜನಪರತೆಯನ್ನು ತೋರುತ್ತಾನೆ. ಆದರೆ ಮುಂದಿನ ವೀರಶೈವ ಕವಿಗಳು ಈ

ಆದರ್ಶದಿಂದ ಕಾಲಸರಿದಂತೆ ದೂರಸರಿಯುತ್ತ ನಡೆದರು. ರಾಘವಾಂಕನೇ ಅದಕ್ಕೆ ಪ್ರಾರಂಭ ಹಾಕಿದ. ಕನ್ನಡದ ಷಟ್ಪದಿಯನ್ನು ಆರಿಸಿಕೊಂಡ ನಿಜ. ಆದರೆ ಹರಿಹರನಂತೆ ರಗಳೆಯ ಕೊಚ್ಚು ಹೊಸ ದಾರಿ ತುಳಿಯದೆ, ರಗಳೆಯಲ್ಲಿ ಮತ್ತೆ ಪುರಾಣರಚನೆಗೆ ಕೈಹಾಕಿದ. ಅವನಿಂದ ಪ್ರಾರಂಭವಾದ ಈ ಬಗೆ ಷಡಕ್ಷರದೇವನಂತಹವರಲ್ಲಿ ಘನೀಭೂತವಾಯಿತು. ಬಸವಣ್ಣನ ಬಗ್ಗೆ ಕಾವ್ಯ ಬರೆಯುವ ಅವನ ರೀತಿಯು ಬಸವಣ್ಣ ಸಾರಿದ ತತ್ವಗಳಿಗೆ ತದ್ವಿರುದ್ಧ ಹಾದಿ ಹಿಡಿಯಿತು.

ಕನ್ನಡ ಸಾಹಿತ್ಯದಲ್ಲಿ ಜನ ಮಾರ್ಗ ಹಿಡಿದ ಜೈನ ವೀರಶೈವ ಕವಿಗಳನಂತರ ಬ್ರಾಹ್ಮಣ ಕವಿಗಳು ಸ್ವಲ್ಪಮಟ್ಟಗೆ ಮಾತ್ರ ಆ ಮಾರ್ಗ ಅವಲಂಬಿಸಲು ಬಹಳ ಕಾಲ ಬೇಕಾಯಿತು. ನಾಗವರ್ಮ, ದುರ್ಗಸಿಂಹರಿಂದ ಅನುವಾದದ ಮೂಲಕ ಸಂಸ್ಕೃತವನ್ನಾಶ್ರಯಿಸಿದ್ದ ಇವರ ಕಾವ್ಯರಚನೆಯು ಬಹುತೇಕ ಶ್ರೀಮದ್ಗಾಂಭೀರ್ಯದ ಮಾರ್ಗದ್ದು. ಆದರೆ ಕೀರ್ತನ ಸಾಹಿತ್ಯದ ಬರವು ಕೆಲವು ಅಂಶಗಳಲ್ಲಿ ಅವರು ಜನಪರವಾಗಲು ಕಾರಣವಾಯಿತು. ಹರಿದಾಸರು ಭಕ್ತಿಯ ಭರದಲ್ಲಿ ಸಮಾನತೆಯನ್ನು ಸಾರಿದರೇ ವಿನಾ, ಬಹುತೇಕ ಹರಿದಾಸರು ಪ್ರತಿಪಾದಿಸಿದ 'ದ್ವೈತವು ಪಂಚತಾರತಮ್ಯ' ತತ್ವದಲ್ಲಿ, ನಿತ್ಯನಾರಕಗಳ ಪರಿಕಲ್ಪನೆಯಲ್ಲಿ ನಂಬಿಕೆಯಿಟ್ಟ ಮತ. ಹಾಗಾಗಿ ಹರಿದಾಸ ಸಂಕುಲದಲ್ಲಿ ಕೆಳವರ್ಗದವನೆಂದರೆ ಕನಕದಾಸನೊಬ್ಬನೇ. ಆತನ ಬಗ್ಗೆ ಪ್ರಚಲಿತವಾಗಿರುವ ಕಥೆಗಳೆಲ್ಲ ಅವನು ಕೆಳವರ್ಗದವನೆಂಬುದನ್ನು ಸಮರ್ಥಿಸುತ್ತವೆ. ಪ್ರಾಯಶಃ ಅವನು ತನ್ನ ನಿಜಜೀವನದಲ್ಲಿ ಮೇಲು ವರ್ಣಗಳವರಿಂದ ಅನುಭವಿಸಬೇಕಾಗಿ ಬಂದ ನೋವಿಗೆ ಅವಮಾನಕ್ಕೆ ಮೆಲುವಾದ ರೀತಿಯಲ್ಲಿ, ಆದರೆ ಖಚಿತವಾದ ಧ್ವನಿಯಲ್ಲಿ ರೂಪು ನೀಡಿದ್ದು 'ರಾಮಧಾನ್ಯಚರಿತೆಯ' ಮೂಲಕ. ಬತ್ತವನ್ನು ಕಾವ್ಯದುದ್ದಕ್ಕೂ 'ವ್ರೀಹಿ' ಎಂಬ ಸಂಸ್ಕೃತ ಶಬ್ದದಿಂದ ಸಂಬೋಧಿಸುತ್ತ, ರಾಗಿಯನ್ನು 'ನರೆದಲೆಗ' ಎಂಬ ಅಚ್ಚಗನ್ನಡದ ಸ್ವಂತ ಶಬ್ದ ಬಳಸುತ್ತ ಆತನು ಮೇಲು ವರ್ಗ-ಕೆಳವರ್ಗ, ಹಾಗೆಯೇ ಸಂಸ್ಕೃತ-ಕನ್ನಡಗಳ ಸಂಘರ್ಷವನ್ನಲ್ಲಿ ಚಿತ್ರಿಸುತ್ತಾನೆ. ಮಿಕ್ಕ ದಾಸರುಗಳು ಭಕ್ತಿಯನ್ನು ಸಾರಿದರೇ ವಿನಾ ವಚನಕಾರರಂತೆ ಸಾಮಾಜಿಕ ಪ್ರತಿಭಟನೆಯ ನೆಲೆಯಲ್ಲಿ ಕಾರ್ಯಪ್ರವೃತ್ತರಾಗಲಿಲ್ಲ : ಸ್ವೀಕೃತ ಯಜಮಾನ ಸಂಸ್ಕೃತಿಯ ಮೌಲ್ಯಗಳನ್ನೂ ಧಿಕ್ಕರಿಸಲಿಲ್ಲ.

ಆದರೆ ಮುಂದೆ ಇಷ್ಟೂ ಜನಪರತೆ ಕಾಣದೆ ಹೋದಾಗ, ಕೆಲವು ಉದಾರವಾದೀ ಬ್ರಾಹ್ಮಣ ಕವಿಗಳು ಕನ್ನಡದ ಪರವಾಗಿ ಒಂಟಿದನಿಗಳಾಗಿ ಘೋಷಣೆ ಕೂಗಿದರು. ಮುದ್ದಣ ಲಿಂಗರಂಗನಂತಹವನು ಸಂಸ್ಕೃತವನ್ನು ಜೊತೆಯಲ್ಲಿರಿಸಿಯೇ ಮಾತನಾಡಿ ಕನ್ನಡವನ್ನು ಆರಿಸಿಕೊಂಡನು. ಅವನ ಪ್ರಸಿದ್ಧ ಪದ್ಯ 'ಸುಲಿದ ಬಾಳೆಯ ಹಣ್ಣಿನಂದದಿ,

ಕಳೆದ ಸಿಗುರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ, ಸುಲಭವಾಗಿರ್ಪ ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮುಕ್ತಿಯ ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು' ಎಂಬುದಂತೂ ಕನ್ನಡವೇ ಕನ್ನಡ ಜನತೆಯ ಮುಕ್ತಿ ಮಾರ್ಗ ಎಂದು ಸಾರುತ್ತದೆ. ಕುಮಾರವ್ಯಾಸ ಲಕ್ಷ್ಮೀಶನಂತಹ ಸಮರ್ಥ ಬ್ರಾಹ್ಮಣ ಕವಿಗಳ ಕೈಯಲ್ಲಿ ಕನ್ನಡ ನರ್ತಿಸಿತು ನಿಜ ; ಆದರೆ ಅದು ಸಂಸ್ಕೃತದ ವಿರುದ್ಧದ ದನಿಯಾಗಲಿಲ್ಲ ; ಅವರ ಕಾವ್ಯಗಳು ಕತೆಯ ಮೂಲಕ ತತ್ವದರ್ಶನದ ಮಾರ್ಗ ಹಿಡಿಯಿತು, ಅಷ್ಟೆ. ಅಂತೆಯೇ ಅನಂತರದ ರತ್ನಾಕರ ವರ್ಣಿಯಂತಹವರ ಕಾವ್ಯವು ಸರಳ ಕನ್ನಡವನ್ನು ಬಳಸಿಕೊಂಡರೂ, ಉದಾತ್ತ ಮನೋಭಾವದ ತಳಹದಿಯ ಧೋರಣೆಯನ್ನು ವ್ಯಕ್ತಗೊಳಿಸಲು ಪ್ರಯತ್ನಿಸಿದರೂ ಅದಕ್ಕೆ ವ್ಯಾಪಕ ಆಶಯಗಳಿರಲಿಲ್ಲ. ಕನ್ನಡವನ್ನು ಬಯಸುವುದು, ಪ್ರೀತಿಸುವುದು ಒಂದು ; ಆದರೆ ಸಂಸ್ಕೃತದಂತಹ ಪ್ರಬಲ ಹಿತಾಸಕ್ತಿಗಳ ವಿರುದ್ಧವಾಗಿ ಕೂಗಿ, ಕನ್ನಡತನವನ್ನು ಪ್ರತಿಪಾದಿಸುವುದು ಬೇರೆ. ಆ ದೃಷ್ಟಿಯಿಂದ ನೋಡಿದರೆ ಇಡೀ ಕನ್ನಡ ಸಾಹಿತ್ಯವಾಹಿನಿಯಲ್ಲಿ ವಚನಗಳ ಸ್ಥಾನ ಅನನ್ಯವಾದದ್ದು. ಅದೊಂದು ಚಳುವಳಿಯ ಅಭಿವ್ಯಕ್ತಮಾರ್ಗವಾದದ್ದೇ ಅದಕ್ಕೆ ಕಾರಣ.

# ವೇಲಾಪುರಿ ಕೇಶವನೇತಿ ಗೀತಾ

## ಬೇಲೂರು ವೈಕುಂಠದಾಸರ ಕೀರ್ತನೆಯ ಅಪ್ರಕಟಿತ ಹಸ್ತಪ್ರತಿ

---

**ಕೆಳದಿ ಗುಂಡಾಜೋಯಿಸ್**

ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾಲಯದಲ್ಲಿ ಬೇಲೂರು ವೈಕುಂಠದಾಸರ ಕೀರ್ತನೆಗಳನ್ನೊಳಗೊಂಡ "ವೇಲಾಪುರಿ ಕೇಶವನೇತಿ ಗೀತಾ" ಎಂಬ ಶೀರ್ಷಿಕೆಯ ಉಲ್ಲೇಖವಿರುವ ಅಪ್ರಕಟಿತ ತಾಳಿಯೋಲೆ ಹಸ್ತಪ್ರತಿಯೊಂದಿದೆ. ೧೬೩ ಓಲೆಗರಿಗಳಿಂದ ಕೂಡಿದ ಕನ್ನಡ ಲಿಪಿ ಹಾಗೂ ಭಾಷೆಗಳಲ್ಲಿರುವ ಈ ಹಸ್ತಪ್ರತಿ ಕಟ್ಟಿನ ಗರಿಗಳು ಬಿಡಿ ಬಿಡಿಯಾಗಿ ಚೆದರಿಕೊಂಡಿದ್ದು ತುಮಕೂರು ಜಿಲ್ಲೆಯ ಚಿಕ್ಕ ನಾಯಕನ ಹಳ್ಳಿ ಹಾಗೂ ತುರುವೇಕೆರೆಗಳಲ್ಲಿ ನಾನು ಪ್ರಾಚೀನ ಹಸ್ತಪ್ರತಿ ಸಂಗ್ರಹಣಾ ಕಾರ್ಯದಲ್ಲಿ ಸಂಚರಿಸತೊಡಗಿದಾಗ ಲಭಿಸಿದುವು. ಅಸಮಗ್ರವಾಗಿದ್ದ ಬಿಡಿ ಓಲೆಗಳು ಚಿಕ್ಕನಾಯಕನ ಹಳ್ಳಿಯ ಶ್ರೀರಾಮಚಂದ್ರ ಬಿನ್ ವೆಂಕಟೇಶಯ್ಯ ಹಾಗೂ ತುರುವೇಕೆರೆಯಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಕೃಷ್ಣ ಮೂರ್ತಿಗಳ ಮನೆಯಲ್ಲಿದ್ದುವು. ಚಿಕ್ಕನಾಯಕನ ಹಳ್ಳಿಯ ಶ್ರೀ ರಾಮಚಂದ್ರರವರ ಪೂರ್ವಿಕರು ಮೈಸೂರು ಅರಮನೆಯಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರೆಂದು ಗೊತ್ತಾಗಿದೆ. ಬೇರೆ ಬೇರೆ ಊರುಗಳಲ್ಲಿ ಲಭಿಸಿದ ಈ ಓಲೆಗರಿಗಳನ್ನು ಎಚ್ಚರಿಕೆಯಿಂದ ಪರಿಶೋಧಿಸಿ ಸಮಗ್ರವಾಗಿ ರೂಪಿಸಲು ಪ್ರಯತ್ನಿಸಲಾಗಿದೆ. ದಾಸ ಸಾಹಿತ್ಯ ತಜ್ಞ ಡಿ|| ವರದರಾಜ ರಾಯರು "ಹಸ್ತಪ್ರತಿ ಸಂಗ್ರಹ ಕಾರ್ಯ ಮತ್ತು ಸಂರಕ್ಷಣೆ"ಯ ತಮ್ಮ ಲೇಖನದಲ್ಲಿ ತುರುವೇಕೆರೆಯಲ್ಲಿರುವ ಅಚಲಾನಂದದಾಸರ ಮನೆಯಲ್ಲಿ ಅಪಾರ ಹಸ್ತಪ್ರತಿ ಸಂಗ್ರಹಗಳಿದ್ದುವೆಂದು ಡಿ. ಎಲ್. ನರಸಿಂಹಾಚಾರ್ಯರು ತಿಳಿಸಿರುವುದನ್ನು ಪ್ರಸ್ತಾವಿಸಿದ್ದಾರೆ.* 1931 ನೇ ಮೈಸೂರು ಪುರಾತತ್ವ ವರದಿಯಲ್ಲಿಯೂ ವೈಕುಂಠದಾಸರ ವಂಶಿಕರಾದ ರಾಮದಾಸರಲ್ಲಿ ವಿಪುಲ ಸಾಹಿತ್ಯ-ಸಂಗ್ರಹವಿತ್ತೆಂದು ಹೇಳಿದೆ. ಪ್ರಕೃತ ನನಗೆ ಲಭಿಸಿದ ಈ ಹಸ್ತಪ್ರತಿ ಅದೇ ಇರಬಹುದೇನೋ ಎಂಬ ಸಂದೇಹವಿದೆ.

---

* ಹಸ್ತಪ್ರತಿಶಾಸ್ತ್ರ ಪು. 61 ; ಪ್ರೊ. ಎಂ. ವಿ. ಸೀ ಮತ್ತು ಡಾ|| ಚಿದಾನಂದ ಮೂರ್ತಿ ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

**ಹಸ್ತಪ್ರತಿ ವಿವರ :**

ಹ. ಪ್ರ. ಸಂ : 69 ; ಕಾಲ : ಸು. 17-18ನೇ ಶತಮಾನ ; ಪ್ರಮಾಣ : ಉ 39.2 × ಅ 3.7 ಸೆ. ಮೀ

**ಹಸ್ತಪ್ರತಿ ಕಟ್ಟಿನಲ್ಲಿರುವ ಕೃತಿಗಳು :**

1. ರಾಗ ಸಂಯೋಜನೆಯೊಂದಿಗೆ ನೃತ್ಯ ಹಾಗೂ ಸಂಗೀತ ಭಾಗಗಳನ್ನೊಳಗೊಂಡ ಗ್ರಂಥಗಳು.
2. ಸಪಗಳುಳ ಸುಳಾದಿ [ಓ. ಪು. ೧೦ ಹಿಂಭಾಗ]
3. ಚೆನ್ನ ಕೇಶವನ ಸ್ತುತಿ ಹಾಗೂ ಕೀರ್ತನೆಗಳು.
4. ಪುರಂದರ ದಾಸರ ಕೀರ್ತನೆಗಳು.
5. ಅಂತ್ಯಭಾಗದಲ್ಲಿ "ನರಸಿಂಹ" ಅಂಕಿತಗಳಿಂದ ಕೂಡಿದ ಹಾಡುಗಳು (ಕೀರ್ತನೆಗಳು)
6. ವ್ಯಾಸರಾಯರ ಮಹಿಮೆಗಳನ್ನೊಳಗೊಂಡ ಸಂಗೀತ ಕೃತಿಗಳು.
7. ........ಇತಿ ಪಕ್ಷಿಪುರದ ಭಾರತಿ ಸುಬ್ರಮಣ್ಯಯೋಗೀಂದ್ರ ವಿರಚಿತೆ ನರಸಿಂಹ........ಮೂರ್ತಿ XX ಸಂಪೂರ್ನಂ–ಓ. ಪು. ೭೪
8. ವರ ವೈಕುಂಟ ವೆಲಾಪುರದರಸ—ಓ. ಪು. ೭೯
9. ತೆಲುಗು ಭಾಷೆಯ ಪದಗಳು-ಹಾಡುಗಳು ಓ. ಪು. ೮೨
10. 'ಕಾಗಿನೆಲೆಯಾದಿಕೇಶವನ' (ಕನಕದಾಸರ ಕೀರ್ತನೆಗಳು–ಓ.ಪು. ೯೬)
11. ದಾಸ ಸೂಳಾದಿ–೧೦೬ (ಓ. ಪು)
12. ವೈಕುಂಠದಾಸರ ಸೂಳಾದಿ ಓ. ಪು. ೧೦೯

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕೆ. ಎ. 579/1ನೇ ನಂಬರಿನ 8″ × 12.2″ ಪ್ರಮಾಣವುಳ್ಳ ಕಾಗದ ಹಸ್ತ ಪ್ರತಿಯಲ್ಲಿ ವೈಕುಂಠದಾಸರ ಕೀರ್ತನೆ ಹಾಗೂ ತ್ಯಾಗರಾಜರ ಸಂಗೀತ ಕೃತಿಗಳಿವೆ. "ವೈಕುಂಠ ದಾಸರ ಕೀರ್ತನೆಗಳು" ಎಂಬ ಶಿರೋನಾಮೆಯಿದ್ದು ಹಸ್ತ ಪ್ರತಿ ಲಿಪಿಯು

ಸು. ೨೦ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಕಹವಸೂ ಸಂಪುಟ viii ಪುಟ ೧೫೬ರಲ್ಲಿ ಹಸ್ತಪ್ರತಿಯ ವಿವರ ಈ ಕೆಳಕಂಡಂತಿದೆ.

KA 579/1 (ಕಾಗದದ ಪ್ರತಿ)
ಪ್ರ. 8″ × 12.2″ ; ೧-೨೩ ಪತ್ರ
32 ಪಂಕ್ತಿ ; 16 ಅಕ್ಷರ ; ಹಾಡು ;

ಆದಿ : ಶ್ರೀ ವೈಕುಂಠದಾಸರವರ ಕೀರ್ತನೆಗಳು ಶ್ರೀ ದಾಸರವರನ್ನು ನಂಜನಗೂಡಿನಲ್ಲಿ ನಂಜುಂಡೇಶ್ವರನ ದರ್ಶನಕ್ಕೆ ಆ ಊರಿನವರು ಕರೆದುಕೊಂಡು ಹೋಗಿದ್ದಾಗ ಹೇಳಿದ ಕೀರ್ತನೆ–

ರಾಗ ನಾಡಿ ಆದಿತಾಳ

ಕಪಟಮಾತಾ ರೂಪನಳವಡಿಸಿ ಕೊಲಲೆಂದು |
ಚಪಲಗತಿಯಿಂ ಬಂದ ಪೂತನಿಯನೂ
ಉಪಮೆಯಿಂದಸುವೆರಸಿ ಘನಕುಚಂಗಳನೂಡೇ |
ಅಪರಿಮಿತವಾದ ನಂಜುಂಡ ಮಾದೇವಾ ||೧||

ಅಂತ್ಯ : ರಾಗ ದೇಶಾಕ್ಷಿ (63) ಝಂಪೆ.

ಗೋವಾಳಿಗೋಲ ಗುಳ್ಳೆಯ ಚೀಲದ ಬಳ್ಳಿಗಟ್ಟಿದುಡೆಯಲ್ಲಿ ಸಿಕ್ಕಿ ಕಲ್ಲಿ ಕಂಬಳಿಗೋಲ ಹೆಗಲಲ್ಲಿ ಧರಿಸಿ ಸುರತರುನ ನಂಮಾ | ಗೊಲ್ಲರ ಚಾಲಕರ ಮಧ್ಯದಲ್ಲಿ ಪೊಂಗೊಳಲ ಪಿಡಿದೂ | ಅ .......ತುತ್ತುರು ತುರೆನುತ | ಶ್ರೀವಲ್ಲಭನು ವೇಣುನಾದವಂ ಮಾಡೆ ಜಗವೆಲ್ಲ ವೇಣುಮಯವಾದುದು ಚಲ್ವ ಪಿಳ್ಳೇರಾಯ ಮನ್ಮನೋವಲ್ಲಭ ವೈಕುಂಠ ವಿಠಲ ||

ವಿಷಯ : ಭಕ್ತಿ ಭಾವಗಳ ನಿರೂಪಣೆ.

ವಿಶೇಷ : ನೋಡಿ ಅಕ್ಷರ. ಇದೇ ಪುಸ್ತಕದಲ್ಲಿ ತ್ಯಾಗರಾಜರ ಕೀರ್ತನೆಗಳು ಎಂಬ ಮತ್ತೊಂದು ಪುಸ್ತಕವಿದೆ. ಪ್ರತಿ ಸಾಧಾರಣ ಸ್ಥಿತಿಯಲ್ಲಿದೆ. ೨೩ನೆಯ ಪತ್ರದ ಹಿಂಬದಿಯಲ್ಲಿ ಒಂದು ಹಾಡಿದೆ.

ಅದೇ ಮೈಸೂರಿನಲ್ಲಿ ಡಾ|| ವಿ. ಎಸ್. ಸಂಪತ್ಕುಮಾರಾಚಾರ್ಯರವರಲ್ಲಿ ನಾನು ನೋಡಿದ ಅಪ್ರಕಟಿತ ತಾಳೆಯೋಲೆ ಹಸ್ತಪ್ರತಿಯಲ್ಲಿ ಚೆನ್ನಕೇಶವ ದೇಗುಲವಿರುವ ಓಲೆಗರಿಯು ಈ ಕೆಳಕಂಡಂತಿದೆ.

ಉ : 21.5 × ಅ 4.5 ಸೆಂ.ಮಿ. ; ಅಕ್ಷರ ; 48 ;
ಸಾಲು 6-9 ; ಓಲೆ ಸಂಖ್ಯೆ : 33 ; ಅಸಮಗ್ರ ;

ಲಿಪಿ : ಕನ್ನಡ ; ಭಾಷೆ : ಕನ್ನಡ ;

ಆದಿ : ಶ್ರೀಮತೆ ರಾಮಾನುಜಾಯನಮಃ || ಕಾಸೀಪಟ್ನಣಯಾದಿಯಾಗಿ ಚತುಸಿಮೆಯ ವಿವರ—

ಓಲೆ ನಂ. 32ರಲ್ಲಿ–ಮುಂಭಾಗ :............ಚೆಂನಿಗರಾ

ಹಿಂಭಾಗ : ಯಿನ ಬೆಲಊರು | ಯಿಾ ದಿಕ್ಕಿ ಅಗ್ನಿ ದಿಕ್ಕಿನಲ್ಲು | ಶ್ರೀರಂಗ ಪಟ್ನಣ | ಯಿದಕ್ಕೆ ಯಿಶಾನ್ಯ ಪರಿಯಂತರ | ಯಿ ಚತುಸಿಮೆ ಯಿಂದಿಹ ಹೊಯಿಸಳ ದೆಶ. [1]

ಬೇಲೂರಿನ ಕೇಶವ ದೇವಾಲಯದ ಮಹಾದ್ವಾರದ ಎಡಗಡೆ ಬಿದ್ದಿರುವ ತುಂಡು ಕಲ್ಲು ಶಾಸನದಲ್ಲಿ—[2]

........... ....ಕ್ಷೋಣೀ ವೈಕುಠವೆನಿಪವೇ
ಲಾಪುರದ ಶ್ರೀ ಚೆಂನ್ನಿಗರಾಯರ ದಿವ್ಯ ಶ್ರೀ ಪಾದ ಪದ್ಮಂಗಳಿಗೆ........

ಇಲ್ಲಿ ನಿರೂಪಿಸಿದ ಅಂಶಗಳು, "ಕಹಸಸೂ"ನಲ್ಲಿ ಕಂಡು ಬರುವ ಹಸ್ತಪ್ರತಿಗಳು ವಸ್ತುನಿಷ್ಠವಾಗಿದ್ದು ಕೆಳದಿ ವಸ್ತುಸಂಗ್ರಹಾಲಯದಲ್ಲಿ ಶೇಖರವಾಗಿರುವ ಹಸ್ತ ಪ್ರತಿಯು ಮೂಲರೂಪದ ಪ್ರತಿಯಾಗಿರುವುದನ್ನು ಸಮರ್ಥಿಸಿಕೊಳ್ಳಬಹು ದಾಗಿದೆ.

## ಬೇಲೂರು ವೈಕುಂಠದಾಸರು

ಹರಿದಾಸ ಪರಂಪರೆಯಲ್ಲಿ ಭಗವದ್ಭಕ್ತರಾದ ವೈಕುಂಠದಾಸರನ್ನು ಶ್ರೀ ವಾದಿ ರಾಜರು ಮುಕ್ತಕಂಠದಿಂದ ಸ್ತುತಿಸಿದ್ದಾರೆ. ಕರ್ನಾಟಕ ಕವಿ ಚರಿತೆಕಾರರು ಇವರ ಕಾಲವನ್ನು ಸು 1680 ಎಂದೂ ದಿ| ಜಿ. ವರದರಾಜಾರಾಯರು ಹರಿದಾಸ ಸಾಹಿತ್ಯ ಸಾರದಲ್ಲಿ ಕ್ರಿ. ಶ. 1560 ಎಂಬುದಾಗಿಯೂ ನಿರೂಪಿಸಿದ್ದಾರೆ. ಹಲವು ಆಧಾರಗಳು ವಾದಿರಾಜರು ಮತ್ತು ವೈಕುಂಠದಾಸರು ಸಮಕಾಲೀನರೆಂದು ನಿರೂಪಿಸುತ್ತವೆ. ಇವರು ಶ್ರೀ ವೈಷ್ಣವರು ಹಾಗೂ ಬೇಲೂರು ಚೆನ್ನಕೇಶವನ ಪರಮ ಭಕ್ತರೆಂದೂ ತಿಳಿದು ಬರು ತ್ತದೆ. ಇತರ ಹರಿದಾಸರಂತೆ ವೈಕುಂಠದಾಸರು ತೀರ್ಥಕ್ಷೇತ್ರ ಪರ್ಯಟನೆಯನ್ನು ಕೈಕೊಳ್ಳದೆ ಬೇಲೂರಿನ ಚೆನ್ನಕೇಶವನ ಪರಮಾನುಗ್ರಹವನ್ನು ಸಂಪಾದಿಸಿ ಸರ್ವದಾ ದೇವರ ಧ್ಯಾನದಲ್ಲಿ ನಿರತರಾಗಿದ್ದರು. ಇವರ ಭಕ್ತಿಗೆ ಮೆಚ್ಚಿದ ಚೆನ್ನಕೇಶವನು ಇವರ

1 ಮೈಸೂರಿನಲ್ಲಿ ನನ್ನ ಸಮೀಕ್ಷೆಯಲ್ಲಿ ಲಭಿಸಿದ ತಾಳೆಯೋಲೆ ಹಸ್ತಪ್ರತಿ (ಅಪ್ರಕಟಿತ)

2 NAR 1929/ P. 213.

ಇಷ್ಟಾರ್ಥಗಳನ್ನು ಇದ್ದಲ್ಲಿಯೇ ನೆರವೇರಿಸಿದ್ದನು. ಇವರು ಅರ್ಜುನಾಂಶರೆಂದೂ, ಶ್ರೀಕೃಷ್ಣನು ಇವರು ಬಯಸಿದಾಗ ಬಾಲಗೋಪಾಲನಾಗಿ ಇವರಿಗೆ ಕಾಣಿಸಿಕೊಳ್ಳುತ್ತಿದ್ದನೆಂದೂ ಶ್ರೀವಾದಿರಾಜರ ಕೃತಿಯಲ್ಲಿ ವ್ಯಕ್ತಪಡುತ್ತದೆ. ಯತಿವರೇಣ್ಯರಾದ ಶ್ರೀವಾದಿರಾಜರು ಹರಿಭಕ್ತವರೇಣ್ಯರಾದ ವೈಕುಂಠದಾಸರನ್ನು ಸಂದರ್ಶಿಸಲು ಬಯಸಿಬೇಲೂರಿಗೇ ಬಂದು ಬೀಡು ಬಿಟ್ಟಿದ್ದಾಗ ನಡೆದ ಅಪೂರ್ವ ಘಟನೆಯೊಂದು ವೈಕುಂಠದಾಸರೇ ರಚಿಸಿದ ಕೀರ್ತನೆಯಿಂದ ಗೊತ್ತಾಗುತ್ತದೆ.

ಇದೇ ರೀತಿಯಲ್ಲಿ ಕನಕದಾಸರು "ಬಂಟನಾಗಿ ಬಾಗಿಲ ಕಾಯ್ವೆ ಹರಿಯ ವೈಕುಂಠದ ಸೊಂಪಿನ ದಾಸರ ಮನೆಯ" ಎಂದು ರಚಿಸಿರುವ ಕೀರ್ತನೆ ವೈಕುಂಠದಾಸರನ್ನೇ ಕುರಿತುದೆಂದು ದಿ|| ಜಿ. ವರದರಾಜಾರಾಯರು ಅಭಿಪ್ರಾಯಪಟ್ಟಿದ್ದಾರೆ. ಕನಕದಾಸರು ಕೆಲವು ಕಾಲ ಬೇಲೂರಿನಲ್ಲಿ ನೆಲಸಿದ್ದರೆಂದೂ, ಆಗ ವೈಕುಂಠದಾಸರ ಸಂದರ್ಶನವಾಗಿ ಅವರ ಸೇವೆ ಮಾಡಿದರೆಂದೂ ಐತಿಹ್ಯವಿದೆ.

ಅಚ್ಯುತ ವಿಠಲದಾಸರೆಂಬುವರೊಬ್ಬರು ವೈಕುಂಠದಾಸರಿಗೆ ಅಪಚಾರ ಬಗೆದು, ಕಣ್ಣು-ನಾಲಗೆಗಳನ್ನು ಕಳೆದುಕೊಳ್ಳಲು ಆಗ ವೈಕುಂಠದಾಸರು ಸ್ವಾಮಿಯನ್ನು ಮರೆಹೊಕ್ಕು ಅವರನ್ನು ಉದ್ಧಾರ ಮಾಡಿದರೆಂಬುದಾಗಿ ಅಚ್ಯುತವಿಠಲಾಂಕಿತ ದೇವರನಾಮವೊಂದರಲ್ಲಿ ಉಕ್ತವಾಗಿದೆ. ದಿ|| ಜಿ. ವರದರಾಜಾರಾಯರು ಅಭಿಪ್ರಾಯಪಟ್ಟಿರುವಂತೆ ಬೇಲೂರು ವೈಕುಂಠದಾಸರನ್ನು ಕುರಿತು ಹೆಚ್ಚು ಮೂಲ ಸಾಮಗ್ರಿಗಳು ಉಪಲಬ್ಧವಾದದ್ದೇ ಆದಲ್ಲಿ ನೂತನ ಬೆಳಕು ಚೆಲ್ಲಲು ಸಹಕಾರಿಯಾಗುತ್ತದೆ.

## ಉಪಸಂಹಾರ

'ವೇಲಾಪುರಿ ಕೇಶವನೇತಿ ಗೀತಾ' ಹಸ್ತಪ್ರತಿಯಲ್ಲಿ ಕಂಡುಬರುವ ಕೀರ್ತನೆಗಳ ಮಾದರಿಗಳ ಪಾಠಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ವೇಲಾಪುರದ ಚೆನ್ನಕೇಶವನ ಅಂಕಿತಗಳುಳ್ಳ ಕೀರ್ತನೆಗಳೂ, "ಕಾಗಿನೆಲೆಯಾದಿ ಕೇಶವನ"—ಕನಕದಾಸರ ಕೀರ್ತನೆಗಳೂ, ಓಲೆಪುಟ ೮ಗರಲ್ಲಿ 5ನೇ ಸಾಲಿನಲ್ಲಿರುವ...........ವೈಕುಂಟದೊಳಗೇ || ಹರ ಚತುರ್ಮುಖವಂ | ದಿತನೆ ಅಚ್ಚುತ ವಿಠಲ ಕರುಣಾಕರನೆ ವೆಲಾಪುರದ (ಸಾಲು 6) ಚೆನಿಗರಾಯಾ ||ಜ|| ಮುಂತಾದ ಕೀರ್ತನೆಗಳೂ ಒಂದೇ ಕಟ್ಟಿನಲ್ಲಿ ಲಭಿಸಿರುವುದು ಗಮನಾರ್ಹವಾದುದು. ಇದನ್ನು ಸಂಪಾದಿಸಿ ಸಶಾಸ್ತ್ರೀಯವಾಗಿ ಪಾಠ ಪರಿಷ್ಕರಣಗಳನ್ನು ಕೈಗೊಂಡಲ್ಲಿ ಬೇಲೂರು ವೈಕುಂಠದಾಸರ ಕೀರ್ತನೆಗಳನ್ನು ಕುರಿತು ನೂತನ ಬೆಳಕು ಚೆಲ್ಲಲು ಸಹಕಾರಿಯಾಗುತ್ತದೆ.

## ಓಲೆ ಪುಟ—೪೦ ಮುಂಭಾಗ

ಸಾಲು 1) ಯಿಂದುವದನೆ ಸಹಿತಾ | ಪುಣ್ಯದೊಳಗಾಡಿ | ನಂದ

,, 2) ಗೋಕುಲದಲ್ಲಿ | ಬೆಳದಾವಗೇ | ಮಂದಗಮನೆಯರ | ಮುಂದೆ
ನಿರ್ವಾಣದಿ | ನಿಂದ ಮೂರುತಿಗಾರತಿಯೆ ತಿರ್‍ರೆ ||೨|| ತುರುಗಾರ
ನೆರಿ | ದುಷ್ಟರ ಶೀಳಿ ಭಕ್ತರ | ಪೊರೆವ ಮೂರುತಿ | ಹಯ

,, 3) ವದನನಿಗೇ || ವರದ ವೆಲಾಪುರಿ | ಚೆಂನಿಗರಾಯನ | ಚರಣ ಕಮಲ
ಗಾರತಿಯೆತಿರ್‍ರೆ ||೩|| ಶ್ರೀಶ್ರೀಶ್ರೀಶ್ರೀಶ್ರೀಶ್ರೀಶ್ರೀ ರೂರುಬಬಭನವೆ |
ರೂಭನವೇ || ಜಲದೊಳು

,, 4) ಮತ್ಸ್ಯವತಾರನಿಗೇ | ಗಿರಿಯ ಬೆಂನ್ನಾ ತಾಳ್ವಕೂರ್ಮನಿಗೇ
ಧರೆಯನುದ್ಧರಿಶಿದ | ನರಕನತಾರಗೇ | ಚಿಕ್ಕ ಮಗುವನು ಕಾಯ
ಶ್ರೀ ನರಸಿಂಹ್ಯಗೆ | ಸೊ

,, 5) ಭೂಮಿಯ ದಾನನ ಬೆಡಿದವಗೆ | ಆ ಮಹ ಕ್ಷತ್ರಿಯರ | ಗೆಲಿದವಗೆ
ರಾಮಚಂದ್ರಾನೆಂಬೊ | ಸ್ವಾಮಿ ಶ್ರೀರಾಮಗೇ ಸತ್ಯಭಾಮೆರಿಗೊಲಿದ್ದ
ಗೋಪಾಲಕೃಷ್ಣಗೇ ||೨||

ಹಿಂಭಾಗ 1) ಬತ್ತಲೆ ಬೌದ್ಧವತಾರನಿಗೇ | ಅಶ್ವವನೆರಿದ ಕಲ್ಕ್ಯನಿಗೇ | ಹತ್ತಾವ
ತಾರದಿ ಭಕ್ತರ ಸಲಹುವ | ಅಚ್ಯುತ ಪುರಂದರ ವಿಠಲನಿಗೇ ||೩||
ಶ್ರೀ ಭೂದೇವಿ ಅರಸು ವಿಠಲನಿಗೇ || ಪಲ್ಲ

2) ಮಂಗಳ ಮುಖ್ಯ ಪ್ರಾಣೇಶಗೇ | ಜಯಮಂಗಳ ಗುರು ಮಧ|
ಮುನಿರಾಯಗೇ || ಅಂಜನಾದೇವಿಯ | ಕಂದಗೆ ಮಂಗಳ |
ಕಂಜಾಕ್ಷ ಹನುಮಂತಗೆ ಮಂಗಳಾ | ಸಂಜೀವನವತಂ | ದಿ

3) ತ್ತಗೆ ಮಂಗಳ | ಸುಜನರ ಪರಿಪಾಲಗೆ ಮಂಗಳಾ ||೧|| ಅತಿ
ಬಲವತ್ತರ್‍ರೆ | ಭೀಮಗೆ ಮಂಗಳ | ಪ್ರತಿಮಲ್ಲರ | ಗೆಲಿದಗೆ
ಮಂಗಳ | ಸತಿಯ ಸೀರೆಯ | ಸೆಳದ ದೈತ್ಯ

4) ರ ಕೊಂದು | ಪೃಥುವಿಯೊಳಗೆ ಚಂಡ | ನಾಡಿದಗೇ ||೨|| ಸಿತಾ
ದೆಸಿಕುಮಾರಗೆ ಮಂಗಳ | ಶ್ರೀರಾಮರ ಭಂ | ಟಗೆ ಮಂಗಳ್ವ
ಗೋಪಾಲಕೃಷ್ಣರ ಪೂಜೆಯ ಮಾಡುವ

5) ಗುರುಮಧ್ವಮುನಿರಾ | ಯಗೆ ಮಂಗಳಾ ||೩|| ರಾಗ ಮುಖಾರಿ |
ತಾಳ ಜಂಪೀ | ತಪ್ಪನೀ ಸೊಪ್ಪನಿಳಬೆಕುಯೆಂನಾ | ಅಪ್ಪ ಚೆಂನಪ್ಪ |
ವೆಲಾಪುರಾಧಿಶಾ || ನೀನೊಲಿದವನಿಗೆರಡ

ಓಲೆ ಪು-೮೧

1) ನೆಣಿಸಿ ಸೈರಿಸುತಿಹೆಯು | ಮಾನಾವಮಾನವಾ | ರದು ದಾಸರಾ || ಹೀನ
ನಾದೆನು ಮುಂದನರಿಯದ ಗ್ಲಾನದೊಳು ದಾನವಾಂತಕನಿಂನ | ಗುಣಗಳನು
ಮರದೂ ||೧|| ಯುಂನಹಂಕಾರಕೆ

2) ತಕ್ಕ ಪ್ರಾಯಶ್ಚಿತ್ತ | ವಂನು ಮಾಡಿದೆಯಲೆ ಮುರ ವೈರಿಯೇ || ಕಂಣು
ನಾಲಿಗೆಯನುಡುಗಿರಿ | ಯಿತ್ತು ಸಕ್ಕೀರ್ತಿಯಂನ್ನು ಪಡದೆಯಾ ನಿಷ್ಕಳಂಕ
ಯೆಂನ್ನೈಯಾ || ಅಂತರಾತ್ಮಕನೆ

3) ನೀನೆಂತೆಂತು ಮನವ | ನಿತ್ತಂ ಕಾಡಿದೆನು ಸ್ವಾತಂತ್ರವೆನು || ಚಿಂತಾಯಕನೆ
ಚಿದಾ | ನಂತರೂಪನೆ ಅನಂತಶಯನನೆ ಅಪರಿ | ಮಿತಮಹಿಮ
ಕ್ರಿಷ್ಣಾ ||೩|| ನಿಂನ ಮಹಿ

4) ಮೆಯನರಿತ | ರಿಯದನುಭವಿಶಿದೆಯಾ | ಭಂನವನು ಬಂಟರಿಗೆ | ಬಂಟ
ಕೃಷ್ಣಾ | ಮುಂನಂತೆ ಕೃಪೆಯ ಮಾಡಿಂನು ದೋಷಗಳ ಕಳೆ | ಚೆನ್ನಕೇಶವ
ಸ್ವಾಮೀ | ನಿಜ ದಾಸನಾಣೇ

5) ||೪|| ಮರಳಿ ಭವದೊಳಗಿಕ್ಕ | ದಿರು ಮುಕ್ತಿಯಿತ್ತು | ಕಿಂಕರನ ಮಾಡಿಕೊ |
ವೈಕುಂಟದೊಳಗೇ || ಹರಚಿತು ಮರ್ಮಖವಂ | ದಿತನೆ ಅಚ್ಯುತ ವಿಠಲ |
ಕರುಣಾಕರನೆ ವೆಲಾ | ಪುರದ

6) ಚೆನಿಗರಾಯಾ ||೫|| ಶ್ರೀ ಶ್ರೀ ಶ್ರೀ ಶ್ರೀ

ಸೂ : ಹಸ್ತ ಪ್ರತಿಯ ಸ್ವರೂಪ ನಿರ್ಧಾರದ ಅನುಕೂಲಕ್ಕಾಗಿ ಹಸ್ತ ಪ್ರತಿಯಲ್ಲಿರುವಂತೆಯೇ ಸಾಲುಗಳನ್ನು ಮತ್ತು ಸ್ಖಾಲಿತ್ಯಗಳನ್ನು ಉಳಿಸಿಕೊಳ್ಳಲಾಗಿದೆ.

# ನನ್ನೂಲಿನ ಹಿನ್ನೂಲ್‌ಗಳು

(ಹಿಂದಿನ ಸಂಚಿಕೆಯಿಂದ)

ಸಿ. ನಟರಾಜ್

14. ನನ್ನೂಲಿನ ಈಚಿನಕಾಲಕ್ಕೆ ಆದಱ ಹಲವು ವ್ಯಾಖ್ಯಾನಗಳಲ್ಲದೆ [1]ಇಲಕ್ಕಣವಿಕ್ಕವಮ್, [2]ಪಿರಯೋಗ ವಿವೇಗವಮ್, [3]ಇಲಕ್ಕಣಕ್ಕೊತ್ತು, [4]ತೊಲ್ಕಾಪ್ಪಿಯ ಪಾಯಿರವಿರುತ್ತಿ, [5]ತೊಲ್ಕಾಪ್ಪಿಯ ಮುದಱ್ಚೂತ್ತಿರವಿರುತ್ತಿ, [6]ಇಲಕ್ಕಣವಿಳಕ್ಕಸೂಱಾವಳಿ, [7]ತೊನ್ನೂಲ್‌ವಿಳಕ್ಕವಮ್, [8]ಮುತ್ತುವೀರಿಯವಮ್, [9]ಸುವಾಮಿನಾದವಮ್, [10]ಅಱುವಗೈಇಲಕ್ಕಣವಮ್ ಎನ್ನುವ ಸಾಂಪ್ರದಾಯಿಕ ಲಕ್ಷಣ ಗ್ರಂಥಗಳು ಉಂಟಾಗಿವೆ.

15. ಇವುಗಳಲ್ಲಿ—ಇಲಕ್ಕಣವಿಳಕ್ಕಮ್, ಪಿರಯೋಗವಿವೇಗಮ್, ಇಲಕ್ಕಣಕ್ಕೊತ್ತು ಎನ್ನುವ ಮೂಱೂ ತನಿಮೇಲ್ಮೆಯನ್ನು ಉಳ್ಳವು. ಮೊದಲನೆಯದು ಪಂಚ ಲಕ್ಷಣವನ್ನು ಅಪ್ಪಿಕೊಂಡದು. ಎರಡುಮೂಱನೆಯವುಗಳ ಹೆಚ್ಚುಗಾಱಿಕೆ ಶಬ್ದ ಲಕ್ಷಣವೊಂದನ್ನೇ ಕುಱಿತದೂ ಅವವುಗಳ ಆಚಾರ್ಯರೇ ಬರೆದಿರುವ ನೂಱ್ಪಾಗಳನ್ನು ಉಳ್ಳದೂ ಆಗಿದೆ. ಇವೆಲ್ಲವುಗಳ ಮೇಲ್ಮೆ ಅವವುಗಳ ಆಚಾರ್ಯರೇ ಒರೆ ಬರೆದಿರುವುದು ಇಲಕ್ಕವಿಳಕ್ಕಣಮ್ಮಿನಲ್ಲಿ ಪೊೞಿಪ್ಪುರೈ (=ಒಟ್ಟು ಹುರುಳೂರೆ ; ತಾತ್ಪರ್ಯ ವ್ಯಾಖ್ಯಾನ) ಇದ್ದರೆ ಉೞಿದೆರಡಱಲ್ಲಿ ಅದಿಲ್ಲ. ಪಿರಯೋಗವಿವೇಗದಲ್ಲಿ ನೂಱ್ಪಾಗಳಿಗೆ ಸಾಕನಿಸುವನಿತು ಮೊತ್ತವಾಗಿ ಹುರಳನ್ನು ಹೂಱಿಗಿಟ್ಟಿರುವರು. ಇಲಕ್ಕಣಕ್ಕೊತ್ತು ಆದಕ್ಕೂ ಎಡೆವಡೆದಿಲ್ಲ. ಬೞಿಕೆಗಳ ಬೆಳಕಿನಲ್ಲೇ ನೂಱ್ಪಾಗಳ ಸಂಗತಿಗಳು ನುಣ್ಣಿತ್ತಾಗಿ ತಿಳಿಯಬೇಕಾದ ನೆಲೆಯಲ್ಲಿ ಇಲಕ್ಕಣಕ್ಕೊತ್ತು ಇದೆ. 'ತಮಿೞ್ ಮೊೞಿಯಿಲಕ್ಕಣ'ವನ್ನು ಬಲ್ಲವರು ಸಂಸ್ಕೃತ ಭಾಷಾ ಲಕ್ಷಣವಿಚಾರಗಳನ್ನು ತಿಳಿಯಲು ಇಲಕ್ಕಣಕ್ಕೊತ್ತು ಒದಗಿದರೆ, ಸಂಸ್ಕೃತವನ್ನು ಚೆನ್ನಾಗಿ ಬಲ್ಲವರು ತಮಿೞಿನ ಇಲಕ್ಕಣವನ್ನು ತಿಳಿಯಲು ಪಿರಯೋಗವಿವೇಗ (=ಪ್ರಯೋಗ ವಿವೇಕ)ವು ಒದಗುತ್ತದೆ.

ಇಲಕ್ಕಣವಿಳಕ್ಕವ್ :

16. ಹದಿನೇಳನೆಯ ಶತಮಾನದ ಕೊನೆ ಹಾಗೂ ಹದಿನೆಂಟನೆಯ ಶತಮಾನದ ಮೊದಲ ಕಾಲಕ್ಕೆ ತೊಲ್ಕಾಪ್ಪಿಯದ ಬಳಿಕೆ ತುಟ್ಟಿಯಾದುದನ್ನೂ ನನ್ನೂಲ್ ಚಿಣ್ಣಾಲಾದುದನ್ನೂ ಕಂಡ ದರುಮಪುರಾದೀನ ಮಡಾದಿಪದಿ ವೃತ್ತಿಯ ನಾದದೇಸಿಗರ್ ಬರೆದುದೇ ಇಲಕ್ಕಣವಿಳಕ್ಕವ್. ಇವರು ತೊಲ್ಕಾಪ್ಪಿಯದಂತೆ ಪಂಚ ಲಕ್ಷಣವನ್ನು ಕುಱಿತ ತಮ್ಮ ಗ್ರಂಥವನ್ನು ಎೞುತ್ತು, ಸೊಲ್, ಪೊರುಳ್ ಎನ್ನುವ ಮೂಱು ಅಧಿಕಾರಗಳಲ್ಲಿ ತಂದರು. ಆದಱಿಂದಾಗಿ ಇವರ ಗ್ರಂಥ ಕುಟ್ಟಿತ್ತೊಲ್ಕಾಪ್ಪಿಯಮ್ (=ಮಱಿತೊಲ್ಕಾಪ್ಪಿಯಮ್) ಎಂದು ಕರೆಸಿಕೊಂಡಿದೆ. ಇದಱೊಳಗೆ ಅವರು ಬರೆದ ನೂಱ್ಪಾಗಳಲ್ಲದೆ ಅನ್ಯಸೂತ್ರಗಳೂ ಉಂಟು. ಇದಱ ಕರ್ತ್ತಗಳೇ ಇದಕ್ಕೆ ಒರೆಯೊಂದನ್ನು ಬರೆದು ಅದಱಲ್ಲಿ ಅವರ ನೂಱ್ಪಾಗಳಿಗೆ ತಾತ್ಪರ್ಯ ಅಂದರೆ ಒಟ್ಟು ಹುರುಳನ್ನೂ, ತೊಲ್ಕಾಪ್ಪಿಯದ ಒರೆಯೋಜರ ಇಂಗಿತಗಳನ್ನೂ ಒಂದುಗೂಡಿಸಿದ್ದಾರೆ. ಇವರೂ ಹೊಸದನ್ನು ಹೊಗಿಸುವ ವರಸೆಯಿಂದ ತಮ್ಮ ಕಾಲದ ಬಳಿಕೆಗೆ ತಕ್ಕಂತೆ ಸಂಸ್ಕೃತಲಕ್ಷಣವನ್ನು ಅಪ್ಪಿಕೊಂಡರು ; ಅಂತೆಯೇ ತಮ್ಮ ಹೊತ್ತಗೆಗೆ ತಾವೇ ಒರೆಯೊರೆದರು. ತಮ್ಮ ಗ್ರಂಥದ ಹಲವೆಡೆಗಳಲ್ಲಿ ನನ್ನೂಲಿನಂತೆ ಹೊಂದಿಸಿಕೊಳ್ಳದೆ ನೇರವಾಗಿ ತೊಲ್ಕಾಪ್ಪಿಯದಿಂದಲೇ ಎತ್ತಿಹೇೞಿದರಾದರೂ ಅಕ್ಷರಾಧ್ಯಾಯಕ್ಕೆ ಹೊಂದಿದಂತೆ ಕ್ರಮನಿಯಮಗಳಲ್ಲಿ ಜನಪ್ರಿಯವಾಗಿದ್ದ ನನ್ನೂಲನ್ನೇ ಅನುಸರಿಸಿ ಇನ್ನೂಱೈವತ್ತು ಸೂತ್ರಗಳನ್ನು ನೇರವಾಗಿ ತೆಗೆದುಕೊಂಡಿರುವರು.

ಪಿರಯೋೀಗವಿವೇಗವ್ :

17. ಇದೇ ಕಾಲಕ್ಕೆ ಉಂಟಾದ ಗ್ರಂಥವೇ ಸುಪ್ಪಿರಮಣಿಯದೀಟ್ಚಿತ (ಸುಬ್ರಹ್ಮಣ್ಯದೀಕ್ಷಿತ) ರಿಂದ ಉಂಟಾದ ಪ್ರಯೋಗವಿವೇಕವ್ : ಮೂಲವೂ ಒರೆಯೂ ಉಳ್ಳದು. ಇದು ಸಕ್ಕದಲಕ್ಕಣಗಳ ಹೊದ್ದುಗೆಗಳನ್ನು ಕಾಣಿಸುವುದು-ಹದಿನೇಳನೆಯ ಶತಮಾನದವರೆಗಿನ ಕಾವ್ಯರೂಢಿಯ ಬಗೆಗಿನ ಸಂಗತಿಗಳು ಹಲವೂ ಲೋಕರೂಢಿಯ ಸಂಗತಿಗಳು ಕೆಲವೂ ತಿಳಿಸಲಾಗಿವೆ. ತನ್ನೊಳಗಿನ ಕರುತ್ತುಗಳನ್ನು ಹೊಱಗಿಡುವಂತೆ ನೂಱ್ಪಾಗಳಿಗೆ ತಾತ್ಪರ್ಯಹೇೞದೆ ತಕ್ಕಹುರುಳನ್ನು ಕುಱಿತಿರುವರು. ಬಡಗುಭಾಷೆಬಲ್ಲವರು ತಮಿೞ್ನುಡಿಯ ಇಲಕ್ಕಣವನ್ನು ತಿಳಿಯಲು ಪ್ರಯೋಗವಿವೇಕವು ಒದಗುತ್ತದೆ. ಇದಱ ಕರ್ತೃಗಳು ಸಂಸ್ಕೃತಭಾಷಾ ಹಾಗೂ ತಮಿೞ್ನುಡಿಗೂ ಲಕ್ಷಣ ಬಹುವಾಗಿ ಒಂದೇ ಎಂದು ತಿಳಿದಿದ್ದರು : ಅವೆರಡಕೂ ಉಳ್ಳ ಒಕ್ಕಟ್ಟು ಬೇಱ್ಪಾಟುಗಳನ್ನು ಹೇೞುವ ನೂಱ್ಪಾವೊಂದು ಹೀಗಿದೆ :

ಸಾಟ್ಱಿಯ ದೆಯ್ವಪ್ ಪುಲವೋರ್ ಮೊೞಿಕ್ಕುಮ್ ತಮಿೞ್ಮೊೞಿಕ್ಕುಮ್
ವೇಟ್ಱುಮೈ ಕೂಱ್ಱ್ ತಿಣೈಪಾಲ್ ಉಣರ್ತ್ತುಮ್ ವಿನೈವಿಗುದಿ
ಮಾಟ್ಱುರುಮ್ ದಯ್ವ ಮೊೞಿಕ್ಕಿಲ್ಲೈ ; ಪೇರ್ಕುಎೞಿಸಿ ವಾಯ್
ಉರುಬುಮ್
ತೇಟ್ಱಿಯ ಲಿಙ್ಗಮ್ ಒರುಮೂನ್ಱುಮ್ ಇಲ್ಲೈ ಸೆಱಿನ್ದಮಿೞ್ಕೇ ॥೧೮॥

18. (ಇದಱ ಹುರುಳು) ಸಾಟ್ಱಿಯ -ಸಾಱಿದ (=ಶ್ಲಾಘಿತ, ಚಾಟಿತ, ಚಾಟಿಸಿದ), ದೆಯ್ವಪ್ ಪುಲವೋರ್ ಮೊೞಿಕ್ಕುಮ್-ದೈವಪಂಡಿತಭಾಷೆಗೂ, ತಮಿೞ್ಮೊೞಿಕ್ಕುಮ್ - ತಮಿೞುಮೊೞಿಗೂ, ವೇಟ್ಱುಮೈ ಕೂಱ್ಱ್-ಬೇಱ್ ಪಾಟನ್ನು ಹೇೞುವದಾದರೆ, ತಿಣೈ - ಇರುತಿಣೈ - ಇತ್ತರ (=¹ಮೇಲ್ತರ ²ಮೇಲಲ್ತರ : ¹ಮಹತ್ವರ್ಗ ²ಅಮಹತ್ವರ್ಗ) ಹಾಗೂ, ಪಾಲ್-ಇರುಪಾಲ್-ಇಪ್ಪಾಲ್-¹ಆಣ್ ಪಾಲ್-ಆಳ್ ಪಾಲು- (=ಪುಲ್ ಕುಱುಹು : ಪುಲ್ಲಿಂಗ) ²ಪೆಣ್ ಪಾಲ್-ಪೆಣ್ ಪಾಲು, (=ಪೆಳ್ ಕುಱುಹು ; ಸ್ತ್ರೀಲಿಂಗ)ಗಳನ್ನು. ಉಣರ್ತ್ತುಮ್-ಅಱಿಪುವ, ವಿನೈವಿಗುದಿ-ಗೆಯ್ಮೆಗೊನೆ (=ಆಖ್ಯಾತಪ್ರತ್ಯಯ) ಅಂದರೆ ಮಹದ ಮಹದ್ವರ್ಗ ಪುಂಸ್ತ್ರೀಲಿಂಗಸೂಚಕಾಖ್ಯಾತಪ್ರತ್ಯಯಗಳು, ಮಾಟ್ಱುರುಮ್-ಮಾತಾಡಲಿದಾದ, ದೆಯ್ವಮೊೞಿಕ್ಕಿಲ್ಲೈ - (ಸಮ-ನಿಗ್ರಹೀತ=ಪ್ರತ್ಯಾಹೃತ=ಸಂಸ್ಕೃತ ಅಂದರೆ 'ಸಮುಱುಕಿಱುತ'ವನ್ನು ಸಂಸ್ಕೃತ'ವಾಗಿ ತಿರಿಗಿಸಿದ ಕಟ್ಟುಮಾತಾಗಿ ನಿಂತ ಮಾತಾದುದಱಿಂದ ದೇವಭಾಷೆಗೆ ಇಲ್ಲ, ಪೇರ್ಕ್ಕು ಎೞುವಾಯ್ ಉರುಬುಮ್ -ಹೆಸರಿಗೆ ಎತ್ತುಗಡೆ (ಬಗೆಯು) ಅಂದರೆ ನಾಮವಾಚಕಕ್ಕೆ ಕೃತಕವ್ಯಾಕರಣಾಧಾರಿತ ಅಂತ್ಯವರ್ಣಗಳಿಂದ ವಿವಕ್ಷಿಸುವ ನಾಮವಾಚಕದ ಕರ್ತೃರ್ಥದ ವಿಭಕ್ತಿರೂಪೂ), ತೇಟ್ಱುಯ-ತೇಱಿದ (=ತೇಟಿಯ-ತಿಳುಸುಱುವಿನ ಬಹುಮಟ್ಟಿಗೆ ಗೊತ್ತುಪಡಿಸಿಕೊಳ್ಳುವ) ಅವಧಾರಣಾರ್ಥಕ, ಲಿಙ್ಗಮ್ ಒರುಮೂನ್ಱು-ಕಟ್ಟುಕುಱುಹುಮೂಱೂ ಅಂದರೆ ಕೃತಕ ತ್ರಿಲಿಙ್ಗರೂಪೂ, ಇಲ್ಲೈ ಸೆಱಿನ್ದಮಿೞ್ಕೇ-(ಹುಟ್ಟುಮಾತಾಗಿ ನಡವ ಮಾತಾಮುದಱಿಂದ) ಇಲ್ಲ, ತುಂಬಿದ ಚಂದಮಿೞಿಗೆ : ಏ-(ಕೊನೆಯ ಗೊತ್ತೀತ್ವ, ಗೊತ್ತುಪಡಿಸುವ ಏ ಅನ್ನುವ ಆಸೆ ಅಂದರೆ ಕೊರಲ ಜೀಕು) ; ಎನ್ನುವ ಹಾಗೆ.

ಇಲಕ್ಕಣಕ್ಕೊತ್ತು :

19. ಇದೇಕಾಲಕ್ಕೆ ಉಂಟಾದ ಮತ್ತೊಂದು ಹೊತ್ತಗೆಯೇ : ತಿರುವಾಡುತುಱೈ ಮಡಾದಿಪದಿಗಳಾದ ಈಸಾನದೇಸಿಗರೆಂದೂ ಕರೆಸಿಕೊಳ್ಳುವ ಸುವಾಮಿನಾದ ದೇಸಿಗರ 'ಇಲಕ್ಕಣಕ್ಕೊತ್ತು'. ಈ ಗ್ರಂಥಾಚಾರ್ಯರೂ ಸಂಸ್ಕೃತಭಾಷಾ ಹಾಗೂ ತಮಿೞ್ಮೊೞಿ ಎನ್ನುವ ಎರಡಕ್ಕೂ ಲಕ್ಷಣ ಅಂದರೆ ನಡೆ ಒಂದೇ ಎಂದು ನಂಬಿದ್ದವರು. ಪಂಚಲಕ್ಷಣಗಳಲ್ಲಿ ಶಬ್ದಲಕ್ಷಣವೇ ಶ್ರೇಷ್ಠವೆಂದು ಸಂಸ್ಕೃತಕಲಿತವರು

ತಿೞಿಯುವರು. ಅಂತೆಯೇ ಸೊಲ್ಲಿನ ಒಗೆಗೆ ಇವರ ಇಲಕ್ಕಣಕ್ಕೊತ್ತು ಉಂಟಾದುದು. ಈ ಗ್ರಂಥಾಚಾರ್ಯರ ಪ್ರಕಾರ ಶಬ್ದಲಕ್ಷಣಶಾಸ್ತ್ರವೆಂಬುದು, ಜನರು ಹೀಗೇ ತಮ್ಮ ಮಾತನ್ನು ರಚಿಸಿಕೊಳ್ಳಬೇಕೆಂದು ನಿಯಮಿಸುವ ಶಾಸನಸಮೂಹವಲ್ಲ; ಅಜ್ಞಾನಿಗಳೂ ಅಶಿಷ್ಟರೂ ಆದವರ ಕಲ್ಪನೆಯನ್ನೂ ಭ್ರಾಂತಿಯನ್ನೂ ಅನುಸರಿಸದೆ, ಮೇಲ್ತರದ ವಿಚಾರಶೀಲವಿದ್ಯಾವಂತಜನರು ವಾಡಿಕೆಯಲ್ಲಿ ಬೞಸುವ ಮಾತಿನಿಂದಲೂ ಬರಹದಿಂದಲೂ ಲಕ್ಷ್ಯವಿಟ್ಟು ಮೇಲೆತ್ತಿದ ಲಕ್ಷಣಸೂತ್ರಸಂಗ್ರಹ. ಲಕ್ಷಣಕ್ಕೆ ಅನುಸರಿಸಿ ಬಂದಿರುವ ಇಲಕ್ಕಣಕ್ಕೊತ್ತುವಿನ ವಿಶಿಷ್ಟಪೀಠಿಕೆಯಿಂದ, ಅಂದಿನವರೆಗೆ ತಮಿೞಿನ ತೊಲ್ಕಾಪ್ಪಿಯ ಹಾಗೂ ಒರೆಗಳೂ, ನನ್ನೂಲ್ ಮೊದಲಾದ ಚಿಣ್ಣೂಲುಗಳೂ ಹೞಯಕಾವ್ಯಗಳೂ ಅಲ್ಲದೆ ಸಂಸ್ಕೃತ ಗ್ರಂಥಗಳ ಬೞಿಯಲ್ಲಿ, ಹದಿನೇೞನೆಯ ಶತಮಾನದವರೆಗಿನ ಜನಬೞಕೆಯಲ್ಲಿ ಬೆಳೆದು ನೆಗಟ್ಟಿಬಂದುಳ್ಳ ಸೊಲ್‌ಹೊಂದಾಣಿಕೆ ಸೊಲ್‌ತೊಡರ್‌ಹೊಂದಾಣಿಕೆ ಎಂಬವುಗಳ ಬಗೆಗೆ ಇಳಿದಾದ ವಿಧಿಗಳನ್ನು ಬಿಟ್ಟು, ಅರಿದಾದ ವಿಧಿಗಳನ್ನೇ ಪುರಿವಿಡಿಯಿಂದ ೧೩೧ ನೂಱ್ಪಾಗಳಲ್ಲಿ ಅಳವಡಿಸಿ, ಅವರೇ ಬರೆದ ಒರೆಯಿಂದ ಇಳಿದಱಿಲ್ಲಿ ತಿಳಿಯಪಡಿಸುವದೇ ಈ ಹೊತ್ತಗೆಯ ಉದ್ದಶ್ಯ ಓದುಗನಿಗೆ ಆಗುವ ಗೞಿಕೆಯೆಂದು ತಿಳಿದುಬರುತ್ತದೆ.

20. ಈ ಇಲಕ್ಕಣಕ್ಕೊತ್ತುವಿನ ೧೩೧ ನೂಱ್ಪಾಗಳಲ್ಲಿ–ಪಾಯಿರವಿಯಲ್ (=ತಿಳಿವಿನೋದು, ತಿಳಿವಿನ ಹಸುಗೆ; ಪೀಠಿಕಾಪ್ರಕರಣ) ಆಗಿ ಹನ್ನೆರಡು, ವೇಟ್ಟುಱುಮೈಯಿಯಲ್ (=ಬೇಱ್ಪಾಟಿನ ಓದು, ಬೇಱ್ಪಾಟಿನ ಹಸುಗೆ; ವಿಭಕ್ತಿಪ್ರಕರಣ) ಆಗಿ ಐವತ್ತೆರಡು, ವಿನ್ನೈಯಿಯಲ್ (=ಗೆಯ್ಮೆಯೋದು, ಗೆಯ್ಮೆ ಹಸುಗೆ; ಕ್ರಿಯಾಪ್ರಕರಣ) ಆಗಿ ಇಪ್ಪತ್ತೆರಡು, ಒೞಿಬಿಯಲ್ (=ಉೞಿಕೆಯೋದು, ಪುಱಮ್ಮೋದು; ಪರಿಶಿಷ್ಟ – ಪರಿಪೂರಣ – ಪ್ರಕರಣ–) ಆಗಿ ನಲವತ್ತೈದುನೂಱ್ಪಾಗಳು ಹಮ್ಮಿವೆ. ಇಲಕ್ಕಣವಿಳಕ್ಕದಂತೆ ಒಟ್ಟು ಹುರುಳಾಗಲೀ, ಪ್ರಯೋಗವಿವೇಕದಂತೆ ನೂಱ್ಪಾಗಳಿಗೆ ಶಕ್ಕಹುರುಳಾಗಲೀ ಹೇೞಿದೆ, ಉದಾಹರಣೆಗಳ ಬೆಳಕುಕೊಂಡೇ, ತಿಳಿವುತಿಳಿದೇ, ನೂಱ್ಪಾಸಂಗತಿಗಳು ನುಣ್ಣಿತ್ತಾಗಿ ನುಡಿದಿರುವ ನೆಲೆಯಲ್ಲಿ ಇಲಕ್ಕಣಕ್ಕೊತ್ತು ಇದೆ. ತಮ್ಮೊಳಗಿನ ಕರುತ್ತುಗಳು ಮುಟುಸಾಗಿ ಹೊಱಗೆಡಹಲು ಬೇಕಾದ ಚುಟಕದ ಒರೆಬರೆದಿರುವರು.

21. ಗ್ರಂಥದ ತೊಡಗಿನಲ್ಲಿ ವಿನಾಯಕಶಿವಮುರುಗದೇವರನ್ನೂ, ತಮಗೆ ಅಱಿಹಿನ ಅಯ್ಯರಾಗಿ ಅಱಿಮೆದೋಱಿದ ತಿರುವಾಡು ತುಱೈ ಅಮ್ಬಲವಾಣ ದೇಸಿಕರನ್ನೂ, ಸಂಸ್ಕೃತಭಾಷಾಚಾರ್ಯರಾಗಿ ಸಮ್ಮತಿಸಿದ ಕನಕಸಭಾಪತಿ ಶಿವಾಚಾರ್ಯರನ್ನೂ, ತಮಿೞಾಸಿರಿಯರಾಗಿ ಒಪ್ಪಿದ ಮಯಿಲೇರುಮ್ ಪೆರುಮಾಳ್ ಮಗಿಮದಿಗಳನ್ನೂ ಹೊಗೞಿ, ತಮ್ಮ ಇಲಕ್ಕಣಕ್ಕೊತ್ತು ಹೊತ್ತಗೆಯ ಅಗು ಹೇಗೆಂಬುದನ್ನು–

ಪೀಠಿಕೆಯ ಪ್ರಕರಣದಲ್ಲಿ ಅಂದರೆ ಮುಂತಿಳಿವಿನ ಓದಿನಲ್ಲಿ ಬಿಮ್ಮಿನ ಬಿನ್ನಣಗಳು ಹದಿನಾಱಱಿಂದಲೂ, ಅದನ್ನು ಹೇಗೆ ಪೞಿಗಬೇಕೆಂಬುವನ್ನು—ಹತ್ತು ಬಿನ್ನಹಗಳಿಂದಲೂ, ಅದನ್ನಲ್ಲದೆ ಮತ್ತಾವಹೊತ್ತಗೆಯನ್ನಾಗಲಿ ಹೇಗೆ ನೋಡಬೇಕೆಂಬುದನ್ನು--ಹತ್ತು ಬಿನ್ನಹಗಳಿಂದಲೂ ತಿಳಿಸಿ, ಹೊತ್ತಗೆಯನ್ನು ಬರೆದವರ ಕರುತ್ತಿನ ತನ್ಮೆಯನ್ನು ತಿಳಿಸುವೆಡೆಯಲ್ಲಿ—ಒರೆಗಳು, ಪೞಿಗುವವರನ್ನು ಗಲಿಬಿಲಿಗೊಳಿಸಲೂ ಬಹುದಾದುದಱಿಂದ, ನೂಱ್ಪಾಗಳನ್ನೇ ನೋಡತಕ್ಕದ್ದೆಂದು, ಬಿನ್ನಹದ ಮೇಲಣ ಬಿನ್ನಹ ಹೇೞಿ, ಈ ನೂಲೊರೆದುದಕ್ಕೆ ದೂಸಱನ್ನೂ, ಇದಕ್ಕೆ ತಕ್ಕ ಓದುಗರನ್ನೂ, ಇದಱೊಳಗಿನ ಮುಂಬೞಿಕೆಗಳ ಸುದ್ದಿಯನ್ನೂ ಕುಱಿತ, ಒಂದು ತಿಳಿವೇ ಒಂದುಓದಾಗಿ ನಿಂತಿದೆ.

22. ಸಂಸ್ಕೃತವೂ ಮತ್ತಿನ * ಹದಿನೆಂಟು ಮಾತುಗಳೂ ಆದ ಹತ್ತೊಂಬತ್ತು ಭಾಷೆಗಳ ನಡುವೆ ಅವುಗಳಲ್ಲಿ ಒಂದೊಂದಕ್ಕೂ ಮಾಱ್ಪಾಡುಂಟು. ಒಂದೊಂದು ಭಾಷೆಯಲ್ಲಿ ತೋಱುವ ಹಲವು ಗ್ರಂಥಗಳ ನಡುವೆ ಅವುಗಳಲ್ಲಿ ಒಂದೊಂದಕ್ಕೂ ಮಾಱ್ಪಾಡು ಏಱ್ಪಡುತ್ತದೆ. ಪಂಚಲಕ್ಷಣಗಳನ್ನು ಕುಱಿತ ಗ್ರಂಥಗಳೊಳಗೂ ಎೞುತ್ತು, ಸೊಲ್, ಪೊರುಳ್, ಯಾಪ್ಪು, ಅಣಿ ಎನ್ನುವ ಐದು ಅಧಿಕಾರಗಳೊಳಗೆ ಒಂದಕ್ಕೊಂದು ಮಾಱ್ಪಡುವುದೂ ಉಂಟು ; ಅಂತೆಯೇ ಒಂದುಪ್ರಕರಣದಲ್ಲಿ ಕುಱಿತವಿಧಿ ಅಂದರೆ ಮಾೞ್ಕಿ ಮತ್ತೊಂದುಪ್ರಕರಣದಲ್ಲಿ ನಿಷೇಧಿಸುವುದು ಅಂದರೆ ಮಾಣಿಸುವುದೂ ಉಂಟು ; ಒಂದು ಪ್ರಕರಣದ ಒಂದುಸೂತ್ರವಿಧಿಯನ್ನು ಅದೇ ಪ್ರಕರಣದ ಮತ್ತೊಂದು ಸೂತ್ರವಿಧಿ ತಡೆದುತಳ್ಳುವುದೂ ಉಂಟು ; ಒಂದು ಸೂತ್ರದೊಳಗೂ, ಮೊದಲುಕುಱಿತವಿಧಿಯನ್ನು ಆಮೇಲೆ ಕುಱಿತ ವಿಧಿ ನಿಷೇಧಿಸುವುದೂ ಉಂಟು.

23. ಹೀಗೆ ಉಂಟುಮಾಡಿದ ಹೊತ್ತಗೆಯೋಜರ ಕರುತ್ತನ್ನು ಒಳಗೊಳ್ಳದೆ ಒಂದು ಸೂತ್ರಕ್ಕೆ ಒಬ್ಬೊಬ್ಬ ಒರೆಯೋಜರು ಒಂದೊಂದು ಮತ (= ಕೊಳ್ಗ ; ಅಭಿಗ್ರಹಣ)ವಾಗಿ ಒರೆ ಬರೆವದೂ ಉಂಟು ; ಆ ಒರೆಯೊಳಗೆ ಸೇರಿದ ವೃತ್ತಿವಾಚಕಗಳಿಗೆ ಒರೆಬರೆದವರ ಕರುತ್ತನ್ನು ಅಱಿಯದೆ ಅವರವರ ಉದ್ದೇಶಗಳಲ್ಲಿ ಕೊಂಡು ಹುರುಳುಪಡೆವಂತೆ ಅರ್ಥವನ್ನು ಹೇೞುವ ಬೋಧಕಾಚಾರ್ಯರ ವಾಚಕಗಳಿಗೆ ಎಡೆ

---

* ತಮಿೞ್ ನೆಲದ ಸುತ್ತಣ ಹದಿನೇೞು ನೆಲವನ್ನು ಹೇೞುವ ಕಟ್ಟಳೈ ಕಲಿತ್ತುಱೈ
ಸಿಙ್ಗಳಮ್ ಶೋನಗಮ್ ಶಾವಕಮ್ ಚೀಸಮ್ ತುಳುಕ್ಕಡಗಮ್
ಕೊಙ್ಗಣಮ್ ಕನ್ನಡಮ್ ಕೊಲ್ಲಮ್ ತೆಲುಙ್ಗಮ್ ಕಲಿಙ್ಗಮ್ ವಙ್ಗಮ್
ಗಙ್ಗಮ್ ಮಗದಮ್ ಕಡಾರಮ್ ಗವುಡಮ್ ಕಡುಙ್ಕುಸಲಮ್
ತಙ್ಗಮ್ ಪುಗೞ್ತ್ತಮಿೞ್ ಶೂೞ್ಪದಿ ನೇೞಿಬುವಿ ಶಾಮ್ ಇಪ್ಪೈಯೇ.

ಗೊಡುವುದೂ ಉಂಟು ; ಅಂದರೆ ಸೂತ್ರಪದ್ಯಕ್ಕೆ ಹುರುಳುಗೊಳ್ವುದು ಸುಳು ; ವೃತ್ತಿವಾಚಕಗಳಿಗೆ ಹುರುಳುಗೊಳ್ವುದು ಅರಿದು ಎನ್ನುವುದು ತೋಱಲು—'ನೋಡದೆ ಒರೆವರು, ಅಱಿಯದೆ ಕೋಱುವರು' ಎಂದಾಗಿದೆ. ಒಂದೇಹೆಸರಿಗೆ ಹಲವುವಿಧಿ ಗಳು ಹೊಂದುವುದೂ ಉಂಟು ; ಗ್ರಂಥಾಚಾರ್ಯರು, ವ್ಯಾಖ್ಯಾನಾಚಾರ್ಯರು-ಬೋಧಕಾಚಾರ್ಯರು ಆದ ಮೂವರೂ ಮುಗ್ಗುಣದ ಬಲ್ಮೆಯಿಂದ ವರಸೆಮಱತೇ ಅಱಿವರು ಅಂದರೆ ಹೇೞುವರು. ಇವುಗಳನ್ನೆಲ್ಲ ಬಗೆದು ಅಱಿಯಲು ಯಾರು ಮುಂದಾದರೂ ಬೆಕ್ಕಸಂಬಟ್ಟು ವರಸೆದಪ್ಪಿ ಅಲೆದು ಹುರುಳನ್ನು ಹೇೞುವನೆಲೆ ಏರ್ಪಡುತ್ತದೆ. ಅತಿಮತಿನುಣ್ಪೊಡನೆ ಮಿಗಿಲುಕಲಿತೂ, ವಿಧಿವಶದಿಂದ ಅಂದರೆ ಮುನ್ನಿನ ಗೆಯ್ಮೆಗೆ ಒಳಗಾಗಿ ಮಾಱ್ಕಿಮಾಣುಗಳನ್ನು ಇರುವಂತೆ ತಿಳಿಯದೆ ತಳರು ವುದೂ ಉಂಟು ; ಅದಲ್ಲದೆ ಈ ಮಾೞ್ಕಿಮಾಣ—ಸೊಲ್ಲಿನಕೂಟ, ಹುರುಳಿನ ಕೂಟಗಳನ್ನು ಅಳವಿಟ್ಟು ಮುಡಿವು ಹೇೞಲಾಗದು. ಹೀಗೆ ಎಲ್ಲೆಯಿಡಲಾಗದೆ ಹರಡಿ ರುವ ವಿಧಿ, ನಿಷೇಧ, ಶಬ್ದಸಮೂಹ, ಅರ್ಥಸಮೂಹ ಎನ್ನುವವು ಹಲವಾಗಿ ಇರು ವುದಱಿಂದಲೂ ಅಱಿತುಕೋಱುವುದು ಅನಿತು ಸುಳುವಾದ ಕೆಲಸವಲ್ಲ. ಆ (ಧರ್ಮ-ಅರ್ಥ-ಕಾಮ-ಮೋಕ್ಷ) ನಾಲ್ಕಱೊಳಗೆ ಒಂದನ್ನುಕೂಡ ಮುೞುಸಾಗಿ ಅಳವಿಡಲು ಅರಿದು. ಕಡಲನೀರನ್ನೆಲ್ಲ ಅಳದು ಮೊಗೆಯಲಾಗದಾದರೂ ತಾನು ಕೊಳ್ಳುವ ಅಳವಿನಲ್ಲಿ ಆಗುವುದಾದರೆ ಮೊಗೆದು ಬರುವುದು ಕೂಡುವುದು : ಅಂತೆಯೆ, ಎಲ್ಲ ವನ್ನು ಹೇೞದೆಬಿಟ್ಟರು. ತಂತಮ್ಮ ಅಱಿವುಹಂಬಲಗಳಿಗೆ ಏರ್ಪಾದ ಈ ನಾಲ್ಕ ಱೊಳಗೆ ತಾವು ಅಱಿತು ತಿಳಿದವನಿತನ್ನು ಎತ್ತಿಹೇೞುವರು. ಈ ನಾಲ್ಕಱೊಳಗೆ ತಕ್ಕುದಾದುದೂ ಮೇಲಾದುದೂ ಆದ ಕೆಲವನ್ನೇ ಹುಡುಕಿದವನು, ಅವನ್ನು ಮಱವು ಎನ್ನುವ ಹಗೆಯಿಂದ ಬಾಚಕೊಂಡನು ಅವನ ಕೈಯೊಳಗಾಗದೆ ಅಡಗಿದವುಗಳೊ ಳಗೂ ಕಿಱಿಯರಲ್ಲಿಕಿಱಿಯನು ಕೆಲವೇ ಕಲಿವಕಿಱಿಯರಿಗೆ ಹೇಳಿದ ಈ ತೊಂಗಲು ಒಮು ಅಧಿಕಾರದ ಸುದ್ದಿ ಹೇಱದ ಇದು—ಒಂದು ನೂಲಲ್ಲ ; ಎಂದೂ ಈ ಸುದ್ದಿ ಯನ್ನು ಅಱಿತು ಹಿರಿಯರು ಇದನ್ನು ತೆಗೞರು ಎಂದೂ, ತಱುವಾಯಱಿಯದ ಕೀೞರು ತೆಗೞಿಕೋಱುವುದು ಹುಟ್ಟುತನ್ಮೆಯೆಂದೂ, ತಾವು ಬಯಸಿದಂತೆಯೇ ಏನನ್ನೂ ಮಾಡುವ ಕೀೞರಿಗೆ ಅಱಿವೊರೆ ಕೋಱುವವನು ಅಱಿವಿಲಿಯಾಗುವನು ಎಂದೂ, ಬೇಱಬೇಱಯಾಗಿ ಹಲವು ಹೊತ್ತಗೆಗಳಿಂದ ಹೇೞದ ಸುದ್ದಿಗಳನ್ನು ಒಂದೆಡೆ ಅಱಿಯಬೇಕೆಂದು ಅವುಗಳನ್ನು, 'ಮುಡಿನ್ದದು ಮುಡಿತ್ತಲ್' ('ಒಂದು ಗೂಡುವಂತಹುಗಳನ್ನು ಒಟ್ಟಿಗೆ ತೀರ್ಮಾನಿಸು'ವುದು) ಎನ್ನುವ ಉತ್ತಿಯಿಂದ ಒಂದಾಗಿ ಸುಟ್ಟಿಟ್ಟು, ತಮ್ಮ ಹೊತ್ತಗೆಯ ಆಗು ಹೇಗೆಂಬುದನ್ನು ಅವಱ ಪೀಠಿಕೆಯ ಹದಿ ನಾಱುಬಿನ್ನಣಗಳಿಂದ ಹೇೞಿ, ಮುಂದೆ ಈ ಹೊತ್ತಗೆಯನ್ನು ಅಱಿವುದಕ್ಕೆ ತಕ ಮುಟ್ಟುಗಳು ಹತ್ತನ್ನೂ ಬಿತ್ತರಿಸಿ ಬಿನ್ನಯಿಸುವಲ್ಲಿ—ಸಂಸ್ಕೃತ ಲಕ್ಷಣಗಳಿಂದ ಕೆಲ

ವನ್ನು ಹಿಡಿದು ಅಱಿತು ತೊಲ್ಕಾಪ್ಪಿಯಮ್, ತಿರುಕ್ಕುಱಳ್, ತಿರುಕ್ಕೋವೈ ಎನ್ನುವ ಹೞೆಯ ಲಕ್ಷಣಲಕ್ಷ್ಯಗಳಲ್ಲಿ ಎಲೆಮಱೆಯಕಾಯಂತೆ ಅಡಗಿರುವ ಕೆಲವನ್ನು ಹೊಱಗೆಡಹಿ ಹೇೞಿದೆನೇ ಹೊಱತು ಹೊಸಸುದ್ದಿ ಯಾವುದನ್ನೂ ಇದಱೊಳಗೆ ಹೇೞಿಲ್ಲ. ತೊಲ್ಕಾಪ್ಪಿಯಮ್, ತಿರುಕ್ಕುಱೞ ಮೊದಲಾದ ಲಕ್ಷಣಲಕ್ಷ್ಯಗಳಲ್ಲಿ ಸಂಸ್ಕೃತರೂಢಿಗಳು ಕೆಲವಾಗಿಯೂ ತಮಿೞಮರಬುಗಳು ಹಲವಾಗಿಯೂ ಬಂದಿವೆ. ತಮಿೞ್ಮೊೞಿಯಲ್ಲಿ ಬಲ್ಲವರಾಗಿ ಸಂಸ್ಕೃತ ಭಾಷಾವಿಧಿ ಕೆಲವನ್ನು ಅಱಿತವರಿಗೇ ಈ ಹೊತ್ತಗೆ ಒಡಗುತ್ತದೆ. ಬಡಗುಭಾಷೆ ಬೆರೆಯದ ತಮಿೞ ಇಲಕ್ಕಣವೊಂದನ್ನೇ ಈ ಹೊತ್ತಗೆ ಗುಱುತಿಸಿಲ್ಲ ಏನ್ ? ಎಂದರೆ ಹೞಬರು- ಇಲಕ್ಕಣಮ್–ಇಲಕ್ಕಿಯಮ್ ಏದು–ಸಿಮಿತ್ತಮ್–ಸಾತ್ತಿರಮ್–ತನ್ದಿರವುತ್ತಿ – ಪಗುದಿ–ವಿಗುದಿ–ಪದಮ್–ಪದಾರ್ತ್ತಮ್ – ಆದಿ–ಅನ್ತಮ್ ಅಗರಮ್ – ಮಕಾರಮ್ – ಉದಾರಣಮ್–ಮೂತ್ತಿರೈ–ಉವಮೈ–ಉರುವಗಮ್ – ವಿಗಱ್ಪಮ್–ಸನ್ದಿ–ವಿದಿ – ಅಲಙ್ಕಾರಮ್ – ಕಾಲಮ್–ಇಲೇಸಮ್ – ಕಾರಕಮ್ – ಞಾಪಕಮ್-ವಿಸೇಡಣಮ್–ವಿಸೇಡಿಯಮ್-ವಿಗಾರಮ್–ಆದಿಕಾರಮ್–ಗುಣಮ್–ಗುಣಿ–ಎನ್ನುವ ಸೊಲ್ಲುಗಳನ್ನು ಕುಱಿತಿರುವರು. ತಮಿೞನೂಲುಗಳು ಹಲವಾಗಿ ಇದ್ದರೂ ಒಂದು ಕೂಡ ತನಿತಮಿೞಿನಲ್ಲಿ ಅಮರಲಿಲ್ಲ. ತಮಿೞಿಗೆಂದೇ ತಗುದಿಯಾದ ನೋಲ್ಮೈಯಕ್ಕರಗಳು ಎ ಒ ಱ ೝ ೞ ಎಂಬ ಐದೆ. ಅವೈದಕ್ಕರಗಳನ್ನು ಕೊಂಡು ತನಿಯಾಗಿ ಒಂದು ಮೊೞಿ ಉಲಿಯುತ್ತದೆಂದು ಹೇೞಿದರೆ ಅಱಿತವರು ನಾಚುವರು. ಸಂಸ್ಕೃತಭಾಷಾ ತಮಿೞ್ಮೊೞಿ ಎನ್ನುವ ಎರಡಕ್ಕೂ ಲಕ್ಷಣ ಒಂದೇ ಎಂದು ಕೊಳ್ಳಿ. ಇಳಿಯ ಎಳೆಯ ಸುಳುವಾದ ಕಟ್ಟಳೆಗಳನ್ನು ಯಾರೂ ಅಱಿಯಲು ಬರುತ್ತದೆ. ಅರಿದಾದ ಕಟ್ಟಳೆಗಳನ್ನು ನುಡಿದರೆ ತಿಳಿದುಕೊಳ್ಳುವರು ಇರರು. ಎಳೆಯ ಕಟ್ಟಳೆಗಳನ್ನು ನುಡಿವದಱಿಂದ ಗೞಿಕೆಯಿಲ್ಲ ; ಎನ್ನುವುದನ್ನು ಒಳಗೊಂಡು ಗೞಿಕೆಗೊಡುವ ವಿಧಿಗಳನ್ನು ಕೋಱಿದರೆ ಬೆಳಗಿಕೊಳ್ವರು ಇರರು—ಎಂದು ಮುಂತಾಗಿ ಹೇೞಿ ಐದು ಲಕ್ಷಣಗಳೊಳಗೆ ಸೊಲ್‌ಲಕ್ಕಣ ಒಂದನ್ನೇ ವೇಟ್ರುಮೈ ವಿನೈ ಒೞಿಬು ಎನ್ನುವ ಮುವ್ವಸುಗೆಗಳಾಗಿ ಬೆಳಗಿದ್ದಾರೆ.

24. ಹಲವು ಕಾಲ ಪೞಗಿಯೂ ತಿಳಿಯದ ಸುದ್ದಿಗಳು ತೊಲ್ಕಾಪ್ಪಿಯಮ್, ತಿರುಕ್ಕುಱಳ್, ತಿರುಕ್ಕೋವೈ ಎಂಬ ಮೂಱುನೂಲ್‌ಗಳಿಂದಲೂ ಕಾಣಪಡುತ್ತವೆ. ಇವುಗಳೊಳಗೂ ತಮಿೞಿನ ವಿಧಿಗೆ ಅಡಗದ ಬಡಗುಭಾಷೆಯ ಬೞಿಕೆಗಳು ಎಲೆಮಱೆಯಕಾಯಂತೆ ಕೆಲವಿವೆ. ತಮಿೞ್ ಒಂದನ್ನೇ ಬಲ್ಲವರು ಅವುಗಳನ್ನು ಬಿಡಿಸಿ ತಿಳಿಯಲಾಗದು. ಅನುಮೆಯಿಂದ ತೊಡಗಿದರೂ ತಮಿೞಿನ ವಿಧಿಯನ್ನು ಕೊಂಡು ಅಱಿಯಲಾಗದು. ಅವುಗಳನ್ನು ಬಡಗುಭಾಷೆ ಮಿಗಿಲಿಳಿದಾಗಿ ಬೆಳಗಿತೋಱುತ್ತದೆ: ಎಂದು ತಮ್ಮ ಇಲಕ್ಕಣಕ್ಕೊತ್ತನ್ನು ಕಲಿಯಲು ಬೇಕಾದ ಹತ್ತು ಮುಟ್ಟುಗಳನ್ನೂ

ಇನ್ನೂ ಮೇಲಾದ ಹಲವನ್ನು ನೂಲೊಳಗೆ ಹಲವು ಹೊತ್ತಗೆಗಳ ಸಂಗತಿಗಳನ್ನು ತೊಂಗಲಾಗಿ ಹೇೞ್ದ ಈ ಹೊತ್ತಗೆ 'ಒಂದುನೂಲಲ್ಲ'ಎಂದು ಹಲವು ಹೊತ್ತಗೆಗಳನ್ನು ಆಯ್ದು ಸಂದೆಗಗೊಂಡಲ್ಲಿ ಅವುಗಳನ್ನು ಹೋಗಿಸುವುದಕ್ಕೆ ಈ ಹೊತ್ತಗೆ ಒದಗುತ್ತದೆ. ಆದುದಱಿಂದ ಹಲವು ಹೊತ್ತಗೆಗಳನ್ನು ಆರಯ್ದು ಸಂದೆಗದಿಂದ ತಿರುವುಗೊಂಡವರಿಗೇ ಇದು ನೋಡುವದಕ್ಕೆ ತಕ್ಕದು ; ಕಿಱಿದು ಕಲಿತವರ ಅಱಿವು ಈ ಹೊತ್ತಗೆಯ ಎಡೆಹೊಕ್ಕು ಸಂಗತಿಗಳ ಮುತ್ತಱಿವು ಕೂಡದು. ಆದುದಱಿಂದ ಈ ಹೊತ್ತಗೆ ಅವರಿಗೆ ಎಳ್ಳನಿತೂ ಕೆಲಸಕ್ಕೆ ಬಾರದು. ಕಿಱಿದುಕಲ್ತವರು ಈ ಹೊತ್ತಗೆಯೊಳಹೊಗುವುದು ಮನದ ತಿಳಿವಿಲ್ಲದವರು ಮೆಯ್‌ಹುರುಳನ್ನು ಕಾಣುವಂತಾಗುವುದು ; ಮೇಲಾಗಿ 'ಕೂಸಿನ ಕೈಯಲ್ಲಿಕೊಟ್ಟ ಕುಂದಣದ ಹೊನ್ನಗಿಂಡಿ ಬೆಲೆ ಕಳೆದು ಕೊಳ್ಳುವಂತೆ' ಕಿಱಿದುಕಲ್ತವರ ಕೈಯಲ್ಲಿ ಈ ಹೊತ್ತಗೆ ಒಳಪಟ್ಟರೆ ಇದಱ ಬೆಲೆ ಇೞಿಯುವುದೆಂದೂ ನಲ್ಲವರಿಗೆ ಇದಱಂತಹ ಮೇಲಾದ ನೂಲ್‌ಗಳು ಕೈಗೂಡಿದರೆ ತಮ್ಮಿಂದಲೂ ಕಡೆಯರು ಇರರೆಂದು ನೆನದು ಸಿಮಿರ್ಕೆಯಿಲ್ಲದೆ ಕಲಿತವರನ್ನು ಎತ್ತಿ ಹೀಗಳೆಯದೆ ನಲ್ಗುಣ ನಲ್ಗುಲ ನಲ್ಗಲಿ ನಲ್ದಪವುಳ್ಳವರನ್ನು ಓಲಯಿಸಿನಡದು ಹಗೆಕೇಡುಗಳಿಗೆ ಹೆದಱಿ ನಲ್ಗೆಯ್ಮೆಗಳನ್ನು ಹೊಗೞಿ ಕಾಪ್ಪು ಹಾಡಿ ಹುಟ್ಟು ಸಾವುಗಳೆಂಬ ಆಳಱಿನಿಂದ ತಪ್ಪಿ 'ಹುಲ್ಲನ್ನು ತರುವವರಿಗೆ ಹಾಲನ್ನು ತರುವ ಹಸುವಿನಂತೆ' ಗೞಿಸಿಕೊಡುವರಾದುದಱಿಂದ ಇಂತಹ ಹೊತ್ತಗೆಗಳನ್ನು ಅವರಿಗೇ ಹೇೞ್ ತರುವುದು ಅಂದವೆಂದೂ

25. ಅಲ್ಲವರಿಗೆ ಇದಱಂತಹ ನೂಲ್‌ಗಳು ದೊರತರೆ ಎಮ್ಮಿಂದ ದೊಡ್ಡವರು ಇರರೆಂದು ನಿಮಿರಿ, ಕಲಿತವರನ್ನು ಹೊಗೞದೆ ಎತ್ತಿಹೀಗಳೆದು, ನಲ್ಗುಲ ನಲ್ಗುಣ ನಲ್ದಪವು ಉಳ್ಳವರಿಗೆ ಊೞಿಗವಿಡದೆ ತಪ್ಪಿಹಗೆ ಕೇಡುಗಳನ್ನು ಹುಡುಕಿ, ನಲ್‌ಗೆಯ್ಮೆಗಳನ್ನು ಹೋಗಲಾಡಿಸಿ ತೆಗೞಿ, ಹುಟ್ಟುಸಾವುಗಳಲ್ಲಿ ತಪ್ಪದೆ ತಪ್ಪುನಡದು 'ಹಾಲನ್ನು ಊಡಿದವರಿಗೆ ಹಲ್ಲನ್ನು ಊಱುವ ಹಾವಿನಂತೆ' ನಚ್ಚುಹುರುಳನ್ನೇ ಇಡುವವರಾದುದಱಿಂದ ಅಂತಹವರಿಗೆ ಇಂತಹ ಹೊತ್ತಗೆಗಳನ್ನು ತರದಿರುವುದೂ ಅಂದವೇ—ಎಂದು ಓದಿಸುವ ಅಯ್ಯಗಳಿಗೆ ಚೋದಿಸುವ ತಿಳಿವಿನ ಮುಟ್ಟು ಕೊಟ್ಟಿರುವರು.

26. ಮುಂಕಾಲದಲ್ಲಿ ಬೋಧಕಾಚಾರ್ಯರುಗಳು—"ಅರುಮೆಯಾದ ಬೞಿಕೆಗಳು ತಪ್ಪದೆ ನೆಲಸಬೇಕು." ಎನ್ನುವುದಕ್ಕಾಗಿಯೇ ಹಲವರಿಗೂ ಪಾಟಹೇೞುವರಾಗಿದ್ದರು. ಈ ಕಾಲದಲ್ಲಿ ಪಾಟಹೇೞುವವರಾದರೋ ತಮಗೆ ಯಾವುದಾದರೂ ಒಂದು ಗೞಿಕೆ ನೋಡಿ ಕೆಲವನ್ನು ಹೇೞ್ದರೂ 'ಮತ್ತವರೆಲ್ಲ ಸತ್ತುಹೋಗುವರು ನಾವನಿತೇ ಹಲವುಕಾಲ ಬಾೞುವೆವು' ಎನ್ನುವ ಕರುತ್ತಿನಿಂದ ಒಳಗುಬಚ್ಚಿ ಹೊಱನೆಡಹಿ ಹೇೞುರು. ಹೆಱರಿಗೆ ಒರೆಯದೆ ಕಲಿಸುವ ಕಲೆಯಲ್ಲೂ ಮೞುಗರು. ಬಾಯೊರೆ

ಬಾಟ್ಟು, ಕವಿಯಱ್ವುಱು ಮೊದಲಾದುವುಗಳಿಂದ ಹೊತ್ತಗೆಗಳ ಅಱಿವನ್ನು ಉಂಟು ಮಾಡಿದರೂ, ಅಱಿವಿನ ಒರೆಯ ಬೞಿಯಲ್ಲಿ ನಡೆಯರು. ಇಳೆಯಲ್ಲಿ ಹೀಗೆ ಕೇಟ್ಟ್ರಿಯೇ ಸುತ್ತಿಬರುವದಱಿಂದ ಅರಿದಾದ ಕಟ್ಟಳೆಗಳನ್ನು ಈ ಇಲಕ್ಕಣಕ್ಕೊತ್ತು (ಇಲಕ್ಕಣ=ಲಕ್ಷಣ, ನಡೆ ; ಕೊತ್ತು (ತ. ಕ) ಗೊತ್ತು, ಗುತ್ತಿ, ತೊಂಗಲ್ ಗೊಂಚಲ್ ; ಕೋದದು ಕೊತ್ತು ; ಪೋಣಿಗೆ, ಹವಣಿಗೆ ಗೊತ್ತುಗೊಂಡಣೆ, ನಡೆನೆರವಿ ; ಲಕ್ಷಣಮಂಜರಿ, ಲಕ್ಷಣ ಜ್ಞಾನ)ವನ್ನು ಹೊಂದಿಸಲಾಗಿದೆ. ಇದು ಒಂದು ನೂಲಲ್ಲ ; ಹಲವು ನೂಲುಗಳಿಂದ ಮೇಲಾದ ಹಲವು ಕರುತ್ತುಗಳನ್ನು ಒಳಗೊಂಡುದುದಾಗಿದೆ. ಆದುದಱಿಂದ ಹಲವು ನೂಲುಗಳಿಂದ ಆರಾಯ್ದು ಅವುಗಳೆಡೆಯಲ್ಲಿ ತೋಱುವ ಸಂದೆಗಗಳನ್ನು ತೀರಿಸುವುದಕ್ಕೆ ಈ ನೂಲು ಒದಗುತ್ತದೆ. ಕೆಲಹೊತ್ತಗೆಗಳನಿತೇ ಕಲಿತವಗೇ ಇದು ಒದಗದು—ಎಂದು ತಮ್ಮ ಹೊತ್ತಗೆಯ ಹೊಂದಾಣಿಕೆ ಎಂತಾಗಿದೆ ಎಂಬುದನ್ನು ಸುವಾಮಿನಾದದೇಸಿಗರೇ ಮುಂಚಿನ ತಿಳಿವಾಗಿ ಹೊಂಚಿಸಿ ಬರೆದಿರುವರು.

27. ಇವರ ಈ ಹೊತ್ತಗೆಯಲ್ಲಿ ಹೆಚ್ಚೂಕಡಮೆ ಐವತ್ತು ಹೊತ್ತಗೆಗಳಿಂದ ಎತ್ತುಗಾಣಿಕೆ ಅಂದರೆ ಮುಂಬಟಿಕೆಗಳನ್ನು ಕೊಟ್ಟಿದ್ದಾರೆ. ಈ ಹೊತ್ತಗೆಯಲ್ಲಿ ನನ್ನೂಲಿನ ಸೂತ್ರಭಾಗಗಳಿಗೆ ವಿವರಣೆ ದೊರಕುತ್ತದೆ. ನನ್ನೂಲಿನ ಬಗೆಗೆ ಇವರಿಗೆ ಹೆಚ್ಚಿನ ಮೆಚ್ಚು. ಇವರ ಕಾಲಕ್ಕೆ ನನ್ನೂಲಿಗೆ ಉಂಟಾಗಿದ್ದ ಮಯಿಲೈನಾದರ ವ್ಯಾಖ್ಯಾನವನ್ನು ಕಂಡ ಇವರು ನನ್ನೂಲ ಸೂತ್ರವು ಆವೊತೆಯೊಡನೆಕಲೆತು 'ಸೇಟ್ಟಱು ನಿಲತ್ತಿಲ್ ಕವಿಟ್ಟ್ರ ಪಾಲ್‌ತೇಱನೆಯ್ ಮುದಲಿಯವುವ್ ಸೇಱಾನಾಱ್‌ಪೋಲ್'– ಅಂದರೆ 'ಕೆಸಱುನೆಲದಲ್ಲಿ ಕವಿಚಿದ ಹಾಲುಜೇನುತುಪ್ಪ ಮೊದಲಾದವೂ ಕೆಸಱಾದಂತೆ' ನೆನದರು. ನನ್ನೂಲಿನ ಒರೆಯ ಕೊಱತೆಯನ್ನು ಹೋಗಲಾಡಿಸಿ ಬೇಱೆ ಒರೆಯೊಂದನ್ನು ತರುವಂತೆ ತಮ್ಮ ಅಱುಹಿನ ಕಂದ ಸಙ್ಕರನಮಚ್ಚಿವಾಯರಿಗೆ ಹೇೞಿತರಿಸಿದರು. ಇದಱ ಬಗೆಗೆ ಈಗಾಗಲೇ ಹೇೞಿಯೂ ಆಗಿದೆ.

**ತೊಲ್ಕಾಪ್ಪಿಯ ಪಾಯಿರ ವಿರುತ್ತಿ, ತೊಲ್ಕಾಪ್ಪಿಯ ಮುದರ್ ಱೂತ್ತಿರ ವಿರುತ್ತಿ, ಇಲಕ್ಕಣವಿಳಕ್ಕ ಸೂಱಾವಳಿ**

28. ಇದೇ ಕಾಲಕ್ಕೆ ಸಿವಞಾನಸುವಾಮಿಗಳು ತಂದ [1]ತೊಲ್ಕಾಪ್ಪಿಯ ಪಾಯಿರವಿರುತ್ತಿ [2]ತೊಲ್ಕಾಪ್ಪಿಯ ಮುದರ್ ಱೂತ್ತಿರವಿರುತ್ತಿ [3]ಇಲಕ್ಕಣವಿಳಕ್ಕ ಸೂಱಾವಳಿ ಎಂಬ ಈ ಮೂಱೂ ಅರುಮೆ ಹಿರಿಮೆಯ ಒರೆಗಳು. ಇವುಗಳಲ್ಲಿ ಮೊದಲನೆಯದು ತೊಲ್ಕಾಪ್ಪಿಯ ಪಾಯಿರದ ಮೇಲಣ ಒರೆಯೂ ಎರಡನೆಯದು ಮೊದಲ ಸೂತ್ರದ ಮೇಲಣ ಒರೆಯೂ ಆಗಿದೆ. ಮೂಱನೆಯದು ವೈತ್ತಿಯನಾದ ದೇಸಿಗರು ಬರೆದ ಇಲಕ್ಕಣವಿಳಕ್ಕಮ್ಮಿನ ಕೆಲವು ಕೊಱತೆಗಳನ್ನು ಕಾಣಿಸುವ ಹೊತ್ತಗೆ. ಮೊದಲ

ಎರಡು ಹೊತ್ತಗೆಗಳು ನಿಜಕ್ಕೂ ಅದುವರೆಗಿನ ಒರೆಯೋಜರು ಹುರುಳುಗೊಂಡಿದ್ದ ತೊಲ್ಕಾಪ್ಪಿಯದ ನುಡಿಗಡಣದ ನಡೆ, ಗುಟ್ಟು, ಆಗುಗಳನ್ನು ಕುಱಿತ ಕುಱಿಪ್ಪು ಗಳಾಗಿವೆ. ತೊಲ್ಕಾಪ್ಪಿಯ ಸೂತ್ರರವಿರುತ್ತಿಯಲ್ಲಿ--"ತೊಲ್ಕಾಪ್ಪಿಯರ್ ತನ್ನೂಲೈ ಐನ್ದಿರಮ್ ನೋಕ್ಕಿ ತೊಗುತ್ತಾರ್" ಅಂದರೆ ತೊಲ್ಕಾಪ್ಪಿಯನು ತನ್ನ ಹೊತ್ತಗೆ ಯನ್ನು ಐಂದ್ರವನ್ನು ನೋಡಿ ಸಂಗಡಿಸಿದನು : ಅಂದರೆ ತಮಿೞ್ಮಾತು ಸೇರುವೆಡೆ ಪಡುವ ಗೆಯ್ಮೆ (=ಸಂಧಿಕಾರ್ಯ)ಗಳೂ ಕುಱಿಯೀಡು (=ಸಂಜ್ಞೆ)ಗಳೂ ವಿನೈ ಕುಱಿಪ್ಪು (=ಗೆಯ್ಮೆಕುಱಿಪ್ಪು ; ರೂಢನಾಮಾಖ್ಯಾತ, ಪೂರ್ಣಭಾವನಾ ಕ್ರಿಯೆ, ಕ್ರಿಯಾಭಾವ)ಗಳೂ, ವಿನೈತ್ತೊಗೈ (=ಗೆಯ್ಮೆದೊಂಗಲ್ ; ಭ್ರಾಮಿತ ಗಮಕಸಮಾಸ) ಮುಂತಾದ ಸೊಲ್ ನಡೆಗಳೂ, ಉಯರ್ತಿಣೈ (=ಮೇಲ್ತರ ; ಮಹತ್ವರ್ಗ) ಅಃಱಿಣೈ (=ಮೇಲ್ತರ ; ಅಮಹತ್ವರ್ಗ) ಸೊಲ್ವಿಂಗಡಣೆಗಳೂ ಅಗಮ್ (=ಒಳ ; ಅಂತರ್) ಪುಱಮ್ (=ಹೊಱ ; ಬಹಿರ್) ಪೊರುಳ್ (=ಕವಿಹುರುಳ್ ; ಕಾವ್ಯವಸ್ತು) ವಿಂಗಡಣೆಗಳೂ ಅಗತ್ತಿಣೈ (=ಮನ ಇಲ್ಲವೆ ಮನೆಯ ಒಳನೆಗಟ್ಟಡೆ) ಯನ್ನೂ ಪುಱತ್ತಿಣೈ (ಹೊಱ ಇಲ್ಲವೆ ಮನೆಯಾಚೆಯ ಆರ ಸಾಳ್ಕೆಯ ಹೊಱನೆಗಟ್ಟಡೆ)ಯನ್ನೂ ಕುಱಿತ ಪರಸಂಗಗಳ ಬಗೆಗೆ ಹೇೞುವ ಕುಱಿಞ್ಚಿ (=ಕೊಱಚನಾಡು, ಕೊಱವಂಜಿಹಾಡು) ಅಂದರೆ ತಪ್ಪಲಿನ ಎಡೆಯ ಹಟ್ಟಿ ಗಳಲ್ಲಿ ಬಾೞುವ ಮದುವೆಯಾದ, ಹಾಗೂ ಆಗದ ಕುಱಬ ಕೊಱಚ ಕಾಡ ಬೇಡ ಸೊಲಿಗ ಕಾದಲರ ಕೞ್ಪು ಹಾಗೂ ಕಳವು, ಕೂಡಿಕೆ ಜೋಲಿಯ ಬಗೆಗಿನ ಗರತಿ–ಕೊಱತಿ—ಹಾಡು : ಪತಿವ್ರತಾ–ಪ್ರಣಯ–ಪ್ರಸಂಗ)ಗಳೂ, ವೆಟ್ಚಿ (ಕೇಸಲ–ಕಿಸ್ಗಾರ–ಕೋಳ್–ಹಾಡು ; ಲುಂಠಗೀತೆ)ಗಳೂ ವೆಣ್ಬಾ (=ಬೆಳ್ವಾಡು ; ಧವಳ ಗೀತೆ) ಮೊದಲಾದ ಕವಿನಡೆಗಳೂ, ಇಂತಹದಱಂತಹ ಬೇಱೆಯವೂ, ಸಕ್ಕದ ಭಾಷೆ ಯಲ್ಲಿ ಸಿಕ್ಕದಿರುದಱಿಂದ ಇವೆಲ್ಲವನ್ನೂ ತನ್ನಾಡಿನ ಉದ್ದಗಲದ ವಾಡಿಕೆಗಳಿಂದ ಪಡೆದುಕೊಂಡು ತನ್ನೂಲನ್ನು ಉಂಟುಮಾಡಿದನು. ಯಾಕೆಂದರೆ "ಮುನ್ದು ನೂಲ್ ಕಣ್ಡು" ಅಂದರೆ ಮುಂಚಿನ ಹೊತ್ತಗೆಕಂಡು ಎಂಬುದಱೊಡನೆ ಹೊಂದದಿರು ವುದಱಿಂದಲೂ ಮುಂಚಿನ ಕಾಲದ ಮೊದಲ ಹೊತ್ತಗೆ ಆಗತ್ತಿಯಮ್ ಎಂಬುದೂ ಅದಱ ಬೞಿಯದಾದ ತೊಲ್ಕಾಪ್ಪಿಯಮ್ ಅದಱ ಬೞಿಹೊತ್ತಗೆ ಎಂಬುದೂ ತೀರ್ಮಾನ ಪಡುತ್ತದೆ, ಎಂದುಕೊಳ್ಳಿರಿ—ಎಂದು ಸಕ್ಕದಕ್ಕೂ ತಮಿೞ್ಗೂ ನಡೆ (ಲಕ್ಷಣ) ಒಂದಲ್ಲವೆಂದಿದ್ದಾರೆ. ಭಾಷ್ಯಕಾರರಾದ ಶಿವಜ್ಞಾನಸುವಾಮಿಗಳು ತಮ್ಮ ಗುರುಗಳು ತಂದ ನನ್ನೂಲ್ ವಿರುತ್ತಿ ಒರೆಗೆ ತಿದ್ದುಪಾಟನ್ನು ತಂದಿರುವರು.

**ತೊನ್ನೂಲ್ವಿಳಕ್ಕಮ್ :**

29. ಹದಿನೆಂಟನೆಯ ನೂಱಱನಲವತ್ತೆರಡು ಸಾಲುಗಳ ಗಡುವಿನ ತಮಿೞ್ ನಾಡಿನಲ್ಲಿ ನೆಲಸಿದ್ದ ಹಿರಿಯಸೊಲ್ ಕೋವಿದರೂ ನುಡಿಗುಱಿಕಾರರೂ ಚದುರಗರಾದಿ

(=ಚತುರಕರಾದಿ) ಕಾರರೂ ವೀರಮಾಮುನಿ ಎಂಬ ಹೆಸರಾಂತ ಕಾನ್ಸ್ಟನ್ಸಿಯಸ್ ಜೋಸೆಫ್ ಬೆಸ್ಕಿಯವರು ಲ್ಯಾಟಿನ್ ಭಾಷೆಯಲ್ಲಿ ತಮಿೞು ಆಡುಮಾತಿನ ನಡೆಯನ್ನೂ ಸಾಹಿತ್ಯ ಭಾಷೆಯ ಲಕ್ಷಣವನ್ನೂ ಬರೆದಿದ್ದಾರೆ. ಇವಲ್ಲದೆ ಸಾಂಪ್ರದಾಯಿಕ ಸೂತ್ರರೂಪದಲ್ಲಿ ಬರೆದ ತಮಿೞ್ ಶಬ್ದ ಶಾಸ್ತ್ರಗ್ರಂಥವೇ ತೊನ್ನೂಲ್ ವಿಳಕ್ಕಮ್ (=ತೊಲ್ ನೂಲ್ ವಿಳಕ್ಕಮ್ ಹೞಹೊತ್ತಗೆ ಬೆಳಗು ; ಪುರಾತನಗ್ರಂಥ-ಪ್ರಕಾಶಿಕೆ-ಆಲೋಕ) :

ಮುಮ್ಮೊದಲಿಗರು ಹುದುಗಿದ ಹೊತ್ತಗೆಯ ಹೊಲಬು ಬೆಳಗಲೂ, ಕಲಿಯದವರೂ ಗೞಿಕೆಗೊಂಡು ಬಗೆದು ಅಱಿಯಲೆಂದೇ ಅದಱ ಮೇಲೆ ಕವಿದ ದುಪಟ್ಟೆಯ ನೀಗಿ ಅಱಿತವರು ಹೊತ್ತಿಸಿದ ಸೊಡರ ಬತ್ತಿಯ ಕುಡಿಯ ಕಿಟ್ಟವ ಕಳದು ಬೆಳಬೆಳಗಿ ಯಾರಿಗೂ ತೋಱುವಂತೆ ಕೈಗೆತ್ತಿಕ್ಕೊಂಡ ಈ ಹೊತ್ತಗೆಬೆಳಕೇ ತೊನ್ನೂಲ್ ವಿಳಕ್ಕಮ್. ಮುಂಚೆ ಚೆನ್ದಮಿೞ್ ಮೊೞಿಯಿಂದ ಮಱೆದ ನುಡಿನಡಗೆಯ ಹೊತ್ತಗೆಯನ್ನು ಎಳೆದಮಿೞ್ತೊರೆಯಿಂದ ಹೊಱದೋಱಲು ನೆನೆದರಾದರೂ ಮುನ್ನಿನವರು ತಂದ ಯಾವ ಹೊತ್ತಗೆಗಳನ್ನೂ ಬಿಂದೊರೆದರೆ ತಮ್ಮ ಹೊತ್ತಗೆಯೂ ಹಿಗ್ಗಿ ಕಂಡವರು ಅಂಜಿ ತೊಡಗರು ಎಂದೆಣಿಸಿ ಮಿಗಿಲಱಿಯಬೇಕಾದುದೊಂದನ್ನೇ ತಮ್ಮೊಳಗೆ ತಾವೇ ಕಂಡುಹಿಡಿಯಲು ಬೇಕಾದ ಅಳವಿನಲ್ಲೇ ಕಟ್ಟಳೆಯಿಟ್ಟು ಬಿಚ್ಚೊರೆದರು. ಹೞಹೊತ್ತಗೆಗಳನ್ನು ತಿಳಿದುಕೊಳ್ಳಲು ಒದಗಿನಿಲ್ಲುವ ಬೆಳಕಿನಂತೆ ಅಮೆಯಬೇಕೆಂಬ ಕೊಳ್ಗೆಯಿಂದ "ತೊನ್ನೂಲ್‌ವಿಳಕ್ಕಮ್" ಎಂಬ ದೂಸಱ ಹೆಸರನ್ನು ಈ ಓಲೆ (=ಸಿವಡಿ)ಯ ಸೂಡಿಗೆ ಸುಟ್ಟರು.

ಇದು ಎೞುತ್ತು, ಸೊಲ್, ಪೊರುಳ್, ಯಾಪ್ಪು, ಅಣಿ ಎಂಬ ಐದು ಹಸುಗೆಗಳಲ್ಲಿ ಅವುಗಳ ನಡೆಯನ್ನು ಪರಿವಿಡಿಯಿಂದ ೩೯, ೧೦೨, ೫೮, ೧೦೦, ೭೦ ನೂಱ್ಪಾಗಳಿಂದ ಹೇೞಿದೆ. ಮೊದಲ ಮೇಲ್ಮೆಯ ಮುಂತಿಳಿವಿನ ನೂಱ್ಪಾವೊಂದು ಸೇರಿದಂತೆ ೩೭೦ ನೂಱ್ಪಾಗಳನ್ನು ಒಳಗೊಂಡಿದೆ.

30. ಈ ಹೊತ್ತಗೆಯು ವಾಡಿಕೆಯ ಬೞಿಯಲ್ಲಿ ಸಾಗಿನಡೆಯುವುದಱಿಂದ ಹೞೆಯ ನುಡಿನುಡೆಯ ಹೊತ್ತಗೆಗಳನ್ನು ಪೇರಳವಿನಲ್ಲಿ ಗೞಿಸಿಕೊಂಡಿದೆ. ಹುದು ನೆಲೆಯಲ್ಲಿ—ತೊಂಗಲಾಗಿ, ಉೞಿದಲ್ಲಿ—ಮಿಗಿಲಾಗಿ ಎೞುತ್ತುಸೊಲ್ಲುಗಳು ನನ್ನೂಲನ್ನೂ, ಹುರುಳು—ನಂಬಿಯಗಪ್ಪೊರುಳ್ ಹಾಗು ಇಲಕ್ಕಣವಿಳಕ್ಕಮ್‌ಗಳನ್ನೂ, ಯಾಪ್ಪು—ಪಾಟ್ಟಿಯಲನ್ನೂ, ಅಣಿ—ದಂಡಿಯ ಅಲಂಕಾರವನ್ನೂ ಹೊಂದಿ ಅಮೆದುದಾಗಿದೆ.

ಈ ಹೊತ್ತಗೆಯೋಜರು ವಾಡಿಕೆಯ ಹಿಂಬಿದ್ದು ಬೞಕೆ ಹಾಗೂ ಕವಿತೆ ಸಗುವ ಎರಡು ನೆಲೆಗಳಿಗೂ ನುಡಿನಡೆಯನ್ನು ಹೊಂದಿಸಿದ್ದಾರೆ ;

ಅಕ್ಕರವೂ ಸೊಲ್ಲೂ ಎಣೆಪು ಆದ ೧೪೧ ನೂಱ್ಪಾಗಳು ೬೬ ನೂಱ್ಪಾಗಳು ನನ್ನೂಲಿನಿಂದ ಹಾಗೇ ಮೊತ್ತವಾಗಿ ಎತ್ತಿಹೊಂದಿಸಿಕೊಂಡಿರುವುದು ಗುಱುತಿಸ ತಕ್ಕದ್ದು. ಹಾಗೆಯೇ ಎೞುತ್ತು ಸೊಲ್ ಪೊರುಳ್ ಯಾಪ್ಪು ಅಣಿ ಎಂಬ ಒಂದೊಂದು ಹಸುಗೆಯ ಮೊದಲಲ್ಲೂ ಎಱೈಯನಿಗೆ ಅಂದರೆ ಸಾವಿಲ್ಲದವನಿಗೆ ಎಱಗಿರು ವುದೂ ಗುಱುತಿಸತಕ್ಕದ್ದು.

ಒರೆಯೋಜರೂ ಇವರೇ ಆಗಿರುವದಱಿಂದ ತಾವು ಹೇೞಬಯಸಿದ ಕರುತ್ತು ಗಳನ್ನು ನೂಱ್ಪಾವಿನಲ್ಲಿ ಸುಟ್ಟಿಟ್ಟು ಬೇಕಾದ ಎಡೆಗಳಲ್ಲೆಲ್ಲಾ ಬಿರಿದಾಗಿ ಬೆಳಗಿ ಒರೆ ಯಲ್ಲಿ ತಿಳಿಯಾಗುವುದಕ್ಕೆ ತಕ್ಕ ನೆಲೆಯನ್ನು ಪಡೆದುದಾಗಿದೆ. ಈ ಹೊತ್ತಗೆಯೋಜರ ಎಣಿಕೆಗಳನ್ನು ಮೊತ್ತವಾಗಿ ಅಱಿತುಕೊಳ್ಳಲೂ ಮಾಱುಪಟ್ಟ ಕರುತ್ತುಗಳನ್ನು ಕೈಬಿಡಲೂ ಈ ನೆಲೆ ಒದಗುವುದು. ಹಲವು ನುಡಿನಡೆಬೞಿಕೆಗಳಡೆಯಲ್ಲೇ ಹೊತ್ತಗೆ ಯೋಜರು ಪಡೆದಿರುವ ಪೞಗನ್ನು ಒರೆ ಹೊಱಪಡಿಸಿದೆ.

ಒಂದೊಂದು ಹಸುಗೆಯುಲ್ಲೂ ಕೋಱಿದ ಕರುತ್ತುಗಳನ್ನು ಆವಾವಸುಗೆಗಳ ಕೊನೆಯ ನೂಱ್ಪಾವಿನಲ್ಲಿ ತೊಂಗಲಾಗಿ ಹೇೞಿರುವರು. ತಾವು ಒಟ್ಟಾಗಿ ಕೋಱಿದು ದನ್ನು ತಿಳಿಯಾಗಿ ಕೋಱುವುದು ಇವರ ಮೇಲ್ಮೆಯಾಗಿದೆ.

ಈ ತೊನ್ನೂಲ್‌ವಿಳಕ್ಕಮ್ ಮುಮ್ಮೊದಲಾಗಿ ೧೮೩೮ಱಲ್ಲಿ ಪುದುವೈ (=ಪುದು ಚೇರಿ)ಯುಲ್ಲೂ ೧೮೬೪ಱಿಲ್ಲಿ ನಾಗೈ (=ನಾಗಪಟ್ಟಣದ್) ಅಲ್ಲಿಯೂ ೧೮೯೧ಱಿಲ್ಲಿ ಸೆನ್ನೈ (=ಚನ್ನಪಟ್ಟಣದ, ಮದರಾಸಿನ)ಲ್ಲಿಯೂ ಅಚ್ಚಾಯಿತು.

**ಮುತ್ತುವೀರಿಯಮ್ :**

31. ಹತ್ತೊಂಬನೆಯ ನೂಱಱಹೊತ್ತಿಗೆ ಇದ್ದ ಉಱೈಯೂರಿನ ಮುತ್ತು ವೀರ ಉಪಾತ್ತಿಯಾಯರು ಉಂಟು ಮಾಡಿದುದೆ ಮುತ್ತುವೀರಿಯಮ್. ಅದು ಎೞುತ್ತು ಸೊಲ್ ಪೊರುಳ್ ಯಾಪ್ಪು ಅಣಿ ಎನ್ನುವ ಐನಡೆಗಳನ್ನೂ ತಿಳಿಸುವ ನೂಱ್ಪಾಗಳಿಂದ ನೆಯ್ದ ಸಾವಿರವನೂಱಱುವತ್ತುಮೂಱುಪೋಣಿಗೆಗಳುಳ್ಳ ಹೊತ್ತಗೆ-ಯೋಜನ ಹೆಸರನ್ನು ತಾಂಗಿದ ಹೊತ್ತಗೆ. ಅದಱಲ್ಲಿ ತಮಿೞಿಲಕ್ಕಣದ ಕೆಲವು ಕಱಿಯೀಡುಗಳಿಗೆ ಸಂಸ್ಕೃತ ಪರಿಭಾಷೆಯ ಪಡಿನುಡಿಗಳನ್ನು ಕೊಟ್ಟಿರುವದು ಒಂದು ಹೆಚ್ಚುಗಾಱಿಕೆ. ಅದು ಅದಱ ಮುಂಚಿನ ತೊನ್ನೂಲ್‌ವಿಳಕ್ಕಮ್ಮನ್ನು ಕೆಲ ಮಾಱ್ಪಾಟುಗಳೊಂದಿಗೆ ಕೈಗೊಂಡಿದೆ. ಎತ್ತಿತೋಱಲು ಆಯ್ದು ಅಯ್ಕೆ—

> ಉಯಿರ್ ಇಱೈಯಿನವ್ ಮಿಗಟು ಉರವ್‌ವಲಿ ಉಟ್ಟ ಮೆಲಿಇಯ್ಯ
> ಮುದಲ್ ಇಡಮಾಮ್ ಇಡ಼್ ಮೂಕ್ಕು ಅಣಮ್‌ಪಲ್ ನಾ
> ಇಪ್ಪಡೈ ಇಡತ್ತಾಮ್ ಅಕ್ಕರ ಒಱಪ್ಪೇ

## ಮಿಕ್ಕ ಪ್ರತ್ಯಯಗಳು

ಕನ್ನಡಕ್ಕೆ ಸಾಕಷ್ಟು ವಿಸ್ತಾರವಾದ ವ್ಯಾಕರಣವನ್ನು ಕೊಟ್ಟ ಕೇಶಿರಾಜನಿಗೆ ತಾನು ಎಲ್ಲವನ್ನೂ ಹೇಳಿದೆನೆಂಬ ಆತ್ಮವಿಶ್ವಾಸವಿಲ್ಲ. ಇನ್ನೂ ಹೇಳಬೇಕಾದದ್ದು ಉಳಿದಿರಬಹುದೆಂಬ ಕೊರತೆಯೇ ಅವನನ್ನು ಬಾಧಿಸುತ್ತಿತ್ತು. ಸಮಾಸ ಪ್ರಕರಣ ತದ್ಧಿತ ಪ್ರಕರಣಮತ್ತು ಆಖ್ಯಾತ ಪ್ರಕರಣಗಳ ಕೊನೆಯಲ್ಲಿ ಅವನು ಹೇಳಿದ ಮಾತುಗಳನ್ನಿಲ್ಲಿ ಗಮನಿಸಬಹುದು.

ಕವಿಮಾರ್ಗಗತ ಸಮಾಸಮ
ನವನೆನ್ನನರಿವನಿತನೆಯ್ದೆ ಪೇಳ್ದಂ ಲೋಕ
ವ್ಯವಹಾರದಿಂದಮಿನ್ನುಳಿ
ದುವನರಿವುದು ಶಬ್ದಪಾರ ಮಾರ್ಗಮಶಕ್ಯಂ

(ಶಬ್ದಮಣಿ ದರ್ಪಣ–ಡಿ. ಎಲ್. ಎನ್. ಪ್ರತಿ 1973, ಪುಟ 303, ಸೂತ್ರ 207, ಸಮಾಸವನ್ನು ತನಗೆ ತಿಳಿದಷ್ಟು ಹೇಳಿದೆ, ಲೋಕ ವ್ಯವಹಾರದಿಂದ ಉಳಿದುದನ್ನು ತಿಳಿದುಕೊಳ್ಳಬೇಕು. ಶಬ್ದಸಾಗರದ ಪಾರವನ್ನು ಸೇರುವುದು ಯಾರಿಗೂ ಅಸಾಧ್ಯ ಎಂಬ ಮಾತಿನಲ್ಲಿ ಭಾಷೆಯ ಆಳ ವಿಸ್ತಾರ, ಎಷ್ಟು ಹೇಳಿದರೂ ಮುಗಿಯುವುದಲ್ಲ ಎಂಬ ಅವನ ಅತೃಪ್ತ ಕಳಕಳಿ ವ್ಯಕ್ತವಾಗುತ್ತದೆ. 'ಲೋಕ ವ್ಯವಹಾರದಿಂದ ತಿಳಿಯಬೇಕೆಂಬ ಆಡುಮಾತಿನಿಂದ ಬೆಳೆಯಬೇಕೆಂಬ ಅಪ್ಪಟ ಭಾಷಾ ವಿಜ್ಞಾನಿಯ ಮನೋಭಾವ ಸ್ಪಷ್ಟ. ಶಬ್ದಪಾರಮ್ + ಅರ್ಗಮ್ + ಅಶಕ್ಯಂ. ಎಂದು ನೇರ ವಿಂಗಡನೆಯಾದರೆ ಶಬ್ದಪಾರಮಾರ್ಗಮ್ + ಅಶಕ್ಯಂ ಎಂದೂ ವಿಂಗಡಿಸಬಹುದು. ಶಬ್ದಸಾಗರದ ದಡದ ದಾರಿ (ಮಾರ್ಗಮ್) ಯು ಅಸಾಧ್ಯ ಎಂದು ಅದೇ ಅರ್ಥವನ್ನು ಹೇಳಬಹುದು. ತದ್ಧಿತ ಪ್ರತ್ಯಯಗಳನ್ನು ಹೇಳಿ ಕೊನೆಯ ಸೂತ್ರವಿಂತಿದೆ. (ಸೂ. 262, ಪುಟ 254)

ಒದ ವಿಕರ್ಗಂ ಸಂಸ್ಕೃತವೆ
ನ್ನದೆ ಕನ್ನಡವೆನ್ನದಾಯಿಲ ಪ್ರತ್ಯಯಮಂ
ತದು ತಾವಿವು ಮೊದಲಾಗಿ
ವುದನ್ವಿತರ್ ಮಿಕ್ಕತದ್ಧಿತಪ್ರತ್ಯಯಮಂ

ಮಿಕ್ಕತದ್ಧಿತ ಪ್ರತ್ಯಯಗಳನ್ನು ವಿದ್ವಾಂಸರು ಅರಿತು ಕೊಳ್ಳಬೇಕೆಂದರೆ ಇನ್ನೂ ಉಳಿದಿರ ಬಹುದೆಂಬ ಭಾವನೆಯಿದೆ.

ಆಖ್ಯಾತ ಪ್ರಕರಣದ ಕೊನೆಯಲ್ಲಿ (ಪುಟ 254, ಸೂತ್ರ 292) ಹೇಳುತ್ತಾನೆ.

ಧಾತುಗಳವು ನಾನಾರ್ಥೋ।
ಪೇತಂಗಳ್ ಲಕ್ಷ್ಯ ಸಿದ್ಧಿ ವಿಡಿದುವನರಿದ
ನ್ವಿತರೆ ಪ್ರಯಾನುಕೂಲಂ
ಮಾತೇಂ ಪೂರಿಸುಗೆ ಮತ್ತಮುಳಿದುವನಿದರೊಳ್

ಇಲ್ಲಿ ಅನ್ವಿತರು-ವಿದ್ಯಾ ಬುದ್ಧಿ ಚಿಂತನ ಶಕ್ತಿಯಿಂದ ಕೂಡಿದವರು ಲಕ್ಷ್ಯಸಿದ್ಧಿವಿಡಿದು ಉದಾಹರಣೆ ಪ್ರಯೋಗಗಳನ್ನು ಆಧರಿಸಿ ಉಳಿದುವನ್ನು ತುಂಬಿಸಿಕೊಳ್ಳಬೇಕು. ಎನ್ನುತ್ತಾ "ಪ್ರಯೋಗ ಶರಣಾ ವೈಯಾಕರಣಾಃ"ಎಂಬ ಮಾತನ್ನು ಅಕ್ಷರಶಃ ಪಾಲಿಸಿದ ಅವನು ಭಾಷಾ ವಿಜ್ಞಾನಿಯ ಮೂಲ ಗುಣವನ್ನು ಪಡೆದಿದ್ದಾನೆ.

ಬಹುಶಃ ಅವನ ವ್ಯಾಕರಣದಲ್ಲಿ ಸೇರದ ಒಂದೆರಡು ಪ್ರತ್ಯಯಗಳನ್ನು ಅವನ ಮಾತಿನಂತೆಯೇ ಸೇರಿಸಿಕೊಳ್ಳುವ ಪ್ರಯತ್ನ ಇಲ್ಲಿದೆ.

'ಅಲ್' ಪ್ರತ್ಯಯ—ಈ ಪ್ರತ್ಯಯದ ವಿವಿಧ ಪ್ರಯೋಗದ ಕುರಿತು ಪ್ರತ್ಯೇಕ ಚರ್ಚಿಸಿ ('ಅಲ್' ಪ್ರತ್ಯಯ-ಸಾಧನೆ, ಬೆಂಗಳೂರು ವಿಶ್ವವಿದ್ಯಾನಿಲಯ.) ಅದು 'ಕೃನ್ನಾಮ'ದಲ್ಲೂ ಬಳಕೆಯಾಗುತ್ತದೆಂದು ಸೂಚಿಸಿ ಬಿಡಲಾಗಿದೆ. ಇಲ್ಲಿ ಅದರ ಸ್ವಲ್ಪ ಹೆಚ್ಚಿನ ವಿವರ ಪ್ರಸ್ತುತ

ಧಾತುವಿಗೆ ಅಲ್ ಲ್ ಪ್ರತ್ಯಯ ಸೇರಿ ನಾಮವಾಚಕವಾಗುವುದು.
ಕೂಡು-ಕೂಡಲ್ (ಕೂಡ್ಲು), ಪುಗು-ಪುಗಲು (ಹುಗಲು, ಪ್ರವೇಶ)
ನುಗ್ಗು-ನುಗ್ಗಲು (ನೂಕು ನುಗ್ಗಲು). ಸುಯ್-ಸುಯ್ಯಲ್, ಸುಯ್ಲು
ಪೊಯ್-ಪೊಯಲ್ ಪೊಯ್ಯಲ್ ಪೊಯ್ಲು ಹೊಯ್ಲು

ಹೀಗೆ ಸಿಡಿ-ಸಿಡಿಲ್, ಬಚ್ಚು-ಬಚ್ಚಲು, ಕೊಚ್ಚು-ಕೊಚ್ಚಲು, ಮುಚ್ಚು-ಮುಚ್ಚಲು ಕಿರಿಚು-ಕಿರಿಚಲು ಮೊದಲಾದ ಶಬ್ದಗಳನ್ನು ಪಟ್ಟಿ ಮಾಡಬಹುದು.

'ಅಲ್' ಪ್ರತ್ಯಯವೇ 'ಎಲ್' ಆಗಿ. ತುಳು ಮಲಯಾಳಗಳಲ್ಲಿ ಪ್ರಯೋಗ ವಾಗುತ್ತದೆ. ತುಳು-ಉಣ್ಗು-(ಒಣಗು) ಉಣ್ಗೆಲ್, ಬಗ್ಗು (ಬಗ್ಗು)-ಬಗ್ಗೆಲ್, ಬಚ್ಚು (ಆಯಾಸ)-ಬಚ್ಚೆಲ್ ಮಲಯಾಳ-ಒಯ್ (ಉಳಿಯುವಿಕೆ) ಒಯ್ವೆಲ್। ಓಡಿ-ಸಿಡಿಚ್ಚೆಲ್, ಕರೆ-ಕರೆಚ್ಚೆಲ್ ಕೆಲವೊಮ್ಮೆ ಭಾವವಾಚಕ ಕ, ಕು, ಪ್ರತ್ಯಯ ಗಳ ಮುಂದೆ 'ಅಲ್' ನೊಂದಿಗೆ ಪುಲ್ಲಿಂಗ ಸೂಚಕ 'ಅನ್' ಸೇರಿ ನಾಮವಾಚ ವಾಗುವುದುಂಟು.

ಒಣಕು + ಅಲ್ + ಅನ್–ಒಣಕಲ (ಒಣಗಿದಂತಿರುವವನು)
ಸಣಕು + ಅಲ್ + ಅನ್—ಸಣಕಲ (ಸಣ್ಣಕೆ ಇರುವವನು)
ಮುರುಕು + ಅಲ್ + ಅನ್—ಮುರುಕಲ ಮೊದಲಾದವು
ಅಟೆ, ಟೆ, ಕಟೆ—ತದ್ಧಿತಪ್ರತ್ಯಯ–

ಅದು ಹೆಚ್ಚಾಗಿರುವುದು, ಪ್ರಚುರವಾಗಿರುವುದು ಎಂಬರ್ಥದಲ್ಲಿ ಇದರ ಪ್ರಯೋಗ ಕಂಡು ಬರುತ್ತದೆ.

ಉದಾ– ಹುಳು–ಹುಳುಪಟೆ (ಹುಳ್ಪಟೆ)–ಹುಳು ಹುಪ್ಪಟೆ
ಉಪ್ಪು–ಉಪ್ಪಟೆ, ನೀರು–ನೀರಟೆ
ಮುರುಕು–ಮುರುಕಟೆ (ಮುರಿದದ್ದು)
ಸೀ–ಸೀಕಟೆ (ಸಿಹಿ ಜಾಸ್ತಿಯಾಗುವುದು)
ಒಣಕು–ಒಣಕಟೆ (ವಿಪರೀತ ಒಣಗಿರುವುದು)
ಮುರುಟು–ಮುರುಟಟೆ (ಮುರುಟಿದ್ದು)
ತುಳು–ಪೊಳಿ ಪೊಳಿಕಟೆ (ಮುರಿದದ್ದು)

ಮೇಲೆ ಹೇಳಿದ ಪ್ರತ್ಯಯಗಳ ಪ್ರಯೋಗ ಗ್ರಂಥಗಳಲ್ಲಿ ದುರ್ಲಭವಾದರೂ ಲೋಕವ್ಯವಹಾರದಲ್ಲಿ, ಹವ್ಯಕ ಮೊದಲಾದ ಆಡು ಮಾತುಗಳಲ್ಲಿ ಸಾಮಾನ್ಯ. ಭಾಷೆಯು ನಿಂತ ನೀರಲ್ಲ, ಸದಾ ಹರಿಯುವ ಮಹಾ ಸಿಂಧುವಿನಂತೆ, ಗಮನಕ್ಕೆ ಬಾರದೆ ಉಳಿದವು, ಆಗಿಂದಾಗ ಮತ್ತೆ ಮತ್ತೆ ಸೇರಿಕೊಳ್ಳುವ ಅಂಶಗಳು ಅದರಲ್ಲಿ ಹಲವಾರು. □

ಡಾ|| ಉಪ್ಪಂಗಳ ರಾಮಭಟ್ಟ

## 'ತಿರುಪ್ಪಾವೈ'–ಆಚರಣೆ—ಮತ್ತೊಂದು ದೃಷ್ಟಿ

ಕರ್ನಾಟಕ ಲೋಚನದ ಸಂಪುಟ ೯ರ ಮೊದಲ ಸಂಚಿಕೆ (ಜೂನ್ ೧೯೯೬) ಯಲ್ಲಿ 'ತಿರುಪ್ಪಾವೈ' ಆಚರಣೆಯ ಇನ್ನೊಂದು ದೃಷ್ಟಿಯನ್ನು ವಿವರಿಸಲಾಗಿದೆ. ಇದಕ್ಕೆ ಪೂರಕವಾಗಿ ಮತ್ತೊಂದು ದೃಷ್ಟಿಯನ್ನು ಈಗ ನೀಡಲಾಗುವುದು. 'ತಿರುಪ್ಪಾವೈ' ಎಂದರೆ. 'ಮಂಗಳಕರ ಬಾಳುವೆ' ಅಥವಾ 'ಸಂಪದ್ಭರಿತ ಜೀವನ' ವೆಂದು ನಾವು

ಆಂತಿದ್ದೇನೆ. ಇಲ್ಲಿ ಸಂಪತ್ತು ಎಂದರೆ ನಿತ್ಯ ಜೀವನದಲ್ಲಿ ಅನ್ನಾಹಾರಾದಿಗಳ ಸೇವನೆಗೆ ಕೊರತೆಯಾಗದಂತೆ ಎಲ್ಲ ಜನರೂ ಬಾಳಿ, ಬದುಕಬೇಕಾಗುವ 'ಪರಿಕರವು' ಅಥವಾ 'ಸವಲತ್ತು'. 'ಸಂಪತ್ತು' ಎಂದರೆ ಕೇವಲ ಹಣವಲ್ಲ. ಚಿನ್ನ ಬೆಳ್ಳಿ, ವಜ್ರ, ವೈಢೂರ್ಯಗಳಂತೂ ಅಲ್ಲವೇ ಅಲ್ಲ. ಇವೆಲ್ಲಾ ಕ್ಷಣಿಕ ಸಂಪತ್ತುಗಳು. ಪ್ರತಿದಿನದ ಊಟ, ಉಪಚಾರಗಳಿಗೆ, ನಿತ್ಯ ಜೀವನಕ್ಕೆ ಈ ಕ್ಷಣಿಕ ಸಂಪತ್ತುಗಳು ಯಾವ ಉಪಯೋಗಕ್ಕೂ ಬರಲಾರವು. ಇಲ್ಲಿ ಸಂಪತ್ತು ಎಂದರೆ ಪ್ರಕೃತಿ ಸಂಪತ್ತು. ದವಸ, ಧಾನ್ಯ, ಹಣ್ಣು ಹಂಪಲು, ಹಾಲು, ನೀರು, ಗಾಳಿ, ಪ್ರಾಣಿಗಳು, ಸ್ನೇಹಿತರು, ಸಂಬಂಧಿಗಳು, ಇತ್ಯಾದಿಗಳು ಮಾತ್ರವೇ ನೈಸರ್ಗಿಕ ಸಂಪತ್ತುಗಳು. ಗ್ರಾಮವಲ್ಲಾಗಲೀ ಪೇಟೆಯಲ್ಲಾಗಲೀ ಈ ಪ್ರಕೃತಿ ಸಂಪತ್ತು ದೊರೆಯದಿದ್ದರೆ ಬದುಕೇ ನಡೆಯಲಾರದು. ಪೇಟೆಯಲ್ಲಿ ಹಣ ಕೊಟ್ಟರೂ ಸಹ ಕೆಲವೇ ಅನ್ನಾಹಾರಾದಿಗಳು ಲಭಿಸುತ್ತವೆ. ಅನೇಕ ಅನ್ನಾಹಾರಾದಿಗಳು ಪೇಟೆಯಲ್ಲಿ ಲಭಿಸುವುದೇ ದುರ್ಲಭವಾಗಿರುತ್ತದೆ. ಹೀಗಾಗಿ 'ಸಂಪತ್ತು' ಎಂದರೆ 'ಪ್ರಕೃತಿ' ಸಂಪತ್ತು ಎಂದರ್ಥ. 'ಪ್ರಕೃತಿ' ಸಂಪತ್ತಿನಿಂದ ಸಂಪದ್ಭರಿತವಾದ ಬಾಳುವೆಯಲ್ಲಿ ತೊಂದರೆಗಳಷ್ಟಿರುವುದಿಲ್ಲ. 'ಅರ್ಥ ಸಂಪತ್ತಿನಿಂದ' ಸಂಪದ್ಭರಿತವಾದ ಬಾಳುವೆಯಲ್ಲಿನ ಸಂತೋಷವು ಅಲ್ಪಕಾಲಿಕ. ಏಕೆಂದರೆ, 'ಅರ್ಥ'ವು ಮಾನವನ ಆಸೆಗಳಿಗೆ ಸೀಮಿತ. 'ಪ್ರಕೃತಿ'ಮಾತೆಯೋ ಸ್ವತಂತ್ರಳು. ಈ 'ಪ್ರಕೃತಿ' ಸಂಪತ್ತಿಗಷ್ಟೇ ನಮ್ಮ ಗ್ರಾಮೀಣ ಬದುಕಿನಲ್ಲಿ ಸ್ಥಾನವುಂಟು.

'ಆಂಡಾಳ್' ತಮಿಳು ಮಾಸದ ಆಡಿಮಾಸದ ಪೂರ್ವ ಫಲ್ಗುಣಿ ನಕ್ಷತ್ರದಲ್ಲಿ ಪೆರಿಯಾಳ್ವಾರಿಗೆ ಹೂದೋಟದಲ್ಲಿ ಮಗುವಿನ ರೂಪದಲ್ಲಿ ಲಭಿಸಿದಳೆಂದು ಹೇಳಲಾಗಿದೆ. 'ಆಂಡಾಳ್' ಎಂದರೆ 'ಪ್ರಪಂಚವನ್ನು ಆಳುವವಳು' ಎಂದರ್ಥ. ಈ ಪ್ರಪಂಚವನ್ನು ಏಕ ಪ್ರಕಾರವಾಗಿ ಅನವರತ ಕಾಲವೂ 'ಆಳು'ವವಳು ಯಾರು ? 'ಆಹಾರ' ವಲ್ಲದೆ ಬೇರೇನು ? 'ಆಡಿ' ಮಾಸವು ತಮಿಳು ವರ್ಷದ ಆಷಾಢ ಮಾಸ. ಈ ಮಾಸದಲ್ಲಿ ಮಳೆ ಹೆಚ್ಚು. ಬೆಳೆ ಹಾಕಲು ಸೂಕ್ತ ಕಾಲ. 'ಪೂರ್ವ ಫಲ್ಗುಣಿ' ನಕ್ಷತ್ರವು ಸಾಮಾನ್ಯವಾಗಿ 'ಶುಕ್ಲ ಪಕ್ಷ'ದ ದ್ವಿತೀಯಾ, ತೃತೀಯೆಯಂದು ಬರುತ್ತದೆ. ಈ ಮಾಸದಲ್ಲಿಯೇ ಕೃಷಿ ಚಟುವಟಿಕೆಗಳು ಈ ಸಾಲಿನಲ್ಲಿ ಆರಂಭವಾಗುತ್ತದೆ. ಹೀಗೆ ಈ 'ಆಡಿ' ಮಾಸದಲ್ಲಿ 'ಆಹಾರ'ದ ಜನ್ಮ ಅಥವಾ ಲಭ್ಯತೆಯು ಉಂಟಾಗುತ್ತದೆ. ಈ 'ಆಹಾರ'ವೆಂಬ 'ಆಂಡಾಳ್'ನ ಜನ್ಮವು ಹೀಗೆ 'ಆಡಿ' ಮಾಸದಲ್ಲಿ ಉಂಟಾಗುತ್ತದೆ. ಈ 'ಆಹಾರ'ವಾದರೋ ಮಾನವನ ದೇಹದಲ್ಲಿ ಸೇರಿಕೊಂಡು ಐಕ್ಯವಾಗಲು ಸದಾ ಬಯಸುತ್ತದೆ. ಈ 'ಆಂಡಾಳ್'ಗೆ ತನ್ನ ಸ್ವಾರ್ಥವೇನೂ ಇಲ್ಲ. ಈ 'ಆಹಾರ'ವಾದರೋ ಸ್ವಚ್ಛವಾಗಿದ್ದರೆ ಮಾತ್ರ ಮಾನವನ ದೇಹದಲ್ಲಿ ಸೇರಲು ಬಯಸುತ್ತದೆ. ತನ್ನ 'ಪರಿಶುದ್ಧತೆ'ಯನ್ನು ಮೊದಲು 'ವಾಸನೆ' ಯಿಂದ ಸೂಸುತ್ತಾ ನಂತರ ದೇಹವನ್ನು ಸೇರುತ್ತದೆ. ಈ 'ವಾಸನೆ' ಯೆ ಈ 'ಆಂಡಾಳ್' ಮುಡಿ

ದಿರುವ ಹೂವು. ಮೊದಲು ತಾನು ಈ 'ವಾಸನೆ'ಯನ್ನು ಧರಿಸಿ, ಅನಂತರ ದೇಹವೆಂಬ ಶ್ರೀರಂಗನಾಥನಿಗೆ ಅರ್ಪಿಸುವ ಈ 'ಆಂಡಾಳ್' ನಿಜಕ್ಕೂ 'ಮುಡಿದು ನೀಡಿದವಳು' (ಶೂಡಿ ಕೊಡುತ್ತ ನಾಚ್ಚಿಯಾರ್). ಹೀಗೆ ಈ 'ಆಹಾರ' ಮಾನವ ದೇಹಕ್ಕಿರುವ ಆಂಡಾಳ್—ಶ್ರೀರಂಗನಾಥನ ಸಾನುರಸ್ಯವು ಸಾಮಾನ್ಯನಿಗೆ ಹೇಗೆ ಅರಿವಾಗಬಹುದು ? ಹೀಗೆ ಮಾನವ ಜೀವನದಲ್ಲಿ ನಿಳಿತವಾಗಿರುವ ಆಹಾರ–ದೇಹ ಸಂಬಂಧವನ್ನು ಪ್ರೀತಿ, ಕರುಣೆ, ಸಹಕಾರಗಳ ರೂಪದಲ್ಲಿ 'ತಿರುಪ್ಪಾವೈ' ನಲ್ಲಿ ಎಷ್ಟು ಚೆನ್ನಾಗಿ ವರ್ಣಿಸಲಾಗಿದೆ !

ಇನ್ನು ಈ 'ಆಂಡಾಳ್' ಆರು ತಿಂಗಳ ಕಾಲ ಹೊಲ, ಗದ್ದೆ, ಕಾಡುಗಳಲ್ಲಿ ತನ್ನ ಬೆಳವಣಿಗೆಯ ವ್ರತವನ್ನು ನಿಸರ್ಗದಲ್ಲಿ ಚಳಿ, ಮಳೆ, ಬಿಸಿಲೆನ್ನದೆ, ಅವುಗಳಿಂದ ಪರಿಪಕ್ವವಾಗುತ್ತ, ಸಂಕ್ರಾಂತಿಯಲ್ಲಿ, ಮಾನವನ ಉಪಯೋಗಕ್ಕೆ ಪರಿಪಕ್ವವಾಗಿ, ಅನಂತರ ಗೃಹದ ಖಜಾನೆ, ಕಣಜ ಇತ್ಯಾದಿ ಸಂಗ್ರಹಾಲಯಗಳಲ್ಲಿ ಸೇರುತ್ತದೆ. ಈ ಸಂಕ್ರಾಂತಿಯಂದು ಈ 'ಆಹಾರ ಧಾನ್ಯ'ವು ಮಾನವನಲ್ಲಿ ಸೇರಿಹೋಗುತ್ತದೆ. ಈ 'ಆಂಡಾಳ್' ಆರು ಮಾಸಗಳ ಕಾಲದ ತನ್ನ ಆಯುಷ್ಯದಲ್ಲಿ ಕೊನೆಯ ತಿಂಗಳುಗಳಲ್ಲಿ ಚೆನ್ನಾಗಿ 'ಪಕ್ವ'ವಾಗಿ ಮಾನವನಲ್ಲಿ ಸೇರಿಕೊಳ್ಳಲು ಸಿದ್ಧಳಾಗಿರುತ್ತಾಳೆ. ಕೊನೆಯ ಮಾಸವಾದ ಧನುರ್ಮಾಸದಲ್ಲಿ ಚಳಿಯು ಶಿಖರ ಮುಟ್ಟಿದರೂ ಸಹ, ಈ 'ಆಂಡಾಳ್' ಮಾನವನಲ್ಲಿ ಸೇರಿ ಹೋಗಲು ಪರಿಪಕ್ವವಾಗುತ್ತಾ, ಮಕರ ಸಂಕ್ರಾಂತಿಯಂದು ಪರಿಪೂರ್ಣ ಪರಿಪಕ್ವವಾಗುತ್ತಾಳೆ. ಸಾಮಾನ್ಯನಾಗಿಕೃಷಿಕರು ಸಂಕ್ರಾಂತಿಯವರೆಗೂ ಹೊಲ ಗದ್ದೆಗಳಲ್ಲಿ ನಸುಕಿಗೆ ಮೊದಲೇ ಪ್ರತಿದಿನವೂ ತಮ್ಮ ಕಾರ್ಯವನ್ನು ಆರಂಭಿಸಿ, ಮೆದೆಗಳನ್ನು ಕಣದಲ್ಲಿ ಒಟ್ಟಿರುತ್ತಾರೆ. ಅನಂತರ ಸಂಕ್ರಾಂತಿಯಂದು ಕಣದಲ್ಲಿನ ಕೆಲಸ, ಕಾರ್ಯಗಳನ್ನು ಆರಂಭಿಸುತ್ತಾರೆ. ಅಂದು ಕಣದಲ್ಲಿ ಧಾನ್ಯಗಳ ಒಕ್ಕುವ ಕಾರ್ಯ ಆರಂಭವಾಗುತ್ತದೆ. ಹೀಗಾಗಿ, ನೆಲದ ಮೇಲೆ ಬೆಳೆದು ನಿಂತ ಪೈರು, ಈ ಸಂಕ್ರಾಂತಿಯಂದು ಹುಲ್ಲು, ಧಾನ್ಯಗಳಾಗಿ ಬೇರಾಗುತ್ತವೆ. ಹೀಗೆ ಈ 'ಪೈರು' ತನ್ನ ಭೌತಿಕ ರೂಪವನ್ನು ಬದಲಾಯಿಸಿಕೊಳ್ಳುವ ಪ್ರಥಮ ದಿನವನ್ನು 'ಸಂಕ್ರಾಂತಿ' ಎಂದು ಕರೆಯುತ್ತಾರೆ. ಹಾಗೆಯೇ ಮುಂದಿನ ಮಾಸವಾದ 'ಮಕರ' ಮಾಸದಲ್ಲಿ ಈ ಧಾನ್ಯ ಒಕ್ಕುವ ಕಾರ್ಯ ಮುಂದುವರಿದು ಹುಲ್ಲು, ಧಾನ್ಯಗಳನ್ನು ಮುಂದಿನ ವರ್ಷಾವಧಿಯ ಉಪಯೋಗಕ್ಕಾಗಿ, ಕೃಷಿಕರು ಕಣಜ, ಮೆದೆಗಳಲ್ಲಿ ಸಂಗ್ರಹಿಸುತ್ತಾರೆ. ಈ ಧಾನ್ಯ ಒಕ್ಕುವಾಗ ಧಾನ್ಯವು 'ಥೈ, ತೈ' ಎಂದು ಶಬ್ದ ಮಾಡುತ್ತಾ, ಹುಲ್ಲಿನಿಂದ ಬೇರಾಗುತ್ತದೆ. ಇದರಿಂದ ಈ ಮಕರ ಮಾಸಕ್ಕೆ 'ತೈಮಾಸ' ಎಂದು ಕರೆಯುತ್ತಾರೆ. ಈ ಹೆಸರು ಅನ್ವರ್ಥವಾಗಿದೆಯಲ್ಲವೇ ? ಹಾಗೆಯೇ ಆಡಿ ಮಾಸದ ಹಿಂದಿನ ಮಾಸದಲ್ಲಿ ಕೃಷಿಕರು ಧಾನ್ಯಗಳನ್ನು ಬಟ್ಟಲು ಪಾತಿಯಲ್ಲಿ ಅಗೆ ಹಾಕಿರುತ್ತಾರೆ. ಆಷಾಢ ಮಾಸಕ್ಕೆ ಮೊದಲ ಮಾಸದಲ್ಲಿ ಹೊಲ, ಗದ್ದೆಗಳನ್ನು ಪೈರು ನೆಡಲು ಸಿದ್ಧಮಾಡಿ

ಕೊಳ್ಳುತ್ತಾರೆ. ಸಾಮಾನ್ಯವಾಗಿ 'ಆಡಿ' ಮಾಸದ 'ಪೂರ್ವ ಫಲ್ಗುಣೀ' ನಕ್ಷತ್ರದ ದಿನದಂದು ಹೊಲ, ಗದ್ದೆ ಕೆಲಸಗಳೆಲ್ಲವೂ ಪೂರ್ಣಗೊಳಿಸಲ್ಪಡುತ್ತದೆ. ಅದ ಕ್ಕಾಗಿಯೇ ಈ ದಿನವನ್ನು ತಮಿಳಿನಲ್ಲಿ 'ತಿರುವಾಡಿ ಪ್ಪೂರಂ' ಎಂದು ಕರೆಯು ತ್ತಾರೆ. ಅಂದೇ 'ಆಂಡಾಳ್' ಜನ್ಮ ದಿನವನ್ನು ಆಚರಿಸಲಾಗುತ್ತದೆ. 'ಆಡಿ ಪ್ಪೂರಂ' ಎಂದರೆ ಆಡಿಮಾಸದ ಕೆಲಸ ಪರಿಪೂರ್ಣವಾಯಿತೆಂದರ್ಥ. 'ತಿರು' ಎಂದರೆ ಮಂಗಳಕರ, ಆಡಿ ಎಂದರೆ ಆರಂಭ, ಹೀಗೆ 'ತಿರುವಾಡಿ ಪ್ಪೂರಂ' ಹಬ್ಬ ವೆಂದರೆ 'ಮಂಗಳಕರ ಬಾಳುವೆಯ ಆರಂಭವು' ಈ ಸಾಲಿನಲ್ಲಿ ಸಫಲವಾಗಿ ಆರಂಭ ವಾಯಿತೆಂದು ಅರ್ಥ. ಯಾರಿಗೆ ತಾನೇ ಮಂಗಳಕರ ಬಾಳುವೆಯ ಆರಂಭ ಬೇಕಾ ಗಿಲ್ಲ ? ಈಗ ಅದರ 'ಆರಂಭ' ವೇತಕ್ಕೆಂಬ ಪ್ರಶ್ನೆಯೇಳಬಹುದು. ಬೇಸಗೆಯಲ್ಲಿ ಮಾನವರು ಅದರ ತಾಪದಿಂದ ಹಾಗೂ ಹಲವಾರು ಕೃಷಿಯೇತರ ಕಾರ್ಯಗಳಿಂದ ಬಳ ಲಿರುತ್ತಾರೆ. ಈ ಕೃಷೀತರ ಕಾರ್ಯಗಳಿಂದ ಸ್ವಲ್ಪ ಕಾಲವಾದರೂ ಮಾನವರು ನಿಸರ್ಗ ಮಾತೆಯಿಂದ ದೂರವಿರುತ್ತಾರೆ. ಬೇಸಿಗೆ ಕಳೆದ ನಂತರ ನಿಸರ್ಗ ಮಾತೆಯ ಮಡಿಲಿಗೆ ಮತ್ತೆ ಮರಳುತ್ತಾರೆ. ಹೀಗೆ ಮರಳುವುದರಿಂದ ಮಾನವರು ನಿಸರ್ಗ ಮಾತೆಯಲ್ಲಿ ನೆಮ್ಮದಿ ಪಡೆಯುತ್ತಾರೆ. ಮುಂದಿನ ಬಾಳು ನಿಸರ್ಗಮಾತೆಯ ಮಡಿಲಲ್ಲಿ ಮಂಗಳಕರವಾಗಿರುವುದೆಂಬುದನ್ನು ಅವರು ಅರಿಯುತ್ತಾರೆ. ತಮ್ಮ ಬಳಲಿಕೆಯಿಂದ ಮುಕ್ತಿ ದೊರೆತ ಕೂಡಲೇ, ಮಾನವರಿಗೆ 'ಮಂಗಳ'ದ ಅರಿ ವಾಗುತ್ತದೆ.

ಇನ್ನು ಈ ಆಷಾಢ ಪೂರ್ವ ಮಾಸಕ್ಕೆ ತಮಿಳಿನಲ್ಲಿ 'ಆನಿ' ಎಂದು ಹೆಸರು. ಸಾಮಾನ್ಯವಾಗಿ 'ಆನಿ' ಮಾಸದಲ್ಲಿ ಮಳೆಗಾಲ ಆರಂಭವಾಗುತ್ತದೆ. ಕೃಷಿ ಕಾರ್ಯಕ್ಕೆ ಈ ಮಳೆಯು ಅನುವು ಮಾಡಿಕೊಡುತ್ತದೆ. 'ಆನಿ' ಎಂದರೆ 'ಅನುವು' ಎಂದರ್ಥ. ಕನ್ನಡಕ್ಕೂ ತಮಿಳಿಗೂ ಪದಗಳಲ್ಲಿ ಎಷ್ಟು ಸಾಮ್ಯವಿದೆಯಲ್ಲವೇ ?

ಹೀಗೆ ಒಟ್ಟು ಎಂಟು ಮಾಸಗಳ ಕಾಲ ಈ ಕೃಷಿ ಕಾರ್ಯವು ನಡೆಯುತ್ತದೆ. ಆರು ಮಾಸಗಳು ಧಾನ್ಯ ಬೆಳೆದು ಪಕ್ವವಾಗುವ ಸಮಯ, ಮೊದಲ ಮತ್ತು ಕೊನೆಯ ಮಾಸಗಳು ಕೃಷಿ ಕಾರ್ಯಾರಂಭ ಮತ್ತು ಧಾನ್ಯ ಶೇಖರಣೆಯ ಮಾಸಗಳು. ಹೀಗಿರುವ ಆಹಾರವಾಗಿರುವ 'ಆಂಡಾಳ್' ಎಂಟು ವರ್ಷ ಜೀವಿಸಿದ್ದಳೆಂಬುದನ್ನು ಈ ಎಂಟು ಮಾಸಗಳೆಂದು ತಿಳಿಯಬೇಕು. ಇನ್ನು ಹಲವರು ಧಾನ್ಯ ಬೆಳೆಯಲು 'ಆರೆಂಟು' ಮಾಸಗಳ ಅಗತ್ಯವಿಲ್ಲ, ಈಗ ಕೇವಲ ಮೂರು ಮಾಸಗಳಲ್ಲಿ ಬೆಳೆಯ ಬಹುದು, ಅದ್ದರಿಂದ ಆಹಾರವು 'ಆಂಡಾಳ್' ಅಲ್ಲವೆನ್ನಬಹುದು. ಅವರೆಲ್ಲರೂ ಅರಿಯ ಬೇಕಾದ ವಿಚಾರವೇನೆಂದರೆ, ನಮ್ಮ ಪೂರ್ವಜರು ನಿಸರ್ಗ ಪ್ರಿಯರಾಗಿ, ನಿಸರ್ಗವು ನೀಡುವ ಆಹಾರ ಧಾನ್ಯಗಳನ್ನು ಸಂಪೂರ್ಣ ಶುಚಿಯಾಗಿರುವ, ಉತ್ಕೃಷ್ಟ ಆಹಾರ

ಧಾನ್ಯಗಳನ್ನು ನಿಸರ್ಗದೊಡನೆ ಸಹಕರಿಸುತ್ತ ಬೆಳೆಯುತ್ತಿದ್ದರೆಂಬುದು. ನಮ್ಮ ಪೂರ್ವಜರು ತಮ್ಮ ಕೃಷಿಕಾರ್ಯಗಳಿಗೆ ಬಾಹ್ಯ ಜಗತ್ತನ್ನು ಯಾವ ಕಾರಣಕ್ಕೂ ಆಶ್ರಯಿಸುತ್ತಿರಲಿಲ್ಲ. ಬೀಜ, ಸಲಕರಣೆ, ಗೊಬ್ಬರ, ಜನ ಇವೆಲ್ಲವೂ ಸ್ಥಳದಲ್ಲಿಯೇ ಲಭಿಸುತ್ತಿದ್ದವು. ಅವರ ಬಳಿಯೇ ಇರುತ್ತಿತ್ತು. ಈಗಿನ 'ಅರ್ಥ ಕೃಷಿ'ಯಂತೆ ಬೀಜಕ್ಕಾಗಿ ಬಹುರಾಷ್ಟ್ರೀಯ ಉದ್ದಿಮೆಗಳು, ಗೊಬ್ಬರಕ್ಕಾಗಿ, ಔಷಧಿಗಳಿಗಾಗಿ ಮಾರುಕಟ್ಟೆಗಳನ್ನು ಆಶ್ರಯಿಸುತ್ತಲೇ ಇರಲಿಲ್ಲ. ಅವರು ಆಶ್ರಯಿಸುತ್ತ ಇದ್ದುದು 'ನಿಸರ್ಗ' ಮಾತೆಯನ್ನೊಬ್ಬಳನ್ನೇ. ಅವಳಲ್ಲಿ ಅನನ್ಯ ಭಕ್ತಿಯಿಟ್ಟು, ಅವಳಲ್ಲಿ ಒಂದಾಗಿ ಹೋಗಿದ್ದುದರಿಂದ ಅವಳು ಅವರನ್ನು ಎಂದೂ ಕೈ ಬಿಡುತ್ತಿರಲಿಲ್ಲ. ಹೀಗೆ ನಮ್ಮೆಲ್ಲ 'ಪೂರ್ವಜರೂ' ಸದಾ ಕಾಲ 'ನಿಸರ್ಗ'ವನ್ನೇ ಚಿಂತಿಸುತ್ತ ಇದ್ದುದರಿಂದ ಇವರಿಗೆ 'ವಿಷ್ಣು ಚಿತ್ತ'ಎಂದು ಹೆಸರು. 'ವಿಷ್ಣು' ಎಂದರೆ ನಿಸರ್ಗ, ಪ್ರಕೃತಿ ಎಂಬರ್ಥವೂ ಇರುವುದನ್ನಿಲ್ಲಿ ಗಮನಿಸಬೇಕು. ಹೀಗೆ ಈ 'ವಿಷ್ಣು ಚಿತ್ತ' ರಾದ ನಮ್ಮ ಪೂರ್ವಜರು 'ಆಂಡಾಳ್' ಎಂಬ ಪೈರನ್ನು 'ಆಡಿ ಮಾಸದ ಪೂರ್ವ ಫಲ್ಗುಣಿ' ನಕ್ಷತ್ರದಂದು ಕೃಷಿ ಕಾರ್ಯ ಪೂರೈಸಿದಾಗ 'ಎಳೆಯ ಪೈರಿನ' ರೂಪದಲ್ಲಿ ಕಂಡಿರುತ್ತಾರೆ. ಈ ಪೈರನ್ನು ತಾವೇ ಮುಂದೆ ಸಾಕಿ ಸಲಹಿರುತ್ತಾರೆ. ಈ 'ಆಂಡಾಳ್' ಪರಿಪಕ್ವವಾದಾಗ ಆಹಾರ ರೂಪದಲ್ಲಿ ಮಾನವ ದೇಹದಲ್ಲಿ ಐಕ್ಯವಾಗುತ್ತಾಳೆ. ಈ 'ಆಂಡಾಳ್'ಗೆ ಇರುಪ ಮಾನವರ ಹಸಿವನ್ನು ಇಂಗಿಸಬಯಸುವ ಏಕಚಿತ್ತತೆಯು ನಮ್ಮ ಹುಲುಮಾನವರಿಗೆಲ್ಲಾ ಆಜೀವ ಪರ್ಯಂತಯಿರಬೇಕೆಂಬಾಸೆಯೇ ಈ 'ತಿರುಪ್ಪಾವೈ' ನಮಗೆಲ್ಲಾ ನಿತ್ಯಾನುಸಂಧೇಯವಾಗಿರಬೇಕೆಂಬ ಉದ್ದೇಶವಾಗಿರುತ್ತದೆ. ಹೀಗೆ ಪ್ರತಿಯೊಬ್ಬರೂ ಆಜೀವ ಪರ್ಯಂತ 'ವಿಷ್ಣು ಚಿತ್ತ'ವನ್ನು ಹೊಂದಿ, 'ಆಂಡಾಳ್'ನ 'ಅನನ್ಯತೆ'ಯನ್ನು ಪಡೆದರೆ, ಪಡೆದಿದ್ದರೆ ಇಡೀ ಲೋಕವು ಸಂತೋಷಕರ, ಉಲ್ಲಾಸಕರ ಸಂಪದ್ಭರಿತ ಬಾಳುವೆಯಾಗುವುದರಲ್ಲಿ ಯಾವ ಸಂಶಯವಿದೆ ? ನಾವೇಕೆ ಮಾನವರು ಈ ದೃಷ್ಟಿಯಲ್ಲಿ ಈ 'ತಿರುಪ್ಪಾವೈ'ಯನ್ನು ನಿತ್ಯಾನುಸಂಧೇಯ ಮಾಡಿಕೊಂಡು, ಸಂಪದ್ಭರಿತರಾಗಿ ಜೀವನವನ್ನು ಮಾರ್ಪಾಟು ಮಾಡಿಕೊಳ್ಳಬಾರದು ?

—ವಾಲ್ಮೀಕಿ ಶ್ರೀನಿವಾಸ ಅಯ್ಯಂಗಾರ್ಯ

—o—

# ಕನ್ನಡದ 'ಕ್ರಿಯಾಸಮಾಸ' ಒಂದು ಪುನರವಲೋಕನ

ಎಂ. ಜಿ. ವಾರಿ

ಕ್ರಿಯಾ ಸಮಾಸದ ಕುರಿತು ಈ ತನಕ ಇದ್ದಿರಬಹುದಾದ ತೊಡಕಿನ ವಿಚಾರಾಂಶಗಳೊಂದಿಗೆ ನನ್ನ ಕೆಲವು ಅಭಿಪ್ರಾಯಗಳನ್ನು ಈ ಹಿಂದಿನ ಸಂಚಿಕೆಯಲ್ಲಿ [1] ಮಂಡಿಸಿದ್ದೆ. ಇದಕ್ಕೆ ಪ್ರತಿಕ್ರಿಯೆ ಸ್ವರೂಪವೋ, ಎನ್ನುವಂತೆ [2] ಶ್ರೀ ಸೇಡಿಯಾಪು ಕೃಷ್ಣಭಟ್ಟರ ವಿಚಾರಗಳೂ ಇದೇ ಪತ್ರಿಕೆಯಲ್ಲಿ [3] ತದನಂತರ ವ್ಯಕ್ತಗೊಂಡಿವೆ. ಮತ್ತೆ ಇದಕ್ಕೆ ಸಂಬಂಧಿಸಿದಂತೆ ಬರೆಯುವ ಅನಿವಾರ್ಯತೆ ಕಂಡದ್ದರಿಂದ ಇದೀಗ ಈ ಮರುಲೇಖನ ರೂಪುದಳೆಯುತ್ತಲಿದೆ.

೧. ಇದರ ಹೆಸರನ್ನು ಉಲ್ಲೇಖಿಸದಿದ್ದರೂ ಈ ಸಮಾಸದ ಪ್ರಕ್ರಿಯೆಯನ್ನು ಮೊದಲು ಗುರ್ತಿಸಿದ ಕೀರ್ತಿ ನಾಗವರ್ಮನಿಗೆ ಸಲ್ಲುತ್ತದೆ. ಈ ಪಥದಲ್ಲೆ ಮುಂದುವರಿದು ವಿಶದ ವಿವರಣೆಯನ್ನು ಕೊಡಲು ಕೇಶಿರಾಜ ಯತ್ನಿಸಿದ್ದಾನೆ. ಅವನು ಕೊಡುವ ಉದಾಹರಣೆಗಳು ಎರಡು ತೆರನಾಗಿವೆ. ಮಹತ್‌ವರ್ಗದ ನಾಮ ರಚನೆಗಳು ಸ್ವಕಲ್ಪಿತವಾದವು. [4] ಕ್ರಿಯಾ ಸೂಚಿ ಪದರಚನೆ ಮತ್ತೊಂದು ಬಗೆಯವು ಆಗಿವೆ.

ಇಷ್ಟಾದರೂ 'ನಾಮ+ಧಾತು' ವುಳ್ಳ ಕ್ರಿಯಾವಾಚಿ ಎನಿಸಿದ ಕಾವ್ಯ ಉದಾಹರಣೆಗಳ ಬಗ್ಗೆ ಕೇಶಿರಾಜ ಏನೆಂದುಕೊಂಡಿರಬಹುದು—ಎಂದು ಅನುಮಾನಿಸಿದರೂ ಈ ಕುರಿತು ಈತ ಇನ್ನೂ ಚಿಂತನೆ ನಡೆಸಿರಲೇಬೇಕು. ಒಟ್ಟಾರೆ ಈ ವಿಷಯ ಪ್ರತಿಪಾದನೆಯಲ್ಲಿ ಏನೆ ಅರೆಕೊರೆ ಇದ್ದರೂ ಇದು ಅವರ (ನಾಗವರ್ಮ ಮತ್ತು ಕೇಶಿರಾಜ) ಸ್ವಂತ ಚಿಂತನೆಯ ಫಲವೇ ಆಗಿದೆ.

೨. 'ಕ್ರಿಯಾ ಸಮಾಸ' ಲೇಖನದಲ್ಲಿ ಶ್ರೀ ಸೇಡಿಯಾಪು ಕೃಷ್ಣಭಟ್ಟರು ತಲುಪುವ ಒಟ್ಟು ನಿರ್ಣಯಾರ್ಥವೆಂದರೆ—'ನಾಮ + ಧಾತು'ಗಳಿಂದ ತಯಾರಾದ ಕ್ರಿಯಾವಾಚಿ ಪದಗಳು ಮಾತ್ರ ಕ್ರಿಯಾ ಸಮಾಸದ ವ್ಯಾಪ್ತಿಯೊಳಗೆ ಸೇರ್ಪಡೆಯಾದರೆ 'ಧಾತು + ಧಾತು' ಗಳಿಂದ ಸಿದ್ಧವಾದ ಪದಗಳು ಸಮಾಸದ ಹರಹಿನಿಂದ ಹೊರಗುಳಿಯುತ್ತವೆ. ಅದನ್ನು 'ಸಂಯುಕ್ತ ಕ್ರಿಯಾಪದ' ಗಳೆಂದು ಗುರ್ತಿಸುತ್ತಾರೆ. [5] ಹೀಗೆನ್ನಲು ಅವರು ಈ ರೀತಿ ಕಾರಣವನ್ನು ಮುಂದಿಡುತ್ತಾರೆ.

(1) "................ಆದುದರಿಂದ ಸಂಯುಕ್ತ ಕ್ರಿಯಾವಾಚಕವೆಂಬ ಒಂದು ಭೇದವನ್ನು ಕ್ರಿಯಾ ಸಮಾಸದೊಳಗೆ ತಂದು ಹಾಕುವುದು ಅಸಮರ್ಥನೀಯ ಮಾತ್ರ ವಲ್ಲ ಪೂರ್ಣ ಶಾಸ್ತ್ರ ವಿರುದ್ಧವೂ ಆಗಿ ಪರಿಣಮಿಸುತ್ತದೆ." 6

೩. "ಪೂರ್ವ ಪದೋತ್ತರಗಳೆರಡೂ ಸಹ ಕಾರಕಾನ್ವಯಿಗಳಾಗಿಯೇ ಎಂದರೆ ಕ್ರಿಯಾವಾಚಕಗಳಾಗಿಯೇ ಇರುವವಾದರೆ ಅವು ಕ್ರಿಯಾ ಸಮಾಸವೆಂಬ ಸಮಾಸ ಭೇದದಲ್ಲಿ ಪೂರ್ವಪದವು ಕಾರಕಾನ್ವಯಿಯಾಗಿರದೆ ಇರಬೇಕಾಗುತ್ತದೆ ಎಂಬುದು ಕನ್ನಡದ ವೈಯಾಕರಣರೆಲ್ಲರಿಗೂ ಸಮ್ಮತವಾದ ನಿಯಮವಾಗಿದೆ. ಹಾಗಿದ್ದರೆ ನಡೆ ದಾಡು, ಸುಟ್ಟುರುಹು ಮೊದಲಾದ ಸಂಯೋಗಗಳನ್ನು ಏನೆಂದು ಕರೆಯಬೇಕು-ಎಂಬೊಂದು ಪ್ರಶ್ನೆ ಇಲ್ಲಿ ಉದ್ಭವಿಸಬಹುದು. ಇದಕ್ಕೆ ಉತ್ತರವಾಗಿ ನನಗೆ ಹೊಳೆ ದಂತೆ ಹೇಳುವುದಾದರೆ ಇಂಥವುಗಳನ್ನೆಲ್ಲ ಸಂಯುಕ್ತ ಕ್ರಿಯಾ ವಾಚಕಗಳೆಂದು ಹೆಸ ರಿಸುವುದು ಯುಕ್ತವಾಗಿದೆ." 7

೩. 'ಸಂಯುಕ್ತ ಕ್ರಿಯಾಪದ' ಗಳೆಂದು ಗುರ್ತಿಸಲಾಗುವ ಹಾಗೆ ಧಾತುಗಳೆರಡು ಜೊತೆಗೂಡಿ ಏಕರೂಪದ (ಕ್ರಿಯಾರ್ಥದ) ಪದ ರಚನೆ ಸಿದ್ಧಿಸುತ್ತದೆ. ಈ ಕುರಿತು ನಮ್ಮ ಪ್ರಾಚೀನ ಕನ್ನಡ ವೈಯಾಕರಣರು ಏನೂ (ಸಮಾಸ ಅಧ್ಯಾಯದಲ್ಲಿ) ಹೇಳ ಲಾರದವರಾದರಲ್ಲಾ, ಏಕೆ ? ಈ ಬಗೆಯ ಅನುಮಾನ ಸಹಜವೆ ಆಗಿದೆ. ಇದನ್ನು ಅವರು ಸಂಯುಕ್ತ ಕ್ರಿಯಾಪದಗಳೆಂದೇ ತಿಳಿದಿದ್ದರು. 8

ಇಲ್ಲಿ ಸ್ಪಷ್ಟವಾಗುವುದೆಂದರೆ ಈ ನಮ್ಮ ಹಿಂದಿನ ವೈಯಾಕರಣರು ಸಂಸ್ಕೃತ ವ್ಯಾಕರಣ ಶಾಸ್ತ್ರದ ನಿಯಮಾವಳಿಯ ತೆಕ್ಕೆಯಿಂದ ಬಹಳಷ್ಟು ಬಿಡಿಸಿಕೊಂಡು-ಸ್ವತಂತ್ರ ನೆಲೆಯಲ್ಲಿ ನಿಂತು-ಯೋಚಿಸಲು ಸಾಧ್ಯವಾಗಲೇ ಇಲ್ಲ ಎಂಬ ಅಂಶವೊಂದು ಅವರ ದೌರ್ಬಲ್ಯ ಅಥವಾ ಮಿತಿಯಾಗಿ ತೋರಿತು. 9 ಆದ ಕಾರಣ (ದ್ರಾವಿಡ ಮೂಲದ ಇವೆಲ್ಲಾ ಭಾಷೆಗಳು ಸಂಸ್ಕೃತ ಜನ್ಯವಾದವು ಎಂಬ ಪೂರ್ವ ಕಲ್ಪಿತ ವಿಚಾರಕ್ಕೆ ನಮ ಪೂರ್ವ ಪಂಡಿತರು ಅತುಕೊಂಡವರೆ ಆಗಿದ್ದರು.

೪. ಈ ಸಮಾಸದ ಕುರಿತು ಈಚಿನ ಕೆಲವು ವಿದ್ವಾಂಸರ ಮಥಿತಾಂಶವೂ ಗಮನೀಯವಾಗಿದೆ.

(1) ಎರಡು ಅಥವಾ ಹೆಚ್ಚು ಪ್ರಕೃತಿಗಳು ಕೂಡಿ ಶಬ್ದವಾದಾಗ ಸಮಾಸವಾಗುತ್ತದೆ. ಹೇಗೆಂದರೆ. 10

ನಾಮ + ನಾಮ : ಮಲ್ಲಿಗೆನನೆ
ಗುಣ + ನಾಮ : ಬೆಳ್ದಿಂಗಳ್
ಧಾತು + ನಾಮ : ಉಡುಗೊಜಿ3

ನಾಮ + ಧಾತು : ಕಳಿಗೊಳ್, ಮಱಿವುಗು

* {ಗುಣ + ಧಾತು : ಉಳ್ಳರ್, ಒಳ್ಳಿಕಯ್

{ಧಾತು + ಧಾತು : ಎಟ್ತಿರ್, ಪೋತರ್

(* ಇವು ಹಳಗನ್ನಡ ವ್ಯಾಕರಣಗಳಲ್ಲಿ ಸಮಾಸವೆಂದು ಪರಿಗಣಿತವಾಗಿಲ್ಲ. ಇವನ್ನು 'ಸಂಯುಕ್ತ ಧಾತು'ಗಳೆಂದು ಕರೆಯುವ ರೂಢಿ ಇದೆ.)

(2) "ಕ್ರಿಯಾ + ನಾಮ, ನಾಮ + ಕ್ರಿಯಾಪದಗಳ ಸೇರುವಿಕೆಯಿಂದ ನಿಷ್ಪನ್ನವಾದ ಪದ ನಾಮಪದವಾಗಿದ್ದರೆ ಅದನ್ನು ಕ್ರಿಯಾಸಮಾಸವೆಂದು ಕರೆಯಬಹುದು." 11

"ಸಂಸ್ಕೃತದಲ್ಲಿ ಹೇಳದಿರುವ ಈ ಸಮಾಸವನ್ನು ನಾಗವರ್ಮ ಮೊದಲು ಹೇಳಿದುದನ್ನು ಕೇಶಿರಾಜ ಸ್ವೀಕರಿಸಿದ್ದಾನೆ, ಭಟ್ಟಾಕಳಂಕನೂ ಸ್ವೀಕರಿಸಿದ್ದಾನೆ. ಈ ಮೂವರಲ್ಲಿ ಕೇಶಿರಾಜನ ವಿವರಣೆ ಹೆಚ್ಚು ಸ್ಪಷ್ಟವಾಗಿಯೂ ವಿವರಣಾತ್ಮಕವಾಗಿಯೂ ಇದೆ. ಆದರೆ ಈ ಮೂವರೂ ಕ್ರಿಯೆ + ಕ್ರಿಯೆಯನ್ನು ಬಿಟ್ಟು ಕೊಟ್ಟಿರುವುದು ತಾತ್ವಿಕ ನೆಲೆಯಲ್ಲಿ ಒಂದು ಕೊರತೆ ಎನ್ನಬೇಕು. 12

(3) "ನಾಮ ಮತ್ತು ಕ್ರಿಯಾ ಸಮಾಸಗಳ ಸಂಖ್ಯೆ ಕನ್ನಡದಲ್ಲಿ ಬಹಳವಾಗಿ ಹೆಚ್ಚಿದೆ. ನಾಮ ಸಮಾಸಗಳು ಇಂಗ್ಲಿಷಿನ ಶೈಕ್ಷಣಿಕ ಸಂವಾದದ ನಾಮವಾಚಕ (nominal) ಶೈಲಿಯನ್ನು ಹೋಲುತ್ತವೆ. ಆದರೆ ಕ್ರಿಯಾ ಸಮಾಸಗಳು ಇಂಗ್ಲಿಷಿನಿಂದ ಎರವಲು ಪಡೆದುಕೊಂಡು ಪದಗಳನ್ನು ಸರಿ ಹೊಂದಿಸಲು ಬಂದಿರುವ ಹಾಗಿದೆ.

ಸಸ್ಪೆಂಡ್ ಮಾಡು
ಅಡ್ಜಸ್ಟ್ ಮಾಡು
ಫೇಲಾಗು
ಇಂಪ್ರೆಸ್ ಆಗು" 13

(4) ಒಟ್ಟನಲ್ಲಿ ಸಮಾಸಗಳ ರಚನೆಯ ಉದ್ದೇಶ ಶಬ್ದಗಳ ನಿರ್ಮಾಣ ಕಾರ್ಯವೇ ಆಗಿದೆ. 14

ಈ ದೃಷ್ಟಿಯಿಂದ ನಾವು ಬಾದಾಮಿ ತಾಲೂಕಿನ ಉಪಭಾಷೆಯಲ್ಲಿ ಚಾಲ್ತಿಯೊಳಗಿರುವ ಎರಡು ಗುಂಪಾಗಿ ಗುರ್ತಿಸಲಾಗುವ ಕ್ರಿಯಾವಾಚಿ ಶಬ್ದಗಳು ಕ್ರಿಯಾ ಸಮಾಸದ ಎರಡು ಮುಖಗಳನ್ನೇ ಪರಿಚಯಿಸುತ್ತವೆ.

(1) ನಾಮ + ಧಾತು → ಕ್ರಿಯಾವಾಚಿ ಶಬ್ದಗಳು
ಅಡ್ಡಿ + ಆಗು—ಅಡ್ಡಾಗು (=ತೊಡಕಾಗು)
ಅಡ್ಡ + ಆಗು—ಅಡ್ಡಾಗು (=ಮಲಗು)

ಕಾಲು 7 ಕಾಲ್ + ಬೀಳು—ಕಾಲ್ಬೀಳು
ಕಾಲ್ + ಹಿಡಿ—ಕಾಲ್‌ಹಿಡಿ
(ಕೈ) ಕಾಲ್ + ಕಟ್ಟು—(ಕೈ) ಕಾಲ್ ಕಟ್ಟು
(=ನಮಸ್ಕರಿಸುವ ಭಂಗಿಯೊಂದಿಗೆ ಅತಿದೈನ್ಯತೆಯಿಂದ ಯಾಚಿಸು)

ಮುದ್ದಿ + ಆಗು—ಮುದ್ದ್ಯಾಗು (=ನಿರ್ವಿಣ್ಣನಾಗು, ಶಕ್ತಿಗುಂದು, ಮೂಲೆಗುಂಪಾಗು)

ಕಣ್ + ಮುಚ್ಚು—ಕಣ್ಮುಚ್ಚು (=ಸಾಯು)

ಗಂಟ್ + ಬೀಳು—ಗಂಟ್‌ಬೀಳು
ಹೊಗು + ಬೀಳು—ಹೊಗಬೀಳು
ಬೆನ್ನು + ಹತ್ತು—ಬೆನ್ನಹತ್ತು
(=ದುಂಬಾಲು ಬೀಳು)

ಚಂಡ್ + ಹಾಕು—ಚಂಡ್ಹಾಕು
(ಚಂಡ್)ಸಾಪ್ + ಮಾಡು—ಸಾಪ್ಮಾಡು
ಗೋಣ್ + ಮುರಿ—ಗೋಣ್ಮುರಿ
ಎತ್ತಿ + ಬಡಿ—ಎತ್ತಿಬಡಿ
ಗಪ್ + ಮಾಡು—ಗಪ್ಮಾಡು
(=ಮೋಸಗೊಳಿಸು ಲಪಟಾಯಿಸು)

ಗೊತ್ತು 7 ಗೊತ್ + ಮಾಡು—ಗೊತ್ಮಾಡು (=ನಿಶ್ಚಯಿಸು)
ಮಾತ್ + ಮಾಡು—ಮಾತ್ಮಾಡು =(ನಿರ್ಣಯಾತ್ಮಕ ಗೆರೆ ಎಳೆ)
ಶುದ್ಧ > ಸುದ್ + ಮಾಡು—ಸುದ್ಮಾಡು =(ನೇರ್ಪಡಿಸು)
ಗಂಟ್ + ಹಾಕು—ಗಂಟ್ಹಾಕು (=ಹಣವನ್ನು ಲಪಟಾಯಿಸು)
ಗಪ್ + ಆಗು—ಗಪ್ಪಾಗು (=ತಲೆ ಮರೆಸಿಕೊ)
ನೈಗೆ + ಹತ್ತು—ನೈಗ್ಹತ್ತು (=ಮನಸ್ಸಿಗೆ ನಾಟು)

(೩) (ಭೂತನ್ಯೂನ ರೂಪದ) ಧಾತು + ಧಾತು → ಕ್ರಿಯಾವಾಚಿ ಶಬ್ದಗಳು
ಹೊಡೆದು > ಹೊಡ + ಕೊಳ್—ಹೊಡಕೊ (ತಳಮಳಿಸು, ವೇದನೆ ತೋಡಿಕೊ)
ಬಡಿದು > ಬಡ + ಕೊಳ್—ಬಡಕೊ (=ಕಾಳಜಿ ಪೂರ್ವಕ ಪ್ರಯತ್ನಿಸು)
ಆಗಿ + ಮಾಡು—ಆಗಿಮಾಡು, ಆಗ್ಮಾಡು (=ಮುಗಿಸು)
ಸಾಗು + ಮಾಡು—ಸಾಗ್ಮಾಡು (=ಒಂದು ಕಾರ್ಯ ಮುಂದುವರಿಯುವಂತೆ ಪ್ರವೃತ್ತನಾಗು)

ಹಚ್ಚಿ + ಕೊಳ್—ಹಚಗೊ (=ಅಂತಃಕರಣ ಪೂರ್ವಕ ಪ್ರೀತಿದೋರು)

ಆಗಿ + ಕೊಡು—ಆಗಿಕೊಡು, ಆಗ್ಗೊಡು (=ಅವಕಾಶ ನೀಡು, ಒಪ್ಪಿಗೆ ಕೊಡು)

ಜಿಗಿದು + ಆಡು—ಜಿಗಿದಾಡು (=ಹರ್ಷಪಡು)

ಹಾರು + ಆಡು—ಹಾರ್‍ಯಾಡು (=ಅಂಕೆ ಮೀರಿ ವರ್ತಿಸು)

ಗುದ್ದಿ + ಆಡು—ಗುದ್ದ್ಯಾಡು (=ಶ್ರಮಪಡು, ಪ್ರಯತ್ನಿಸು)

ಒದ್ದು + ಆಡು—ಒದ್ದ್ಯಾಡು, ವದ್ದ್ಯಾಡು, (=ಯಾತನೆಪಡು, ದುಃಖ ಪಡು)

ಹಾಕಿ + ಆಡು—ಹಾಕ್ಯಾಡು (=ಜಗಳಾಡು)

ಒದರಿ + ಆಡು—ಒದರ್‍ಯಾಡು, ವದರ್‍ಯಾಡು (=ಒಟಗುಡು, ಮಾತಿನಲ್ಲಿ ಜಗಳಾಡು)

ಆಡಿಸಿ + ಆಡು—ಆಡಸ್ಯಾಡು (=ತಮಾಷೆ ಮಾಡು, ಹಾಸ್ಯ ಮಾಡು)

ಒಗೆದು + ಆಡು—ಒಗೆದ್ಯಾಡು, ವಗೆದ್ಯಾಡು

ಉಗ್ಗಿ + ಆಡು—ಉಗ್ಗ್ಯಾಡು

ಓಡಿ + ಆಡು—ಓಡ್ಯಾಡು

ಮಿಸುಗು > ಮಿಸುಗು + ಆಡು—ಮಿಸಗ್ಯಾಡು

ಹೊಕ್ಕು + ಆಡು—ಹೊಕ್ಕ್ಯಾಡು

ತಿಕ್ಕಿ + ಆಡು—ತಿಕ್ಕ್ಯಾಡು

ಈಸಿ + ಆಡು—ಈಸ್ಯಾಡು

ಎಳೆದು + ಆಡು—ಎಳೆದಾಡು


ಹುಡುಕಿ + ಆಡು—ಹುಡುಕ್ಯಾಡು

(ಅಲುಗು >)ಅಳಗಿ + ಆಡು—ಅಳಗ್ಯಾಡು

(ಬಯ್ >)ಬೇದು + ಆಡು—ಬೇದ್ಯಾಡು

ಹೊಯ್ದು + ಆಡು—ಹೊಯ್ದ್ಯಾಡು

ಹೀಗಿರುವ ಈ ಕ್ರಿಯಾ ಸಮಾಸವನ್ನು ಒಳಗೊಂಡು ಕನ್ನಡದಲ್ಲಿಯ ಸಮಾಸಗಳ ಒಟ್ಟು ವ್ಯಾಪ್ತಿಯನ್ನು ಈ ರೀತಿ ರೇಖಾ ಚಿತ್ರದ ಮೂಲಕ ಪುನಾರೂಪಿಸಿಕೊಳ್ಳಬಹುದಾಗಿದೆ.




(* ತ: ತತ್ಪುರುಷ ಸಮಾಸ, ಕ: ಕರ್ಮಧಾರಯ ಸಮಾಸ, ದ್ವಿ: ದ್ವಿಗು ಸಮಾಸ, ಬ: ಬಹುವ್ರೀಹಿ ಸಮಾಸ, ದ್ವ: ದ್ವಂದ್ವ ಸಮಾಸ, ಅ: ಅವ್ಯಯೀಭಾವ ಸಮಾಸ)

## ಅಡಿ ಟಿಪ್ಪಣಿಗಳು

(೧) ನನ್ನ ಲೇಖನ, "ಕ್ರಿಯಾಸಮಾಸ-ಒಂದು ಪುನಃ ಪರಿಶೀಲನೆ", ಕರ್ನಾಟಕ ಲೋಚನ, ಡಿಸೆಂಬರ್, ೧೯೯೩ ಸಂ : ೬, ಸಂ : ೨

(೨) 'ಕ್ರಿಯಾ ಸಮಾಸ' ಎನ್ನುವ ಸೇಡಿಯಾಪು ಕೃಷ್ಣಭಟ್ಟರ ಲೇಖನ ನನ್ನ ಲೇಖನಕ್ಕೆ ನೇರ ಪ್ರತಿಕ್ರಿಯೆ ಸ್ವರೂಪದಲ್ಲಿ ಅಲ್ಲವೆನಿಸಿದರೂ ನಾನೆತ್ತಿದ ಅನುಮಾನ ರೀತಿಯ ಪ್ರಶ್ನೆಗಳಿಗೆ ಅಪರೋಕ್ಷವಾಗಿ ಉತ್ತರಿಸಿದಂತಿದೆ. ಒಟ್ಟಾರೆ ಅತ್ಯಂತ ಹಿರಿಯ ವಿದ್ವಾಂಸರಲ್ಲಿ ಒಬ್ಬರಾದ ಅವರಿಂದ ಪ್ರತಿಕ್ರಿಯಿಸುವಂತೆ ಮಾಡಿ. ಆ ಮೂಲಕ ಅವರ ನಿಲುವನ್ನು ಕೇಳಿ ಅಚ್ಚು ಕಟ್ಟಾಗಿ ಬರೆದು ಪ್ರಕಟಗೊಳಿಸಿದ್ದು ಸ್ವಾಗತಾರ್ಹವೇ ಆಗಿದೆ.

(೩) ಸೇಡಿಯಾಪು ಕೃಷ್ಣಭಟ್ಟರು 'ಕ್ರಿಯಾ ಸಮಾಸ', ಕರ್ನಾಟಕ ಲೋಚನ, ಜೂನ್ ೧೯೯೫ನೇ ಸಂ : ೮, ಸಂ : ೧

(೪) ಈ ಪುರುಷ ಸೂಚಕ ನಾಮಾರ್ಥ ರೂಪಗಳೇ ಕ್ರಿಯಾ ಸಮಾಸಗಳೆಂದು ಕೇಶಿರಾಜ ಭಾವಿಸಿದ್ದಿರಬಹುದು ಎಂಬ ಅನಿಸಿಕೆ ಬಹುಜನ ವಿದ್ವಾಂಸರ ಅಂಬೋಣವಾಗಿದೆ. ಸಮಾಸಗಳ ಉದ್ದೇಶ ಕೇವಲ ನಾಮಗಳ ರಚನೆಯಾಗಿದೆ ಎಂಬ ಸಂಸ್ಕೃತ ಭಾಷಾ ನಿಯಮಾವಳಿಯ ಚಕ್ಷುವಿನಿಂದ ಕಾಣಲು ಯತ್ನಿಸಿದ್ದೆ ಇದಕ್ಕೆ ಕಾರಣವಾಗಿರಲೂ ಬಹುದು.

(೫) ಇದು ಕೆಲವು (ಸಾಂಪ್ರದಾಯಿಕ?) ಆಧುನಿಕ ವಿದ್ವಾಂಸರ ಅಭಿಪ್ರಾಯವೂ ಆಗಿದೆ.

(೬) ಸೇಡಿಯಾಪು ಕೃಷ್ಣಭಟ್ಟರು ಪೂರ್ವೋಕ್ತ ಲೇಖನ, ಸಂಚಿಕೆ. ಪುಟ ೫, ೬

(೭) ಸೇಡಿಯಾಪು ಕೃಷ್ಣಭಟ್ಟರು ಪೂರ್ವೋಕ್ತ ಲೇಖನ, ಸಂಚಿಕೆ, ಪುಟ ೯

(೮) ಕೇಶಿರಾಜ ಸೂತ್ರ ೨೪೭ರಲ್ಲಿ ಭೂತನ್ಯೂನ ಅಥವಾ ವರ್ತಮಾನನ್ಯೂನ ಕ್ರಿಯಾಪದಗಳ ವಿಚಾರವನ್ನು ಪ್ರತಿಪಾದಿಸಿದ್ದಾನೆ. ಇಲ್ಲಿ ಅದೇ ವಿಚಾರ ಇರುವಂತೆ ಕಂಡು ಬರುತ್ತದೆ.

(೯) ಈ ದಿಸೆಯಲ್ಲಿ ಡಿ.ಎನ್. ಶಂಕರಭಟ್ಟರು ಹೇಳುವ ಕೆಲವು ಮಾತುಗಳು ಈ ಸಂದರ್ಭದಲ್ಲಿ ಮಹತ್ವದ್ದಾಗಿವೆ. "ಆದರೆ ಇಂಗ್ಲಿಷ್, ಫ್ರೆಂಚ್, ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ನಡೆದಂತೆ ಕನ್ನಡದಲ್ಲಿ ವ್ಯಾಕರಣದ ಸಲುವಾಗಿ ಜಾಸ್ತಿ ಸಂಶೋಧನೆ ನಡೆದಿಲ್ಲ. ನಡೆದಿರುವ ಅಲ್ಪ ಸ್ವಲ್ಪ ಸಂಶೋಧನೆಗಳೂ ಕೂಡ ಇತರ ಭಾಷೆಗಳಲ್ಲಿ ಕಂಡು ಬರುವ ವ್ಯಾಕರಣಾಂಶಗಳು ಕನ್ನಡದಲ್ಲೂ ಇವೆಯೆಂದು ತೋರಿಸಿ ಕೊಡುವ ಪ್ರಯತ್ನಗಳಾಗಿವೆಯಲ್ಲದೆ. ಕನ್ನಡವೇ ಆದ ವ್ಯಾಕರಣಾಂಶಗಳನ್ನು ಹುಡುಕಿ ಹಿಡಿಯುವ ಪ್ರಯತ್ನಗಳಲ್ಲ. ಅಂತಹ ಪ್ರಯತ್ನವನ್ನು ನಡೆಸುವುದು ಅವಶ್ಯ ಮತ್ತು ಅಂತಹ ಪ್ರಯತ್ನಗಳ ಮೂಲಕ ಕನ್ನಡಕ್ಕೆ ಅದರದ್ದೇ ಆದ ವ್ಯಾಕರಣ ಪರಂಪರೆಯೊಂದನ್ನು ಸಿದ್ಧಪಡಿಸುವುದು ಅವಶ್ಯ............"

—ಕನ್ನಡದ ವ್ಯಾಕರಣ ಪರಂಪರೆ, ೧೯೯೪, ಪುಟ : ೨೪

(೧೦) 'ಹಳಗನ್ನಡ ವ್ಯಾಕರಣ', ಕನ್ನಡ ಕೈಪಿಡಿ. ಅ. ಮು : ೧೯೭೧ ಪುಟ : ೧೯

(೧೧) ಕೆ. ಕುಶಾಲಪ್ಪಗೌಡ. ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ, ೧೯೮೬, ಪುಟ : ೨೨೭.

(೧೨) ಕೆ. ಕುಶಾಲಪ್ಪಗೌಡ, ಪೂರ್ವೋಕ್ತ ಕೃತಿ, ಪುಟ ೨೪೦

(೧೩) ಎಸ್. ಎನ್. ಶ್ರೀಧರ್. ಇಂದಿನ ಕನ್ನಡ : ರಚನೆ ಮತ್ತು ಬಳಕೆ, ೧೯೯೫, ಪುಟ : ೬೦

(೧೪) ಈ ರೀತಿ ರೂಪುದಳೆದ ಶಬ್ದಗಳು ಸಮಾಸವೆಂಬ ಚೌಕಟ್ಟಿನೊಂದಿಗೆ ಸ್ವೀಕರಿಸಲು ಈಗಾಗಲೆ ಮಾನದಂಡಗಳಾಗಿ ಧನಾತ್ಮಕ ಮತ್ತು ಋಣಾತ್ಮಕವೆಂಬ ಎರಡೆರಡು ತತ್ವಗಳನ್ನು ಎಚ್. ಎಸ್. ಬಿಳಿಗಿರಿಯವರು ಪ್ರಯೋಗಿಸಿದ್ದಾರೆ.

ನೋಡಿ 'ಗಮಕ ಸಮಾಸ ಒಂದು ಸಮಾಸವೆ?' ಮೂರುದತ್ತಿ ಉಪನ್ಯಾಸಗಳು ೧೯೮೪, ಪುಟ : ೭೭ ರಿಂದ ೭೯

# ಗ್ರಂಥಾವಲೋಕನ

---

## 1. ಯಜ್ಞ

ಇದೊಂದು ಖಂಡಕಾವ್ಯ : ಎರಡು ಖಂಡಗಳಿಂದ ಕೂಡಿದೆ. ಇದರಲ್ಲಿ ನಾಂದಿಯ 3 ಪದ್ಯಗಳೂ ಸೇರಿ 394 ಚೌಪದಿಗಳಿವೆ. ರಚನೆಯಲ್ಲಿ ಕನ್ನಡ ಪದ್ಯಕ್ಕೆ ಸೊಬಗೀವ ಮತ್ತು ಹಿರಿಮೆಯ ಲಕ್ಷಣವಾಗಿದ್ದರೂ ಆಧುನಿಕ ಕವಿಗಳು ತುಚ್ಛೀಕರಿಸಿ ಕೈಬಿಡುವ, ದ್ವಿತೀಯಾಕ್ಷರಪ್ರಾಸವನ್ನು ಕೆಲನೆಡೆ ಇಟ್ಟೊ ಕೆಲವೆಡೆ ಬಿಟ್ಟೊ ವರ್ತಿಸಿರುವುದು ಕಂಡುಬರುತ್ತದೆ. ಒಂದೆಡೆ ಕುಸುಮಷಟ್ಪದಿಯೂ ಆಗಬಹುದಾದ ಇದನ್ನು ವೀರ ಚೌಪದಿ ಎಂತಲೂ ಹೇಳಬಹುದು. ಪಂಚಮಾತ್ರಾ ಗಣವಿನ್ಯಾಸದಿಂದ ಲಯಬದ್ಧವಾಗಿ ಓದಿಸಿಕೊಳ್ಳುತ್ತದೆ. ಶ್ರೀ ಬನ್ನಂಜೆ ಗೋವಿಂದಾಚಾರ್ಯರ 'ಒಂದು ಹರಕೆ' ಮತ್ತು ಡಾ|| ಕೆ. ಸುಬ್ರಹ್ಮಣ್ಯ ಭಟ್ಟರ 'ಯಜ್ಞಕ್ಕೆ ಬ್ರಹ್ಮತ್ವ' ಎಂಬ ವಿಮರ್ಶಾತ್ಮಕವಾದ ಮುನ್ನುಡಿಗಳು ಈ ಕೃತಿಯ ಕಳೆಗೆ ಕನ್ನಡಿ ಹಿಡಿದಿವೆ.

ಇದರ ಕಥಾವಸ್ತು ಪೌರಾಣಿಕ. ರಾಜಕುಮಾರಿ ಸುಕನ್ಯೆ ಚ್ಯವನಮಹರ್ಷಿಯನ್ನು ಮದುವೆಯಾದ ಕಥೆ. ಈ ಕಾವ್ಯದ ನೈತಿಕ ಮೌಲ್ಯವನ್ನು ತಮ್ಮ ಅರಿಕೆಯಲ್ಲಿ ಕೃತಿಕಾರರು ಹೀಗೆಂದಿದ್ದಾರೆ—"ಕುಟುಂಬಕ್ಕಾಗಿ, ದೇಶಕ್ಕಾಗಿ, ತಮ್ಮ ಪರಿವಾರಕ್ಕಾಗಿ ಪುರುಷರು ತ್ಯಾಗಮಾಡುತ್ತಾರೆ, ಸ್ತ್ರೀಯರೂ ತ್ಯಾಗ ಮಾಡುತ್ತಾರೆ. ಸುಕನ್ಯೆ ಅಂತಹ ತ್ಯಾಗಶೀಲೆಯಾದ ಸತಿಯಾಗಿದ್ದು, ಆಕೆಯ ಜೀವನವೇ ಒಂದು ಯಜ್ಞ. ಚ್ಯವನನು ಯಜ್ಞದಿಂದ ಅಶ್ವಿನೀದೇವತೆಗಳನ್ನು ಸಂತುಷ್ಟಿಗೊಳಿಸುತ್ತಾನೆ. ಹೀಗೆ ನಮ್ಮ ಕುಟುಂಬ ಜೀವನದ ಪಾವಿತ್ರ್ಯವನ್ನು ಸಂಸ್ಕಾರವನ್ನು ರಕ್ಷಿಸುವ ದೆಸೆಯಲ್ಲಿ ಈ ಯಜ್ಞ ಒಂದು ಅಳಿಲ ಸೇವೆಯಾಗಿ ಪರಿಣಮಿಸಿದರೂ ನನ್ನ ಕೃತಿ ಸಾರ್ಥಕವೆನಿಸುತ್ತದೆ." ಈ ಸಾರ್ಥಕತೆಯನ್ನು ಕೃತಿ ವಿಮರ್ಶಕರು ಹಾಗೂ ಓದುಗರು ನಿಸ್ಸಂದಿಗ್ಧವಾಗಿ ಒಪ್ಪುವಂತಿದೆ.

ಶ್ರೀ ಬನ್ನಂಜೆಯವರು 'ಕಥೆಯೇನೋ ಹಳೆಯದು. ಆದರೆ ಕಥೆಯ ತಿರುಳು

---

ಲೇಖಕರು : ತಲೆಂಗಳ ರಾಮಕೃಷ್ಣ ಭಟ್ಟ ಪ್ರ : ಭಾರದ್ವಾಜ ಪ್ರಕಾಶನ ಕದಿರೆ, ಮಂಗಳೂರು 2. ಪುಟಗಳು : 79 + 24, ಬೆಲೆ : ರೂ 35-00 (ಪ್ರ.ಮು. 1995)

ಸಾರ್ವಕಾಲಿಕ' ಎಂದಿದ್ದಾರೆ. ಭಾಷೆಯನ್ನು ಕುರಿತು—'ಇದು ತೀರ ಹಳಗನ್ನಡವೂ ಅಲ್ಲ, ಹೊಸಗನ್ನಡವೂ ಅಲ್ಲ ; ಹಸಗನ್ನಡ ಅಥವಾ ಹೋಳಗನ್ನಡ ಎನ್ನೋಣವೆ ?" ಎಂದಿರುತ್ತಾರೆ. ಡಾ|| ಸುಬ್ರಹ್ಮಣ್ಯ ಭಟ್ಟರು—'ಈಕೃತಿಯುದ್ದಕ್ಕೂ ಕಂಡು ಬರುವ ಸುಭಾಷಿತ, ಸೂಕ್ತಿಗಳು, ನೀತಿ, ನಲ್ನಾತು, ಅನುಭವದ ನುಡಿಗಳು ಕೃತಿಯ ಬೆಲೆಯನ್ನು ಹೆಚ್ಚಿಸಿವೆ' ಎಂದು ಉದಾಹರಣೆಗಳಿಂದ ವಿಶದಪಡಿಸಿದ್ದಾರೆ. ಇಂತಹ ಕಾವ್ಯವನ್ನು ಭಾರದ್ವಾಜ ಪ್ರಕಾಶನದವರು ಸೊಗಸಾಗಿ ಮುದ್ರಿಸಿ ಹೊರತರುವ ಜನೋಪಕಾರ ಮಾಡಿದ್ದಾರೆ. ಉಪಕಾರ ಲಭ್ಯವಾಗುವುದು ಕನ್ನಡಿಗರು ಕೊಂಡು ಕೊಂಡು ಓದಿದರೆ, ಓದಿಸಿದರೆ ಮಾತ್ರ.

ಕಾವ್ಯಾಭಿಮಾನಿಗಳು ಈ ಕೃತಿಯಲ್ಲಿ ಕವಿಯ ಸಹಜಕವಿತಾ ಚಾತುರ್ಯವನ್ನು ಕಾಣಬಹುದು. ಪ್ರತಿಭೆ, ಶಬ್ದಸಂಪತ್ತು ಮತ್ತು ವ್ಯುತ್ಪತ್ತಿಯಿಂದೊಪ್ಪುವ ಈ ಕವಿಯ ಪದ್ಯಗಳೆಲ್ಲವೂ ದ್ವಿತೀಯಾಕ್ಷರ ಪ್ರಾಸದಿಂದ ಅಲಂಕೃತವಾಗಿದ್ದರೆ ಸೊಗಸು ಇಮ್ಮಡಿಸುತ್ತಿದ್ದಿತೆಂದು ಭಾವಿಸುವಂತಿದೆ. ದ್ವಿತ್ವದೋಷವಿಲ್ಲದೆಯೂ ಪದ್ಯರಚನೆ ಮಾಡುವ ಸಾಮರ್ಥ್ಯ ಈ ಕವಿಗಿದೆ. ಅಂತಹ ಸಾಮರ್ಥ್ಯವನ್ನು ಪ್ರದರ್ಶಿಸಲು ಹಿಂಜರಿದುದು ಕಂಡುಬರುತ್ತದೆ. ಆದೇನೆಂದರೆ—ಶಿಥಿಲದ್ವಿತ್ವಲಕ್ಷಣವಿಲ್ಲದ ಪದ ಪ್ರಯೋಗವಿರುವಲ್ಲಿ ಶಿಥಿಲತ್ವವನ್ನು ಎಳೆದು ತರುವ ಬೇಜವಾಬ್ದಾರಿತನ ಅನೇಕ ಆಧುನಿಕ ಕವಿಗಳಲ್ಲಿದೆ. ಈ ಕೃತಿಯಲ್ಲಿ ಅಂಥವನ್ನು ನಿವಾರಿಸಿದ್ದರೆ, ಇನ್ನೂ ಶೋಭೆ ಹೆಚ್ಚಾಗುತ್ತಿದ್ದಿತು. ಆದರೆ ಇವರು ಅಂತಹ ಆಧುನಿಕರನ್ನು ಒಲಿಸುವುದಕ್ಕಾಗಿಯೂ ಹಾಗೆ ಮಾಡಿರಬಹುದು. ಭಾರತೀಯ ಸಂಸ್ಕೃತಿಯ ಅಭಿಮಾನಿಗಳು ಮತ್ತು ಸತ್ಕಾವ್ಯಪ್ರೇಮಿಗಳು ಅವಶ್ಯವಾಗಿ ನೋಡಬೇಕಾದ ಕೃತಿಯಿದು–ಎಂಬುದರಲ್ಲಿ ಸಂಶಯವಿಲ್ಲ.

## 2. ಚಿಂತನೆಗಳು

### ೧. ಸಮುಚಿತ ೨. ಸಂಕುಲ

ಚಿಂತನಗಳ ಎರಡು ಸಂಕಲನಗಳಿವು. ಇವನ್ನು ಬರೆದವರು ನಿವೃತ್ತ ಕಾಲೇಜು ಪ್ರಾಧ್ಯಾಪಕರಾಗಿದ್ದು, ಉತ್ತಮ ಸಾಹಿತಿ ಹಾಗೂ ಪರಿಪಕ್ವಗೊಂಡ ವಿಚಾರಶೀಲರು. ಇವರ ಈ ಚಿಂತನಗಳು ದ.ಕ. ಜಿಲ್ಲೆಯ ಪ್ರಸಿದ್ಧ ಪತ್ರಿಕೆಗಳಾದ 'ತರಂಗ'ದ ಮಿಂಚು ಗೊಂಚಲು ಎಂಬ ಅಂಕಣದಲ್ಲಿಯೂ 'ಹೊಸದಿಗಂತ'ದ ಸಾಹಿತ್ಯ ಸಾಪ್ತಾಹಿಕದ

ಲೇಖಕರು : ಎಸ್. ಬಿ. ಹೇಟ್ (ಬಲನಾಡು) ಪ್ರಕಾಶಕರು : ಲಲಿತ ಪ್ರಕಾಶನ, ಪರ್ಲಡ್ಕ, ಪುತ್ತೂರು 574201 (ದ. ಕ.) ಪುಟಗಳು : 34, ಬೆಲೆ : ರೂ. 8–00

'ಸಂಗತ' ಎಂಬ ಅಂಕಣದಲ್ಲಿಯೂ ಪುತ್ತೂರಿನ 'ಸುದ್ದಿ ಬಿಡುಗಡೆ'ಯ ಚಿಂತನ ಅಂಕಣದಲ್ಲಿಯೂ ಆಗಾಗ ಪ್ರಕಟವಾದವುಗಳಿಂದ ಆಯ್ದುವಾಗಿವೆ. ಪ್ರತಿಯೊಂದು ಚಿಂತನವೂ ಮೂರು ನಾಲ್ಕು ನಿಮಿಷಗಳಲ್ಲಿ ಓದಿಬಿಡುವಂತೆ ಚಿಕ್ಕದಾಗಿಯೂ ಇರುವುದೇ ಇದರ ವೈಶಿಷ್ಟ.

ಜನ ಸಾಮಾನ್ಯರಿಗೆ ಅರಿವಿನ ಹೊಸ ಬೆಳಕನ್ನು ನೀಡುವ, ಅರಿತವರ ಅರಿವಿನ ಮೇರೆಯನ್ನು ಇನ್ನೂ ವ್ಯಾಪಕಗೊಳಿಸುವ ಲಕ್ಷಣ ಈ ಚಿಂತನಗಳಿಗೆ ಇರುವುದರಿಂದ ಇವೆರಡು ಕೃತಿಗಳೂ ಸಂಗ್ರಹಯೋಗ್ಯವಾಗಿವೆ.

## 3. ಸುಬ್ಬಂಣನ ತ್ರಿಪದಿಗಳು

ತ್ರಿಪದಿಯು ಕನ್ನಡ ಛಂದಸ್ಸಿನ ತ್ರಿಮೂರ್ತಿ, ಇಲ್ಲವೇ ಓಂಕಾರ. ಅದನ್ನೇ ಬೇಂದ್ರೆಯವರು 'ಕನ್ನಡ ವೃತ್ತಗಳ ಗಾಯತ್ರಿ' ಎಂದಿದ್ದಾರೆ. ಕನ್ನಡದಲ್ಲಿ ಮೊತ್ತ ಮೊದಲ ಉಪಲಬ್ಧ ಪದ್ಯ ತ್ರಿಪದಿ. ಅಂತಹ ತ್ರಿಪದಿಯಲ್ಲಿ ಜಾನಪದ ಗೀತಗಳು ಅಸಂಖ್ಯವಾಗಿವೆ. ಸರ್ವಜ್ಞನ ತ್ರಿಪದಿಗಳಂತೂ ಪ್ರಸಿದ್ಧವಾಗಿವೆ. ಪ್ರಕೃತ ಸುಬ್ಬಂಣ ನಾಮಾಂಕಿತರಾದ ಲೇಖಕರು ಸರ್ವಜ್ಞನನ್ನು ಅನುಕರಿಸಿ ಬಗೆಬಗೆಯ ನೀತಿಯ ಅನುಭವದ, ನಡೆವಳಿಕೆಯ, ವಿಚಾರಗಳನ್ನು ಭಾವನಾತ್ಮಕವಾಗಿ ತಮ್ಮದೇ ರೀತಿಯಲ್ಲಿ 'ಸುಬ್ಬಂಣ' ಎಂಬ ಮುದ್ರಿಕೆಯೊಂದಿಗೆ ರಚಿಸಿರುವ ತ್ರಿಪದಿಗಳ ಸಂಗ್ರಹವಿದು. ಇದರಲ್ಲಿ ೧೩೦ ತ್ರಿಪದಿಗಳಿವೆ.

ಲಾಕ್ಷಣಿಕವಾಗಿ ತ್ರಿಪದಿ ಅಂಶಗಣಗಳಿಂದ ಕೂಡಿದ ರಚನೆ. ಮೂರು ಪಾದಗಳಿಂದ ಕೂಡಿದುದು. ಮೊದಲನೆಯದರಲ್ಲಿ ನಾಲ್ಕು ಗಣಗಳು ; ಎರಡನೆಯದರಲ್ಲಿಯೂ ನಾಲ್ಕು ಮೂರನೆಯದರಲ್ಲಿ ಮೂರು ಹೀಗಿರುವ ಹನ್ನೊಂದು ಗಣಗಳಲ್ಲಿ ಆರನೆಯದು ಮತ್ತು ಹತ್ತನೆಯದು ಮಾತ್ರ ಬ್ರಹ್ಮಗಣವಾಗಿರಲೇಬೇಕು. ಉಳಿದುವೆಲ್ಲ ವಿಷ್ಣುಗಣಗಳಾದರೂ ರುದ್ರಗಣ ಪಲ್ಲಟವೂ ಇರುವುದುಂಟು. ಆದರೆ ಈ ಸುಬ್ಬಂಣನ ತ್ರಿಪದಿಗಳೆಲ್ಲವೂ ಐದು ಮಾತ್ರೆಯ ಗಣಗಳಿಂದ ಕೂಡಿವೆ. ಆದರೆ ಹತ್ತನೆಯ ಗಣ ಸ್ಥಾನದಲ್ಲಿ ಬ್ರಹ್ಮ ಗಣವೇ ಬಂದಿದೆ. ಮೂರನೆಯ ಪಾದವು ಲಕ್ಷಣ ಶುದ್ಧವಾಗಿದೆ. ಓದಲು, ಲಯ ಬದ್ಧವಾಗಿ ಹಾಡಲು, ತುಂಬ ಸೊಗಸಾದ ರಚನೆಯಿದು.

---

ಲೇಖಕರು : ಪ್ರೊ॥ ವಿ. ಬಿ. ಮೊಳೆಯಾರ. ಪ್ರ : ಕನ್ನಡ ಪ್ರಪಂಚ ಪ್ರಕಾಶನ, ದರ್ಬೆ–574202; ಪುತ್ತೂರು. ದ. ಕ. ಪುಟಗಳು : 60. ಪ್ರತಿಯೊಂದರ ಬೆಲೆ : ರೂ. 12–00

ಸುಬ್ರಹ್ಮಣ್ಯ ಎಂಬ ಹೆಸರು ಅಪಭ್ರಂಶವಾಗಿ ಸುಬ್ಬಣ್ಣ ಎಂದು ಹೆಸರಾದವರು ಎಷ್ಟೋ ಮಂದಿ. ಆದರೆ ಈ ತ್ರಿಪದಿಯನ್ನು ರಚಿಸಿದ ಬಲನಾಡ ಸುಬ್ಬಣ್ಣ ತಾನೊಬ್ಬನೇ ಎಂದು ಹೇಳಿರುವ ತ್ರಿಪದಿ ಹೀಗಿದೆ-

ಸುಬ್ಬಣ್ಣನೆಂಬಾತ, ಒಬ್ಬನೆಂದೆಣಿಸದಿರು
ಒಬ್ಬನೇ ಬಲನಾಡ ಸುಬ್ಬಣ್ಣನೀ ತ್ರಿಪದಿ
ಕಬ್ಬವನ್ನೊರೆದ ಸುಬ್ಬಂಣ

ಪದ್ಯರಚನೆಗೆ ಪ್ರಾಸವು ಅವಶ್ಯವೆಂಬುದಕ್ಕೆ ಕವಿವಾಣಿಯಿದು-

ಪ್ರಾಸವಿಲ್ಲದ ಪದ್ಯ, ವಾಸವಿಲ್ಲದ ಮನೆಯು
ನೇಸರಿಲ್ಲದ ಹಗಲಿನಂತೆ ಪರಿಣಾಮದಲಿ
ಬೇಸರವು ಎಂದ ಸುಬ್ಬಂಣ

ದೇಶಕ್ಕೆ ಶನಿಕಾಟವಾದ ಬಗೆಯನ್ನು ನಿರೂಪಿಸಿರುವ ತ್ರಿಪದಿ ಹೀಗಿದೆ-

ನೋಟುಗಳ ಬಲದಿಂದ ಓಟುಗಳ ಸಂಗ್ರಹಿಸಿ
ಪೀಠವೇರುವ ಮಂದಿಯಿಂದ ದೇಶಕ್ಕೆ ಶನಿ
ಕಾಟವೆಂದೊರೆದ ಸುಬ್ಬಂಣ

ಸರಸವಾಗಿಯೂ ಅರ್ಥವತ್ತಾಗಿಯೂ ನೀತಿ ಬೋಧಕವಾಗಿಯೂ ಇರುವ ನೂತನ ರೂಪದ ಈ ತ್ರಿಪದಿಯ ಕೃತಿಯನ್ನು ಜನತೆ ಮೆಚ್ಚುವುದರಲ್ಲಿ ಸಂಶಯವಿಲ್ಲ.

## 4. ಶ್ರೀ ಕೃಷ್ಣ ಕಥಾ ಮಂಜರಿ ಸಂಪುಟ ೧ (1995) ೨ (1966)

ಶ್ರೀ ಕೃಷ್ಣನು ಭೌತಿಕ ಮತ್ತು ಆಧ್ಯಾತ್ಮಿಕ ಎಂಬ ಉಭಯ ಶರೀರಿಯಾಗಿದ್ದು ಶಿಷ್ಟಪಾಲನೆ, ದುಷ್ಟನಾಶಗಳ ಮೂಲಕ ಧರ್ಮ ರಕ್ಷಕನಾದ ಅವತಾರಿ. ಅವನು ದಶಾವತಾರಿ, ಇತರ ಅವತಾರಗಳಲ್ಲಿ ಅವನು ತನ್ನ ಅಂಶದಿಂದ ಮಾತ್ರ ಮೆರೆದರೆ, ಕೃಷ್ಣಾವತಾರದಲ್ಲಿ ಪೂರ್ಣಾಂಶನಾಗಿದ್ದ ಭಕ್ತ ಬಂಧು. ಅವನ ಲೀಲಾ ಕಥೆಗಳು ಮನೋಜ್ಞವೂ ಬೋಧಪ್ರದವೂ ಅತ್ಯಾಶ್ಚರ್ಯಕರವೂ ಆದುವು. ಅವನ ಚಾರಿತ್ರ್ಯವನ್ನು ನಿರೂಪಿಸುವ ಮೂಲಗ್ರಂಥ-ವ್ಯಾಸಪ್ರಣೀತ ಶ್ರೀಮದ್ಭಾಗವತದ ದಶಮಸ್ಕಂಧ. ಅದೇ ಭಾಗವತವನ್ನು ಕನ್ನಡದಲ್ಲಿ, ನಿತ್ಯಾತ್ಮಶುಕಯೋಗಿ ಎಂಬ ಬಿರುದಿನ ಚಾಟು ವಿಠಲನಾಥನು ಭಾಮಿನಿಷಟ್ಪದಿಯಲ್ಲಿ ಬರೆದಿದ್ದಾನೆ. ಅದರಲ್ಲಿ ದಶಮಸ್ಕಂಧ ಶ್ರೀಕೃಷ್ಣ ಚರಿತ್ರೆಯ ಕಥನವಾಗಿರುತ್ತದೆ; ಇದನ್ನೇ ಶ್ರೀಕೃಷ್ಣಚರಿತಾಮೃತಂ ಎಂಬ ಹೆಸರಿನಲ್ಲಿ ವಾರ್ಧಕಷಟ್ಪದಿಯಲ್ಲಿ ೬೦ ಸಂಧಿಗಳಲ್ಲಿ ಕವಿ ಮತ್ತು ಗಮಕಿ ವೈ. ಶೇ. ಅನಂತ ಪದ್ಮನಾಭರಾಯರು ಇದೇ ಶತಮಾನದ ಆರನೆಯ ದಶಕದಲ್ಲಿ ರಚಿಸಿರುತ್ತಾರೆ.

ಪ್ರಕೃತ ಹೈಸ್ಕೂಲ್ ಕನ್ನಡ ಪಂಡಿತರಾಗಿ ಕವಿಯೂ ಆದ ವಿದ್ವಾನ್ ಕೆ. ಎಂ. ಬಾಲಕೃಷ್ಣ ಭಟ್ಟರು ಸಾಮಾನ್ಯರಿಗೂ ಸುಲಭ ಗ್ರಾಹ್ಯವಾಗುವಂತೆ ಸರಳ ಗದ್ಯದಲ್ಲಿ "ಶ್ರೀ ಕೃಷ್ಣ ಕಥಾ ಮಂಜರಿ" ಎಂಬ ಗದ್ಯ ಕೃತಿಯನ್ನು ರಚಿಸಿರುತ್ತಾರೆ. ಇದರ ಪ್ರಥಮ ಸಂಪುಟ ೧೯೮೫ರಲ್ಲಿ ಪ್ರಕಾಶಿತವಾಗಿದೆ. ೧೯೮೬ ಫೆಬ್ರವರಿಯಲ್ಲಿ ಎರಡನೆಯ ಸಂಪುಟ ಹೊರಬಂದಿದೆ. ಇಂತಹದೊಂದು ಸರ್ವಜನ ಗ್ರಾಹ್ಯ ಕೃತಿ ರಚನೆಗೆ ಶ್ರೀಮದ್ರಾಘವೇಂದ್ರ ಭಾರತೀ ಮಹಾ ಸ್ವಾಮಿಗಳು ಮೆಚ್ಚಿ ಆಶೀರ್ವದಿಸಿರುತ್ತಾರೆ. ಧರ್ಮಸ್ಥಳದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಶುಭ ಸಂದೇಶ ನೀಡಿದ್ದಾರೆ. ಆಧುನಿಕ ಕವಿ ಪ್ರಾಧ್ಯಾಪಕ ಶ್ರೀ ದೊಡ್ಡರಂಗೇಗೌಡರು ಸಮೀಕ್ಷಾತ್ಮಕವಾಗಿ ಮುನ್ನುಡಿಯನ್ನು ಕೊಡಿಸಿದ್ದಾರೆ. ಈ ಕೃತಿಯ ಜನಪ್ರಿಯತೆಗೆ ಸಂಕೇತವಾಗಿ, ಪ್ರಥಮ ಸಂಪುಟ ಪ್ರಕಾಶನಗೊಂಡು ಆರೇತಿಂಗಳಲ್ಲಿ ಅದು ಪುನರ್ಮುದ್ರಣವನ್ನು ಕಂಡಿದೆ.

ಪ್ರಥಮ ಸಂಪುಟದಲ್ಲಿ ಶ್ರೀ ಕೃಷ್ಣನ ಪೂರ್ವಾವತಾರ ಕಥೆಗಳೆಲ್ಲವನ್ನೂ ಪ್ರಾರಂಭದಲ್ಲಿ ಸಂಕ್ಷೇಪಿಸಿ ಕೊಡಲಾಗಿದೆ. ಕೃಷ್ಣಾವತಾರದ ಕಥೆ, ಮಧುರೆಯಲ್ಲಿ ಉಗ್ರಸೇನನ ಆಳಿಕೆಯಿಂದ ಪ್ರಾರಂಭಗೊಂಡು ಅನುಕ್ರಮವಾಗಿ ಕಥಾನುಸಾರ ಶಿರೋನಾಮಗಳೊಂದಿಗೆ ಮುಂದುವರಿದು ಕೃಷ್ಣಪಾರಿಜಾತ, ನರಕಾಸುರವಧೆಯ ವರೆಗಿದೆ.

ಎರಡನೆಯ ಸಂಪುಟದ ಕಥಾವಸ್ತು ಶ್ರೀಕೃಷ್ಣತುಲಾಭಾರದಿಂದ ಪ್ರಾರಂಭವಾಗಿದೆ. ಮುಂದಿನ ಕಥೆಗಳು ಮಹಾಭಾರತಾಂತರ್ಗತವಾದುವು. ದ್ರೌಪದೀ ಸ್ವಯಂವರ, ಸುಭದ್ರಾ ಪರಿಣಯ, ಶಿಶುಪಾಲವಧೆ, ಅಕ್ಷಯಾಂಬರ ವಿಲಾಸ, ಪಾಂಡವರ ವನವಾಸ ಹಾಗೂ ಸೌಗಂಧಿಕಾ ಪ್ರಕರಣದಲ್ಲಿ ಕೊನೆಗೊಂಡಿದೆ. ಮಹಾಭಾರತದ ಕಥೆಯಲ್ಲಿಯೂ ಅಲ್ಲಲ್ಲಿ ಸೂತ್ರಧಾರಿಯಾಗಿ ಮೆರೆದವನು ಕೃಷ್ಣನೇ. ಆದುದರಿಂದಲೇ ಕುಮಾರವ್ಯಾಸನು ಮಹಾಭಾರತವನ್ನು ಕೃಷ್ಣಕಥೆಯೆಂದೇ ಹೇಳಿದ್ದಾನೆ.

ಈ ಶ್ರೀ ಕೃಷ್ಣ ಕಥಾಮಂಜರಿಯಲ್ಲಿ ಯಾದವರ ನೆಲೆವೀಡಾದ ಹಾಗೂ ಉಗ್ರಸೇನನು ಆಳುತ್ತಿದ್ದ ಪಟ್ಟಣದ ಹೆಸರನ್ನು ಮಧುರೆ ಎಂದಿರುವುದು ಸರಿಯೆ ? ಏಕೆಂದರೆ, ಮಧುರೆ ದಕ್ಷಿಣ ದೇಶದಲ್ಲಿದೆ. ಶ್ರೀಕೃಷ್ಣನ ಜನ್ಮಸ್ಥಳ ಮಥುರೆ. ಶ್ರೀಮದ್ಭಾಗ

---

ಲೇಖಕರು : ಕೆ. ಎಂ. ಬಾಲಕೃಷ್ಣ ಭಟ್ ವಿದ್ವಾನ್. ಪ್ರಕಾಶಕರು : (ಪ್ರಥಮ ಸಂಪುಟ) ಕೆ. ಎಂ. ಬಾಲಕೃಷ್ಣಭಟ್, ಅಂಚೆ : ಕುಂಟಿಕಾನ, ಪೆರ್ಡಾಲ, ಕಾಸರಗೋಡು ಜಿಲ್ಲೆ. ಪುಟಗಳು : 192 ಬೆಲೆ : ರೂ. 35 00 (ದ್ವಿತೀಯ ಸಂಪುಟ)—ವಿದ್ವಾನ್ ಎಸ್. ಬಿ. ಖಂಡಿಗೆ, ಎಂ. ಎ ಪ್ರಕಾಶಕರು. ಅಂಚೆ : ಪೆರ್ಲ-671552, ಕಾಸರಗೋಡು ಜಿಲ್ಲೆ ಪುಟಗಳು : 202 ಬೆಲೆ ರೂ. 50 00

ವತದಲ್ಲಿ ಮಥುರಾ ಎಂತಲೇ ಉಚ್ಚಾರಣೆಯಿದೆ. ಆದರೆ ಕನ್ನಡ ಭಾಗವತದಲ್ಲಿ ಮಥುರೆ ಎಂಬ ರೂಪವಿದೆಯೆಂದು ತೋರುತ್ತದೆ. ವೈ. ವಿ. ವಿ. ಪ್ರಕಟಿಸಿರುವ ಶ್ರೀಕೃಷ್ಣಚರಿತೆ (1956) ಎಂಬ ಕೃತಿಯಲ್ಲಿ ಮಥುರೆ ಎಂಬ ರೂಪ ಕಾಣುತ್ತಿದೆ. ಲೇಖಕರು ಇದನ್ನೇ ಅನುಸರಿಸಿರಬಹುದು.

ಚಿಕ್ಕದಾದ ಚೊಕ್ಕ ವಾಕ್ಯಗಳಿಂದ, ಭಾವನಾತ್ಮಕ ನಿರೂಪಣೆಗಳಿಂದ, ಅಲ್ಲಲ್ಲಿಯ ಕೃಷ್ಣ ಲೀಲಾತ್ಮಕ ವರ್ಣನೆಗಳಿಂದ ಚೆನ್ನಾಗಿ ಓದಿಸಿಕೊಳ್ಳುವ ಈ ಕೃಷ್ಣ ಕಥಾ ಮಂಜರಿ ಸರ್ವಜನ ಗ್ರಾಹ್ಯ ಗುಣ ಸಂಪನ್ನವಾಗಿದೆ. ಸೊಗಸಾದ ಮುದ್ರಣದಿಂದ, ಮುಖ ಪುಟ ಚಿತ್ರಣದಿಂದ ಬಾಹ್ಯ ಸೌಂದರ್ಯವನ್ನು ತಾಳಿರುವ ಈ ಸಂಪುಟಗಳು ಅಂತಃ ಸತ್ವಯುತವಾಗಿವೆ.

—ಟಿ. ಕೇಶವ ಭಟ್ಟ

## 5. ಮಾನಸ ಹಂಸ

ಶ್ರೀಮತಿ ಎಂ. ಎಸ್. ಸರೋಜಮ್ಮ (ರೋಜಿ) ಅವರು ತುಲಸೀದಾಸ ವಿರಚಿತ ಮಹಾಕಾವ್ಯ 'ಶ್ರೀರಾಮಚರಿತ ಮಾನಸ' ವನ್ನು 'ಮಾನಸ ಹಂಸ' ಎಂಬ ಶೀರ್ಷಿಕೆಯಡಿಯಲ್ಲಿ ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಿದ್ದಾರೆ. ಇದು ಡೆಮಿ ಚತುರ್ದಳಾಕಾರದಲ್ಲಿ 409 ಪುಟಗಳಷ್ಟು ವಿಸ್ತಾರವಾಗಿ ಹರಡಿದೆ. ಅವರು ತಮ್ಮ 'ಅರಿಕೆ'ಯಲ್ಲಿ ಹೇಳಿಕೊಂಡಿರುವಂತೆ—'ರಾಮಾಯಣಿ' ಎಂದು ಹೆಸರಾಂತ ದಿವಂಗತ ಶ್ರೀ ಅ. ತಿ. ತ್ರೀ ನಾಮಧೇಯದ ಶ್ರೀನಿವಾಸ ರಾಘವಾಚಾರ್ಯರು ನಮಗೆ ರಾಮ ಚರಿತ ಮಾನಸವನ್ನು ಬೋಧಿಸಿ ಅದರಲ್ಲಿ ನಮಗೆ ಆತ್ಮೀಯತೆಯನ್ನು ಮತ್ತು ರಚಿಸುವ ದಕ್ಷತೆಯನ್ನು ತಂದುಕೊಟ್ಟರು....ಗುರುವರೇಣ್ಯರುಗಳು ಆಶೀರ್ವಾದ ಮತ್ತು ರಾಮನ ಕೃಪೆಯೇ ಈ ಕೃತಿ ರಚನೆಗೆ ಸಹಾಯಕವು ಎಂದಿದ್ದಾರೆ. ಈ ಅನುವಾದಕ್ಕೆ "ನಲ್ನುಡಿ" ಬರೆದಿರುವ ವಿದ್ಯಾಭೂಷಣ ಡಾ|| ಎಂ. ಕೆ. ಭಾರತೀರಮಣಾಚಾರ್ಯ ಅವರು "ಶ್ರೀರಾಮಚರಿತ ಮಾನಸ ದೋಹಾ, ಚಉಪಾಯಿ ಮತ್ತು ಇತರ ಛಂದಸ್ಸು ಗಳಲ್ಲಿ ಬರೆಯಲಾದ ಕೃತಿ. ಅದರಲ್ಲಿ ಬಳಸಲಾದ ಈ ಛಂದಸ್ಸುಗಳಲ್ಲಿ ಮಾತ್ರಾ ಛಂದಸ್ಸುಗಳು, ಹಾಡುವುದಕ್ಕೆ ಅನುಕೂಲವಾದವು. ಶ್ರೀಮತಿ ಸರೋಜಮ್ಮನವರ ಸಾಹಸವೆಂದರೆ ಅದನ್ನು ಅದೇ ಛಂದಸ್ಸುಗಳಲ್ಲಿ ಅನುವಾದಿಸಲು ಕೈ ಹಾಕಿರುವುದು. ಇದರಲ್ಲಿ ಎಂಥ ಪಳಗಿದ ಕೈಯಾದರೂ ಪೂರ್ಣ ಯಶಸ್ಸನ್ನು ಪಡೆಯುವುದು ಕಷ್ಟ. ಆದರೂ ಅವರ ಪ್ರಾಮಾಣಿಕ ಪ್ರಯತ್ನದಿಂದ ಭಾವಕ್ಕೆ ಚ್ಯುತಿ ಬರದಂತೆ ಮೂಡಿ ಬಂದಿರುವ ಈ ಅನುವಾದ ಪ್ರೋತ್ಸಾಹನೀಯ" ಎಂದಿದ್ದಾರೆ.

ಪ್ರೊಫೆಸರ್ ನಾ. ನಾಗಪ್ಪನವರು "ಸರೋಜಮ್ಮನವರು ತಪಸ್ವಿನಿಯಂತೆ

ರಾಮಭಕ್ತಿಯಲ್ಲಿ ಮನಸ್ಸನ್ನು ನೆಟ್ಟು ಆತ್ಮಸಂತೋಷವೊಂದಕ್ಕಾಗಿಯೇ 'ರಾಮಚರಿತ ಮಾನಸ' ಮಹಾಕಾವ್ಯವನ್ನು ಕನ್ನಡಿಸಿದ್ದಾರೆ. ಸಾಧನೆ ಮಹತ್ವದ್ದು, ಸಾಧನಾ ಫಲ ಮಿಗಿಲಾದದ್ದು" ಎಂದು ಆಶೀರ್ವದಿಸಿದ್ದಾರೆ. ಜಿ. ಎಸ್. ಶಿವರುದ್ರಪ್ಪನವರು ....I find the Kannada translation quite satisfactory. ಎಂದು ಅಭಿಪ್ರಾಯ ನೀಡಿದ್ದಾರೆ. ಎಸ್. ವಿ. ಪರಮೇಶ್ವರ ಭಟ್ಟರು "ಮೂಲದ ಸ್ವತ್ತ್ವ-ಸತ್ತ್ವಗಳೆರಡನ್ನೂ ಅನುವಾದದಲ್ಲಿ ಶ್ರೀಮತಿಯವರು ಸಮರ್ಥವಾಗಿ ತಂದಿದ್ದಾರೆ" ಎಂದಿದ್ದಾರೆ. ಒಟ್ಟಿನಲ್ಲಿ ಈ ಎಲ್ಲ ಪಂಡಿತರ ಸಹೃದಯ ಅವಲೋಕನವು ಈ ಪ್ರಯತ್ನವನ್ನು ಶ್ಲಾಘಿಸಿದೆ.

ಶ್ರೀ ರಾಮಚರಿತ ಮಾನಸವು ತುಲಸೀದಾಸರಿಂದ ಸ್ವಾಂತಃ ಸುಖಾಯ ರಚಿಸಲ್ಪಟ್ಟದ್ದು. ಇದರ ಪರಮ ಉದ್ದೇಶ್ಯ 'ರಘುನಾಥನ ಚರಿತೆ'ಯನ್ನು ಹಾಡಿ ಹೊಗಳಿ ಸಗುಣಭಕ್ತಿಯ ಮಾರ್ಗವನ್ನು ಪ್ರಶಸ್ತಿಗೊಳಿಸುವುದು. ತುಲಸೀದಾಸರ ಕಾಲಕ್ಕೆ ಜನ ಸಾಮಾನ್ಯರಿಗೆ ರಾಮಾಯಣದ ಪರಿಚಯ ಸಂಸ್ಕೃತ ಬಲ ಪಂಡಿತರಿಂದಲೊ, ಕಥಾವಾಚನವನ್ನು ವೃತ್ತಿ ಮಾಡಿಕೊಂಡ ಪುರಾಣಿಕರಿಂದಲೋ, ಆಗಬೇಕಿತ್ತು. ಜನ ಭಾಷೆಯ ಮೂಲಕ ಅದನ್ನು ಅರಿತುಕೊಳ್ಳಲು ಬೇರೆ ಮಾರ್ಗವೇ ಇರಲಿಲ್ಲ. ಹೀಗಾಗಿ, ತುಲಸೀದಾಸರು ಜನ ಭಾಷೆ, ಅವಧಿ, ಜನರನ್ನು ಮುಟ್ಟುವ ಅವಧಿ, ಭಾಷೆಯ ಲಯಕ್ಕೆ ಹೊಂದುವ ಛಂದಸ್ಸು, ದ್ವಿಪದಿ, ಚೌಪದಿ, (ದೋಹಾ, ಚೌಪಾಯಿಗಳನ್ನು ಆರಿಸಿಕೊಂಡರು. ಆದುದರಿಂದ ಮೂಲಕೃತಿ ವಾಲ್ಮೀಕಿ ರಾಮಾಯಣವನ್ನು ಅನುಸರಿಸಿದರೂ, ಅವಧಿಯ ಛಂದಸ್ಸಿಗೆ ಒಗ್ಗದ ಸಂಸ್ಕೃತ ಛಂದಸ್ಸನ್ನು ಬಿಟ್ಟರು. ಭಾವ ಪ್ರಧಾನ ಮಾಡಿಕೊಂಡು ಭಾಷಾ ಛಂದಸ್ಸುಗಳನ್ನು ಅದಕ್ಕೆ ಅನುಗುಣವಾಗಿ ಆಯ್ಕೆ ಮಾಡಿಕೊಂಡರು.

ಶ್ರೀಮತಿ ಸರೋಜಮ್ಮನವರು ಮಾಡಿರುವ ಕಾರ್ಯ ಗಾತ್ರದ ದೃಷ್ಟಿಯಿಂದ ಅಮೋಘವಾದುದು. ಇಡೀ ಕೃತಿಯನ್ನು ಕನ್ನಡಕ್ಕಿಳಿಸಿರುವುದಲ್ಲದೆ, ಅದನ್ನು ಮುದ್ರಿಸಿ ಬಿಡುಗಡೆ ಮಾಡುವ ಸಾಹಸ ಮಾಡಿದ್ದಾರೆ. ಇದೊಂದು ಪವಾಡವೇ, ಆದರೆ ಅನುವಾದವನ್ನು ವೀಕ್ಷಿಸಿದಾಗ ಮೂಲಭೂತ ಪ್ರಶ್ನೆ ಏಳುತ್ತದೆ. ದೋಹ, ಚೌಪಾಯಿಗಳ ಲಯ ಕನ್ನಡದ ಲಯಕ್ಕೆ ಹೊಂದುವುದೇ ? ಕನ್ನಡದಲ್ಲಿ 'ಜನಪ್ರಿಯ ಸಾಹಿತ್ಯ' ರಚನೆಗೆ ಬಳಕೆಯಾದದ್ದು ತ್ರಿಪದಿ, ಷಟ್ಪದಿಗಳು. ಸರ್ವಜ್ಞನಾಗಲಿ, ಕುಮಾರ ವ್ಯಾಸನಾಗಲಿ ಕನ್ನಡಕ್ಕೆ ಒಲಿಯದ ಛಂದಸ್ಸನ್ನಾರಿಸಿಕೊಳ್ಳಲಿಲ್ಲ.

ಈಗ ಮೂಲ ಹಾಗೂ ಅನುವಾದವನ್ನು ಹೋಲಿಸಿ ನೋಡೋಣ. ಸುಂದರ ಕಾಂಡದ ಈ ಚೌಪಾಯಿ ನೋಡಿ–

ಮುದ್ರಣ ದೋಷಗಳು ಬೇಕಾದಷ್ಟಿವೆ. 'ಸ್ಪರ್ಶಕ್ಕೆ 'ಸ್ಪರ್ಷ' 'ಉಚ್ಚ'ಕ್ಕೆ 'ಉಚ್ಛ' 'ವಿಶುದ್ಧ'ಕ್ಕೆ 'ವಿರುದ್ಧ' 'ಅಲೌಕಿಕಕ್ಕೆ' 'ಅತಾರಿಕ' ಹೀಗೆ ದೊಡ್ಡ ಪಟ್ಟಿ ಮಾಡಬಹುದು.

ಮುಖಪುಟವನ್ನು ಅರ್ಥವತ್ತಾಗಿ ಮಾಡಲು ಪ್ರಯತ್ನಿಸಿದ್ದಾರೆ. ತುಲಸೀ ರಾಮಾಯಣದ ನಾಲ್ಕು ಕಥಾವಾಚಕರಾದ, ಶಿವ, ಯಾಜ್ಞವಲ್ಕ್ಯ, ಕಾಕಭುಸುಂಡಿ, ತುಲಸೀದಾಸರು ಹಾಗೂ ನಾಲ್ಕು ಕಥಾಶ್ರಾವಕರು ಪಾರ್ವತಿ, ಭಾರದ್ವಾಜ, ಗರುಡ, ಹಾಗೂ ಭಕ್ತ ಜನರು ಇವರುಗಳ ಚಿತ್ರ ಬಿಡಿಸಿ, ಮಾನಸ ಸರೋವರದಲ್ಲಿ ಹಂಸಗಳು ಮುತ್ತನ್ನು ಆರಿಸಿಕೊಳ್ಳುತ್ತಿರುವುದನ್ನು ವಸ್ತು ಮಾಡಿದ್ದಾರೆ. ಆದರೆ ಆದಕ್ಕೆ ತಕ್ಕ ಕಲಾ ನೈಪುಣ್ಯ ಹಾಗೂ ಮುದ್ರಣ ಕಂಡು ಬಂದಿಲ್ಲ.

ಆದರೆ ತುಲಸೀದಾಸರ ಒಂದು ಉಕ್ತಿಯನ್ನು ಇಲ್ಲಿ ಉದಾಹರಿಸಬಹುದು.

"ಜಡ ಚೇತನ ಗುಣ ದೋಷ ಮಯ ಬಿಸ್ವ ಕೀನ್ಹ ಕರ್ತಾರ್
ಸಂತ ಹಂಸಗುನ ಗಹಹಿಂ ಪಯ ಪರಿಹರಿ ವಾರಿ ವಿಕಾರ್

ಈ ಪ್ರಪಂಚವನ್ನು ಸೃಷ್ಟಿಕರ್ತನು ಜಡ-ಚೇತನ ಹಾಗೂ ಗುಣ-ದೋಷ ಮಯ ವಾಗಿಯೇ ಸೃಷ್ಟಿಸಿದ್ದಾನೆ. ಸಂತ ಪುರುಷರು ಹಂಸ ವೃತ್ತಿಯಿಂದ ನೀರೆಂಬ ವಿಕಾರ ಗಳನ್ನು ತ್ಯಜಿಸಿ ಹಾಲೆಂಬ ಗುಣವನ್ನು ಸ್ವೀಕರಿಸುತ್ತಾರೆ.

ಈ ದೃಷ್ಟಿಯಲ್ಲಿ ನೋಡಿದಾಗ, ಶ್ರೀಮತಿ 'ರೋಜಿ'ಯವರು ಕನ್ನಡ ಭಾಷೆಯಲ್ಲಿ ಇದುವರೆಗೂ ಆಗಬೇಕಾಗಿದ್ದ, ಆಗದೆ ಉಳಿದು ಹೋಗಿದ್ದ ಒಂದು ದೊಡ್ಡ ಕೆಲಸವನ್ನು ಮಾಡಿದ್ದಾರೆ. ಅವರ ಸಾಹಸ, ಸಾಧನೆ, ಶ್ರೀರಾಮಭಕ್ತಿ ಇವುಗಳನ್ನು ಮೆಚ್ಚಲೇ ಬೇಕು. ಇವರು 'ನಡೆದು ಎಡವಿದವರು.' ಕೂತು ಕಾಲ ಕಳೆದವರಿಗಿಂತ ಮೇಲು, ಎಷ್ಟೋ ವಿದ್ವಾಂಸರು 'ಕೂತು' ಕಾಲ ಕಳೆದರು, ಇವರು 'ನಡೆದರು', ಇದರಿಂದ ಪ್ರೇರಣೆ ಹೊಂದಿ 'ಬುಧ ಜನರು' ಈ ದಿಶೆಯಲ್ಲಿ 'ನಡೆದು' ಇನ್ನೂ ಉತ್ತಮವಾದ ಅನುವಾದ ಕನ್ನಡದಲ್ಲಿ ಬರುವಂತಾಗಲಿ.

—ಎಚ್. ವಿ. ರಾಮಚಂದ್ರರಾವ್

ಪ್ರಕಾಶಕರು : ಶ್ರೀ ಕೃಷ್ಣಾಂಜಲಿ ಪ್ರಕಾಶನ 2817/20, 10ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ ಜಯನಗರ, ಮೈಸೂರು-570014, ಪುಟಗಳು ಡೆಮಿ $\frac{1}{4}$ 409 ಬೆಲೆ ರೂ. 250 (ಪ್ರ.ಮು)

# ವಸ್ತುಸಂಗ್ರಹ

## ಸಾಹಿತ್ಯ ಸಮ್ಮೇಳನ

ಅಖಿಲ ಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೬ ಡಿಸೆಂಬರ್ ೨೧, ೨೨, ೨೩, ೨೪ ಈ ನಾಲ್ಕು ದಿನ ಹಾಸನದಲ್ಲಿ ಜರುಗಿತು. ಸಮ್ಮೇಳನಾಧ್ಯಕ್ಷರು ಖ್ಯಾತ ಕವಿ ಹಾಗೂ ಲೇಖಕರಾದ ಡಾ|| ಚೆನ್ನವೀರಕಣವಿಯವರು. ಹಾಸನದ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ ಹೊಯ್ಸಳ ಮಂಟಪ, ಚಾವುಂಡರಾಯ ವೇದಿಕೆ, ಶಾಂತಲಾ ಕಲಾ ವೇದಿಕೆ, ರಾಘವಾಂಕ ಮಹಾದ್ವಾರ, ಕೆರೆಯ ಪದ್ಮರಸ ಪ್ರವೇಶ ದ್ವಾರ ಮತ್ತು ಇತರ ದ್ವಾರಗಳಿಂದ ಭವ್ಯವಾದ ಸ್ಥಳದಲ್ಲಿ ನೆರವೇರಿಸಲಾದ ಈ ಸಮ್ಮೇಳನವನ್ನು ಪ್ರಧಾನ ಮಂತ್ರಿ ಶ್ರೀ ಎಚ್. ಡಿ. ದೇವೇಗೌಡರು ಉದ್ಘಾಟಿಸಿದರು. ವಿವಿಧ ಗೋಷ್ಠಿಗಳು ನೆರವೇರಿದವು. ೨೪ ರಂದು ಸನ್ಮಾನ ಮತ್ತು ಸಮಾರೋಪ ಸಮಾರಂಭಗಳಾದವು. ಡಾ|| ದೇ. ಜ ಗೌ. ಅವರು ಸಮಾರೋಪ ಭಾಷಣ ಮಾಡಿದರು. ಸನ್ಮಾನಿತ ಸಾಹಿತಿಗಳಲ್ಲಿ ಇದೇ ಕರ್ನಾಟಕ ಲೋಚನ ಪತ್ರಿಕೆಯ ಗೌ|| ಸಂಪಾದಕರಾದ ಪ್ರೊ|| ಟಿ. ಕೇಶವ ಭಟ್ಟರೂ ಒಬ್ಬರು.

## ವಿಶ್ವ ಹವ್ಯಕ ಸಮ್ಮೇಳನ

ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ), ಬೆಂಗಳೂರು ಇದರ ವತಿಯಿಂದ ಪ್ರಥಮ ವಿಶ್ವ ಹವ್ಯಕ ಸಮ್ಮೇಳನ ಹಾಗೂ ಆರನೆಯ ಅಖಿಲ ಹವ್ಯಕ ಮಹಾ ಸಮ್ಮೇಳನ ದಿನಾಂಕ : ೨೮, ೨೯ ಡಿಸೆಂಬರ, ೧೯೯೬ ರಂದು, ದ. ಕ. ಜಿಲ್ಲೆಯ ಪುತ್ತೂರು ವಿವೇಕಾನಂದ ಮಹಾವಿದ್ಯಾಲಯದ ಆವರಣದಲ್ಲಿ ಸಂಭ್ರಮದಿಂದ ಜರುಗಿತು. ಸಮ್ಮೇಳನಾಧ್ಯಕ್ಷರು-ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ, ಸಾಗರ ; ಉದ್ಘಾಟಕರು-ಶ್ರೀ ರಾಮಕೃಷ್ಣ ಹೆಗಡೆಯವರು. ಎರಡು ದಿನಗಳ ಕಾರ್ಯಕ್ರಮಗಳ ಅಂಗಗಳಾಗಿ ಸ್ಮರಣ ಸಂಚಿಕೆಯ ಬಿಡುಗಡೆ, ಪುಸ್ತಕಗಳ ಬಿಡುಗಡೆ, ವಸ್ತು ಪ್ರದರ್ಶನದ ಉದ್ಘಾಟನೆ, ಬಡವರ ಕಲ್ಯಾಣ ನಿಧಿ ಉದ್ಘಾಟನೆ, ಹವ್ಯಕ ಫೈನಾನ್ಸ್ ಲಿಮಿಟೆಡ್ ಉದ್ಘಾಟನೆಗಳಿದ್ದವು. ಸಾಹಿತ್ಯ ಸಂಸ್ಕೃತಿ ಗೋಷ್ಠಿ, ಮಹಿಳಾ ಗೋಷ್ಠಿ, ಪ್ರತಿಭಾ ಪ್ರೋತ್ಸಾಹ ಸಮಾರಂಭ, ವೈದಿಕ ಧಾರ್ಮಿಕ ಗೋಷ್ಠಿ, ಹವ್ಯಕ ಕಾವ್ಯ ರಸಾಯನ ಗೋಷ್ಠಿ ಹಾಗೂ ವಿಶೇಷ ಸನ್ಮಾನಗಳಿದ್ದುವು. ಈ ಸಮ್ಮೇಳನದಲ್ಲಿ ವೈದಿಕ ಧಾರ್ಮಿಕ ಗೋಷ್ಠಿಗೆ ಅಧ್ಯಕ್ಷರು-ವಿದ್ವಾನ್ ಯನ್. ರಂಗನಾಥ ಶರ್ಮಾರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಗೋಷ್ಠಿಗೆ ಅಧ್ಯಕ್ಷರು ಮತ್ತು ಸಾಹಿತ್ಯ ಸೇವೆಗಾಗಿ ಸನ್ಮಾನಿತರಾದವರು ಇದೇ ಕರ್ನಾಟಕಲೋಚನ ಪತ್ರಿಕೆಯ ಸಂಪಾದಕರಾದ ವಿದ್ವಾನ್ ತಾಳ್ತಜೆ, ಕೇಶವ ಭಟ್ಟರು.

# ಪ್ರತಿಷ್ಠಾನ ವಾರ್ತೆ

೧. ಸಂಸ್ಮರಣೆ :

ದಿನಾಂಕ 18-7-96ರಂದು ಗೋಖಲೆ ಸಂಸ್ಥೆಯ ಸಭಾಂಗಣದಲ್ಲಿ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ಸುಪ್ರಸಿದ್ಧ ಸಾಹಿತಿಗಳಾದ ದಿವಂಗತ ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟ ಮತ್ತು ಡಾ|| ಎಚ್. ಎಸ್. ಬಿಳಿಗಿರಿ ಅವರ ಸಂಸ್ಮರಣ ಕಾರ್ಯಕ್ರಮವು ನಡೆಯಿತು. ಶ್ರೀಯುತರುಗಳಾದ ಡಾ|| ಎಂ. ಚಿದಾನಂದ ಮೂರ್ತಿ, ಪ್ರೊ|| ಅ.ರಾ. ಮಿತ್ರ, ಪ್ರೊ|| ಎಂ. ಎಚ್. ಕೃಷ್ಣಯ್ಯ ಮತ್ತು ಪ್ರೊ|| ಕಿ. ರಂ. ನಾಗರಾಜ್ ಅವರುಗಳು ಆ ಈರ್ವರು ಮಹನೀಯರನ್ನು ಕುರಿತು ಮಾತನಾಡಿದರು. ಅನಂತರ ಸಭೆಯಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿ ದಿವಂಗತರ ಆತ್ಮಕ್ಕೆ ಶಾಂತಿ ಕೋರಿ ಮೌನ ಆಚರಿಸಲಾಯಿತು.

೨. ದತ್ತಿ ಉಪನ್ಯಾಸಗಳು :-

1. ಪ್ರೊ. ಟಿ. ಎಸ್. ವೆಂಕಣ್ಣಯ್ಯ ಸ್ಮಾರಕ ದತ್ತಿ ಉಪನ್ಯಾಸ : 28-7-96 ರಂದು ಚಳ್ಳಕೆರೆಯ ರೋಟರಿ ಬಾಲಭವನದಲ್ಲಿ ಚಳ್ಳಕೆರೆಯ ಕರುನಾಡು ಕಲಾಸಾಹಿತ್ಯ ವೇದಿಕೆ ಮತ್ತು ಬಿ. ಎಂ. ಶ್ರೀ. ಪ್ರತಿಷ್ಠಾನ ಇವುಗಳ ಸಹಯೋಗದಲ್ಲಿ ನಡೆಯಿತು. ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ. ಎನ್. ಬಸವಾರಾಧ್ಯರು ಅಧ್ಯಕ್ಷತೆ ವಹಿಸಿದ್ದರು. ಚಳ್ಳಕೆರೆಯ ತಹಸೀಲ್ದಾರ್ ಶ್ರೀ. ಎಸ್. ಪಾಲಯ್ಯನವರಿಂದ ಬಹುಮಾನ ವಿತರಣೆ ನಡೆಯಿತು. ಪ್ರೊ|| ಜಿ. ಎಸ್. ಸಿದ್ದಲಿಂಗಯ್ಯನವರು, "ವೆಂಕಣ್ಣನವರು ಒಬ್ಬರಿದ್ದರೆ ಕಲ್ಪವೃಕ್ಷದಂತೆ" ಎಂಬ ವಿಷಯವನ್ನು ಕುರಿತು, ಪ್ರೊ|| ಅ. ರಾ. ಮಿತ್ರ ಅವರು "ಸಾಹಿತ್ಯ ಮತ್ತು ಸಮಾಜ" ಎಂಬ ವಿಷಯದ ಮೇಲೆ ವಿಚಾರ ಪೂರ್ಣ ಉಪನ್ಯಾಸ ನೀಡಿದರು. ದತ್ತಿನಿಧಿಯ ದಾತೃಗಳಾದ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿ ಕಲಾವೇದಿಕೆಯ ಶ್ರೀ. ಬಿ. ವಿ. ಚಿದಾನಂದಮೂರ್ತಿ ಮತ್ತು ಶ್ರೀ. ಎನ್. ವರ್ತೇಶ್ ಅವರುಗಳು ಮುಖ್ಯ ಅತಿಥಿಗಳಾಗಿದ್ದರು.

2. ದಿನಾಂಕ 9-9-96 ರಂದು ಕನ್ನಡ ಸಾಹಿತ್ಯ ಪರಿಷತ್ತಿನ ದುಂಡು ಮೇಜಿನ ಸಭಾಂಗಣದಲ್ಲಿ ಕನ್ನಡ ಶಕ್ತಿ ಕೇಂದ್ರ ಹಾಗೂ ಬಿ. ಎಂ. ಶ್ರೀ ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರೊ|| ಎಂ. ವಿ. ಸೀ ಕನ್ನಡ ದತ್ತಿ ವಿಶೇಷ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ನಿವೃತ್ತ ಮುಖ್ಯನ್ಯಾಯಮೂರ್ತಿಗಳಾದ ಶ್ರೀ. ಡಿ. ಎಂ. ಚಂದ್ರಶೇಖರ್ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೇಷ್ಠ ನೀರಾವರಿ ತಜ್ಞರೂ, ನಿವೃತ್ತ

ಪ್ರಧಾನ ಇಂಜನಿಯರ್ ಮತ್ತು ಕರ್ನಾಟಕ ಸರ್ಕಾರದ ತಾಂತ್ರಿಕ ಸಲಹೆಗಾರರೂ ಆದ ಶ್ರೀ ಎಂ. ವಿ. ಶಂಕರರಾವ್ ಅವರು ಸ್ವಾರಸ್ಯವಾದ ವಿಚಾರ ಪೂರ್ಣವಾದ ಉಪನ್ಯಾಸ ನೀಡಿದರು. 'ಕೃಷ್ಣ ಕಣಿವೆಯ ಜಲಸಂಪತ್ತು ; ಬಚಾವತ್ ಆಯೋಗ ಮತ್ತು ಕರ್ನಾಟಕ' ಎಂಬ ಕನ್ನಡದ ಪ್ರಚಲಿತ ಸಮಸ್ಯೆಯನ್ನು ಕುರಿತ ಈ ಉಪನ್ಯಾಸಕ್ಕೆ ಡಾ|| ಎಂ. ಚಿದಾನಂದ ಮೂರ್ತಿ ಅವರು ಸೂಕ್ತವಾದ ಪ್ರಸ್ತಾವನೆಯನ್ನು ನೀಡಿದರು.

3. ದಿನಾಂಕ 10–11–96ರಂದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಭಾಂಗಣದಲ್ಲಿ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಶ್ರೀ. ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ಎಸ್. ಶ್ರೀಕಂಠಯ್ಯದತ್ತಿ ಉಪನ್ಯಾಸ ಕಾರ್ಯಕ್ರಮವು ನಡೆಯಿತು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸದ ಪ್ರಾಧ್ಯಾಪಕರಾದ ಡಾ|| ಎಚ್. ಆರ್. ರಘುನಾಥ ಭಟ್ ಅವರು ತಿ. ತಾ. ಶರ್ಮ ಜನ್ಮ ಶತಾಬ್ದಿ ಸ್ಮರಣೆಯ ಅಂಗವಾಗಿ "ತಿರುಮಲೆ ತಾತಾಚಾರ್ಯ ಶರ್ಮರ ಸಾಹಿತ್ಯ ಸಾಧನೆ" ವಿಷಯ ಕುರಿತು ವಿಚಾರಪೂರ್ಣ ಉಪನ್ಯಾಸ ನೀಡಿದರು. ಅಧ್ಯಕ್ಷ ಭಾಷಣ, ವಂದನಾರ್ಪಣೆಗಳೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

4. 30–11–96 ರಂದು ಸಂಜೆ ಗೋಖಲೆ ಸಂಸ್ಥೆಯ ಸಭಾಂಗಣದಲ್ಲಿ ಎಂ. ಜಿ. ನಂಜುಂಡಾರಾಧ್ಯ ಸ್ಮಾರಕ ದತ್ತಿಯ ಪ್ರಥಮ ಕಾರ್ಯಕ್ರಮವು ನಡೆಯಿತು. ಹೆಸರಾಂತ ಸಂಸ್ಕೃತ ವಿದ್ವಾಂಸರಾದ ವಿದ್ವಾನ್ ಎನ್. ಟಿ.ಶ್ರೀನಿವಾಸ ಅಯ್ಯಂಗಾರ್ ಅವರು "ಶಕ್ತಿ ವಿಶಿಷ್ಟಾದ್ವೈತ ಮತ್ತು ನಂಜುಂಡಾರಾಧ್ಯರು" ಎಂಬ ವಿಷಯ ಕುರಿತು ಪಾಂಡಿತ್ಯಪೂರ್ಣ ಉದ್ಘಾಟನಾ ಉಪನ್ಯಾಸ ಮಾಡಿದರು. ಬೆಂಗಳೂರ ಬೇಲಿ ಮಠದ ಶ್ರೀ ಗಳಾದ ಶ್ರೀ ಶ್ರೀ ಶ್ರೀ ಚರಮೂರ್ತಿ ಸ್ವಾಮೀಜಿ ಅವರು "ವಿದ್ವಾಂಸ ರಾಗಿ ನಂಜುಂಡಾರಾಧ್ಯರು" ಎಂಬ ವಿಷಯವನ್ನು ಕುರಿತು ನೂತನವಾಗಿ ಸ್ಥಾಪಿಸ ಲಾದ ನಂಜುಂಡಾರಾಧ್ಯ ದತ್ತಿಯ ಪ್ರಥಮ ಉಪನ್ಯಾಸವನ್ನು ಮಾಡಿದರು. ದತ್ತಿ ನಿಧಿಯ ದಾತೃಗಳಾದ ನಂಜುಂಡಾರಾಧ್ಯ ಸಂಸ್ಕರಣ ಸಮಿತಿ ಅಧ್ಯಕ್ಷರಾದ ಶ್ರೀ ಶಿವಪ್ಪ ನವರು ಅಧ್ಯಕ್ಷತೆ ವಹಿಸಿದ್ದರು.

5. ಚಂದ್ರಶೇಖರ ಶರ್ಮ ದತ್ತಿ ಉಪನ್ಯಾಸವು ದಿನಾಂಕ 23–12–96 ರಂದು ಗೋಖಲೆ– ಸಾರ್ವಜನಿಕ ಸಂಸ್ಥೆಯ ಸಭಾಂಗಣದಲ್ಲಿ ನಡೆಯಿತು. ಈ ಕಾರ್ಯ ಕ್ರಮದ ದಾತೃಗಳು ಡಾ|| ಬಿ. ಸಿ. ರಾಮಚಂದ್ರಶರ್ಮ ಅವರು. ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಜಿ. ಕೆ. ಗೋವಿಂದರಾವ್ ಅವರು "ಶೇಕ್ಸ್‌ಪಿಯರ್ : ರಾಜಕೀಯ ನಾಟಕಗಳು. (ರೋಮನ್) ಎಂಬ ವಿಷಯವನ್ನು ಕುರಿತು ಉಪಯುಕ್ತ ಉಪನ್ಯಾಸ ಮಾಡಿದರು.

6. 26-12-96ರ ಸಂಜೆ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಭಾಂಗಣದಲ್ಲಿ "ನವ್ಯ ಕಾವ್ಯದ ಹಿಂದೆ ಮುಂದೆ' ಎಂಬ ವಿಷಯವನ್ನು ಕುರಿತು ಡಾ|| ಕೆ. ನರಸಿಂಹಮೂರ್ತಿ ಅವರಿಂದ ವಿ.ಸೀ. ದತ್ತಿ ನಿಧಿಯ ಪ್ರಥಮ ಉಪನ್ಯಾಸ ಕಾರ್ಯಕ್ರಮವು ನೆರವೇರಿತು. ಇದೇ ಸಂದರ್ಭದಲ್ಲಿ ಡಾ ಸೂರ್ಯನಾಥ ಕಾಮತ್ ಅವರು ಪ್ರತಿಷ್ಠಾನವು ನಡೆಸುತ್ತಿರುವ 7ನೇ ಹಸ್ತಪ್ರತಿಶಾಸ್ತ್ರ ತರಗತಿಯನ್ನು ಉದ್ಘಾಟನೆ ಮಾಡಿದರು. ೬ನೇ ತಂಡದ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರವನ್ನು ವಿತರಣೆ ಮಾಡಲಾಯಿತು.

ಸಾಹಿತ್ಯೋಪಾಸಕರು ವಿಶೇಷ ಕಾರ್ಯಕ್ರಮ ಮಾಲೆ :

1. ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ಈ ಮಾಲೆಯ 26ನೆಯ ಕಾರ್ಯಕ್ರಮವು 29-7-96ರಂದು ನಡೆಯಿತು. ಹಿರಿಯ ಗಾಂಧೀವಾದಿಗಳೂ, ಸಾಹಿತ್ಯ ಸೇವಕರೂ, ಸಮಾಜದ ಅಭಿವೃದ್ಧಿಗೆ ಸೇವೆ ಸಲ್ಲಿಸುತ್ತಿರುವವರೂ ಆದ ಶ್ರೀಯುತ ಎಚ್. ಎಸ್. ದೊರೆಸ್ವಾಮಿಯವರು "ಎಂ. ವೆಂಕಟಕೃಷ್ಣಯ್ಯ ಅವರ ಜೀವನ-ಸಾಧನೆ" ಎಂಬ ವಿಷಯ ಕುರಿತು ಮನೋಜ್ಞವಾದ ಉಪನ್ಯಾಸ ಮಾಡಿದರು. ಅದಕ್ಕೆ ಪೂರಕವಾದ ಅನೇಕ ಸಂಗತಿಗಳನ್ನು ಶ್ರೀ ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು.

2. 27ನೆಯ ಕಾರ್ಯಕ್ರಮವು 28-9-96 ರಂದು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನೆರವೇರಿತು. ಹಿರಿಯ ಕನ್ನಡ ಸಾಹಿತಿಗಳಾಗಿದ್ದ ಭಾಷಾ ಸೇವೆಗೈದ-ಹಟ್ಟಿಯಂಗಡಿ ನಾರಾಯಣರಾವ್ ಜೀವನ-ಸಾಧನೆ" ಎಂಬ ವಿಷಯದ ಮೇಲೆ ಮೈಸೂರು ವಿ. ವಿ. ಕನ್ನಡ ಪ್ರಾಧ್ಯಾಪಕರಾದ ಡಾ|| ಪಂಡಿತಾರಾಧ್ಯ ಅವರಿಂದ ಉಪನ್ಯಾಸವು ನಡೆಯಿತು.

3. ಕನ್ನಡ ಸಾಹಿತ್ಯಕ್ಕೆ ಆರ್. ನರಸಿಂಹಾಚಾರ್ಯರ ಕೊಡುಗೆ :
ವಿಚಾರ ಗೋಷ್ಠಿ :

ಈ ಮಾಲಿಕೆಯ 28ನೆಯ ಕಾರ್ಯಕ್ರಮವಾಗಿ ಗೋಖಲೆ ಸಂಸ್ಥೆಯ ಸಭಾಂಗಣದಲ್ಲಿ, ಪ್ರತಿಷ್ಠಾನ, ಹಾಗೂ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡಮಿ ಇವರ ಸಹಯೋಗದೊಂದಿಗೆ 13-10-96ರಂದು ಇಡೀ ದಿನ ಎರಡು ಉಪಯುಕ್ತ ವಿಚಾರ ಗೋಷ್ಠಿಗಳು ನಡೆದುವು. ಕಾರ್ಯಕ್ರಮವನ್ನು ಪ್ರೊ|| ಎಸ್. ಆರ್. ಮಳಗಿಯವರು ಉದ್ಘಾಟಿಸಿ ಪ್ರಾಸ್ತಾವಿಕಭಾಷಣ ಮಾಡಿದರು. ಪ್ರತಿಷ್ಠಾನದ ಗೌರವಾಧ್ಯಕ್ಷರು ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರು ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನು ಚೆಂದಗಾಣಿಸಿದರು. ಮೊದಲನೇ ಗೋಷ್ಠಿಯಲ್ಲಿ ಪ್ರೊ|| ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು "ಆರ್. ನರಸಿಂಹಾಚಾರ್ಯರ ಜೀವನ-ವ್ಯಕ್ತಿತ್ವ" ಎಂಬ ವಿಷಯವನ್ನು ಕುರಿತು ಡಾ|| ಎಂ. ಎಂ. ಕಲಬುರ್ಗಿ ಅವರು "ಕನ್ನಡ ಸಾಹಿತ್ಯ ಚರಿತ್ರೆಯ ನಿರ್ಮಾತೃವಾಗಿ

ನರಸಿಂಹಾಚಾರ್" ಎಂಬ ವಿಷಯವಾಗಿ ಹಾಗೂ ವಿದ್ವಾಂಸರಾದ ಶ್ರೀ ಎಸ್. ಶಿವಣ್ಣ ಅವರು "ನರಸಿಂಹಾಚಾರ್ಯರ ನಂತರದ ಕವಿ ಚರಿತೆಯ ದಾಖಲೆಗಳು" ಎಂಬ ವಿಷಯದ ಮೇಲೆ ಪಾಂಡಿತ್ಯಪೂರ್ಣವಾದ ಉಪನ್ಯಾಸಗಳನ್ನು ನೀಡಿದರು.

ಎರಡನೇ ಗೋಷ್ಠಿಯಲ್ಲಿ ವಿದ್ವಾಂಸರಾದ ಶ್ರೀ. ಬಿ. ಎಸ್. ಸಣ್ಣಯ್ಯನವರು "ಗ್ರಂಥ ಸಂಪಾದನೆ ಮತ್ತು ಆರ್. ನರಸಿಂಹಾಚಾರ್", ಡಾ|| ಆರ್. ವಿ. ಎಸ್. ಸುಂದರಂ ಅವರು "ಭಾಷಾಶಾಸ್ತ್ರ ಹಾಗೂ ವ್ಯಾಕರಣಗಳಿಗೆ ನರಸಿಂಹಾಚಾರ್ಯರ ಕೊಡುಗೆ" ಮತ್ತು ಡಾ|| ಕೋ. ವಸಂತಲಕ್ಷ್ಮೀ ಅವರು "ಪ್ರಾಚ್ಯ ವಸ್ತು ಸಂಶೋಧನೆ ಯಲ್ಲಿ "ನರಸಿಂಹಾಚಾರ್ಯರ ಪಾತ್ರ" ಎಂಬ ವಿಷಯಗಳನ್ನು ಕುರಿತು ಗಂಭೀರವೂ ಉಪಯುಕ್ತವೂ ಆದ ಉಪನ್ಯಾಸಗಳನ್ನು ನೀಡಿದರು.

ಅನಂತರ ಪ್ರೊ|| ಸಿ. ಮಹಾದೇವಪ್ಪನವರ ಅಧ್ಯಕ್ಷತೆಯಲ್ಲಿ ಪ್ರಸಿದ್ಧ ಸಾಹಿತಿ ಗಳಾದ ಡಾ|| ಸಿ.ಪಿ.ಕೃಷ್ಣಕುಮಾರ್ ಅವರಿಂದ ಸಮಾರೋಪ ಭಾಷಣ ಕಾರ್ಯಕ್ರಮ ನಡೆಯಿತು.

4 ಈ ಮಾಲೆಯ 29ನೇ ಕಾರ್ಯಕ್ರಮವು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಹಕಾರದೊಂದಿಗೆ 5-12-96ರ ಸಂಜೆ ನೆರವೇರಿತು. "ಕವಿ ಶಿಷ್ಯ" ಕಾವ್ಯನಾಮವುಳ್ಳ ಕನ್ನಡ ಸಾಹಿತ್ಯದ ಬೆಳವಣಿಗೆಗೆ ನಾನಾವಿಧವಾಗಿ ಸೇವೆ ಸಲ್ಲಿಸಿದ ಪಂಜೆ ಮಂಗೇಶರಾಯರನ್ನು ಕುರಿತು ಉಪನ್ಯಾಸ ನೀಡಿದವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಡಾ|| ಸಿ. ವೀರಣ್ಣ ಅವರು

### ಈ ಶತಮಾನದ ಹಿರಿಯರು : ಒಂದು ಸಂವಾದ

ದಿನಾಂಕ ಅಕ್ಟೋಬರ್ 8, 1996ರಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾ ಲಯ ಹಾಗೂ ಬಿ. ಎಂ.ಶ್ರೀ ಪ್ರತಿಷ್ಠಾನ ಇವರ ಆಶ್ರಯದಲ್ಲಿ ರವೀಂದ್ರ ಕಲಾಕ್ಷೇತ್ರ ದಲ್ಲಿ ಒಂದು ಅಪೂರ್ವ ಕಾರ್ಯಕ್ರಮವು ನಡೆಯಿತು. ಈ ಸಂದರ್ಭದಲ್ಲಿ ತೊಂಬತ್ತು ವಸಂತಗಳನ್ನು ಕಂಡಿರುವ ಸಾಹಿತ್ಯ, ಕಾನೂನು, ಸಂಗೀತ, ನೃತ್ಯ, ರಾಜಕಾರಣ, ಜಾನಪದ, ಧರ್ಮ, ಸಂಸ್ಕೃತಿ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಕರ್ನಾಟಕದ ಹತ್ತು ಮಂದಿ ಹಿರಿಯರನ್ನು ಅವರ ಅನಂತರದ ಎರಡನೆಯ ಮತ್ತು ಮೂರನೆಯ ತಲೆಮಾರಿನ ವಿವಿಧ ಕ್ಷೇತ್ರಗಳ ಗಣ್ಯರು ಅನೇಕ ಸೂಕ್ತ ಹಾಗೂ ಉಪಯುಕ್ತ ಪ್ರಶ್ನೆಗಳನ್ನು ಕೇಳುವುದರ ಮೂಲಕ ಸಂವಾದದಲ್ಲಿ ತೊಡಗಿಸಿದರು. ಈ ಸಂವಾದದಲ್ಲಿ ಉಪಸ್ಥಿತರಿದ್ದ ಹಿರಿಯ ಗಣ್ಯರು ಯಾರೆಂದರೆ - ಪರಮ ಪೂಜ್ಯ ಡಾ|| ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮಿಗಳು, ಡಾ|| ಕೆ. ವೆಂಕಟಲಕ್ಷ್ಮಮ್ಮನವರು ಸುಪ್ರಸಿದ್ಧ ಕಲಾವಿದೆ, ಮಾಜಿ ಶಿಕ್ಷಣ ಸಚಿವರಾದ ಶ್ರೀ ಬಿ.ಡಿ. ನಾರಾಯಣ್ ಅವರು, ಪಂಪ ಕವಿ

ಪ್ರಶಸ್ತಿ ವಿಜೇತರಾದ ಸುಪ್ರಸಿದ್ಧ ಸಾಹಿತಿ ಡಾ|| ಪು. ತಿ. ನರಸಿಂಹಾಚಾರ್ ಅವರು, ನಿವೃತ್ತ ಮುಖ್ಯ ನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರು, ಸುಪ್ರಸಿದ್ಧ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ. ಎಸ್. ನಿಜಲಿಂಗಪ್ಪ ನವರು, ಕನಕ-ಪುರಂದರ ಪ್ರಶಸ್ತಿ ವಿಜೇತರೂ, ಪ್ರಸಿದ್ಧ ಸಂಗೀತ ವಿದ್ವಾಂಸರೂ ಆದ ಶ್ರೀ ಟಿಟ್ಟೆ ಕೃಷ್ಣಯ್ಯಂಗಾರ್, ಸುಪ್ರಸಿದ್ಧ ಸಾಹಿತಿಗಳಾದ ಡಾ|| ಕೆ. ಶಿವರಾಮ ಕಾರಂತರು ಹಾಗೂ ಪಂಪ ಪ್ರಶಸ್ತಿ ವಿಜೇತ ಪ್ರೊ|| ಎ. ಎನ್. ಮೂರ್ತಿರಾಯರು.

ಈ ಹಿರಿಯರೊಂದಿಗೆ ಸಂವಾದದಲ್ಲಿ ಭಾಗವಹಿಸಿದ್ದವರು ಹಿರಿಯ ತಲೆಮಾರಿನವ ರಾದ ಶ್ರೀ. ಡಿ. ಎಂ. ಚಂದ್ರಶೇಖರ್ ನಿವೃತ್ತ ಮುಖ್ಯ ನ್ಯಾಯಾಧೀಶರು, ಸಚಿವರು ಶ್ರೀಮತಿ ಲೀಲಾವತಿ ಆರ್. ಪ್ರಸಾದ್, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪಮೊಯಿಲಿ, ಡಾ|| ಜಿ. ವಿ. ಕೆ. ರಾವ್, ಐ. ಎ. ಎಸ್. ನಿವೃತ್ತ ಮುಖ್ಯ ಕಾರ್ಯ ದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳಾದ ಡಾ|| ಎಸ್. ರಾಮೇಗೌಡರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಶ್ರೀ ಜಿ, ನಾರಾಯಣ ಅವರು ಹಾಗೂ ಪ್ರಸಿದ್ಧ ರಂಗಭೂಮಿಯ ತಜ್ಞರಾದ ಡಾ|| ಹೆಚ್. ಕೆ. ರಂಗನಾಥ್ ಅವರು.

ಕಿರಿಯ ತಲೆಮಾರಿನಿಂದ ಈ ಸಂವಾದದಲ್ಲಿ ಭಾಗವಹಿಸಿದ್ದವರು ಡಾ|| ವಿಜಯಾ, ಸಂಪಾದಕರು ಸಂಕುಲ ಕಲಾಪತ್ರಿಕೆ, ಶ್ರೀ. ಸಿ. ಆರ್. ಸಿಂಹ, ಪ್ರಸಿದ್ಧ ಕಲಾವಿದರು, ಶ್ರೀ. ಎಂ. ಆರ್. ಸತ್ಯನಾರಾಯಣ, ಆಕಾಶವಾಣಿ, ಶ್ರೀ ಚೌಡೇಗೌಡ, ಸಂಪಾದಕ ವಿಭಾಗ, ಪ್ರಜಾವಾಣಿ, ಡಾ|| ನರಹಳ್ಳಿ ಬಾಲಸುಬ್ರಹ್ಮಣ್ಯ, ಕನ್ನಡ ಪ್ರಾಧ್ಯಾಪಕರು ಶೇಷಾದ್ರಿಪುರ ಕಾಲೇಜು ಮತ್ತು ಶ್ರೀಮತಿ ನೇಮಿಚಂದ್ರ, ವಿಜ್ಞಾನಿ ಹಾಗೂ ಕಥೆಗಾರರು.

ಈ ಕಾರ್ಯಕ್ರಮವು ಅತ್ಯಂತ ಉಪಯುಕ್ತವೂ ಬೋಧಪ್ರದವೂ ಮುಂದಿನ ಪೀಳಿಗೆಯವರಿಗೆ ಉತ್ತಮ ದಾಖಲೆಯೂ ಆಗಿದ್ದು ಸಭಿಕರ ಕುತೂಹಲವನ್ನು ಕೆರಳಿಸು ವಂತಿತ್ತು.

## ದಾನದತ್ತಿಗಳ ಕೊಡುಗೆ :

೧. **ಕಟ್ಟಡದ ನಿಧಿಗಾಗಿ :**

| | | |
|---|---|---|
| 1. | ಶ್ರೀ. ಬಿ. ವಿ, ಶ್ರೀಕಂಠರೆಡ್ಡಿ ಬೆಂಗಳೂರು | 100—00 |
| 2. | ಕೆಳದಿ ಗುಂಡಾ ಜೋಯಿಸ್ ಅವರು ಕೆಳದಿ | 101—00 |
| 3. | ಶ್ರೀ. ಎಚ್. ರಾಯಣ್ಣ ಅವರು, ಮೈಸೂರು-9. | 251—00 |

೨. ಶಾಶ್ವತ ನಿಧಿಗೆ :

| | | |
|---|---|---|
| 1. | ಪ್ರೊ. ಅ. ರಾ. ಮಿತ್ರ, ಬೆಂಗಳೂರು. | 100—00 |
| 2. | ಶ್ರೀ. ಎಂ. ಕೃಷ್ಣಯ್ಯ, ಬೆಂಗಳೂರು | 25—00 |

೩. ಟಿ. ಎನ್. ಮಹದೇವಯ್ಯ ದತ್ತಿ ನಿಧಿಗೆ :

| | | |
|---|---|---|
| 1. | ಪ್ರೊ॥ ಎನ್. ಬಸವಾರಾಧ್ಯ, ಬೆಂಗಳೂರು | 850—00 |
| 2. | ಪ್ರೊ॥ ಸುಜನಾ, ಮೈಸೂರು | 500—00 |
| 3. | ಡಾ॥ ವೈ.ಜಿ. ಶೋಭಾದೇವಿ, ಧಾರವಾಡ | 500—00 |
| 4. | ಶ್ರೀ. ಟಿ. ಎನ್. ಮಲ್ಲಿಕಾರ್ಜುನ, ಬೆಂಗಳೂರು | 500—00 |
| 5. | ಶ್ರೀ. ಈಶ್ವರದೇವರು, ಬೆಂಗಳೂರು | 500—00 |
| 6. | ಶ್ರೀ. ಡಿ. ಎಂ. ಚಂದ್ರಶೇಖರ್ (ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು) ಬೆಂಗಳೂರು | 500—00 |

೪. **ಅನುದಾನ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ 95-96ನೇ ಸಾಲಿಗಾಗಿ** ಸಾಹಿತ್ಯೋಪಾಸಕರು ಕಾರ್ಯಕ್ರಮಗಳ ನಿರ್ವಹಣೆಗಾಗಿ 25,000-00 ರೂ. ಗಳನ್ನು ಪ್ರತಿಷ್ಠಾನದ ವಾರ್ಷಿಕ ನಿರ್ವಹಣಾವೆಚ್ಚ 96-97ನೇ ಸಾಲಿಗಾಗಿ 50000 ರೂ.ಗಳನ್ನು, ಈ ಶತಮಾನದ ಹಿರಿಯರು ಒಂದು ಸಂವಾದ : ಕಾರ್ಯಕ್ರಮಕ್ಕೆ 50,000-00 ರೂ.ಗಳನ್ನು ಅನುದಾನವಾಗಿ ನೀಡಿದೆ.

ಶ್ರೀ. ಆರ್. ನರಸಿಂಹಾಚಾರ್ಯರನ್ನು ಕುರಿತ ಗೋಷ್ಠಿಯನ್ನು ನಡೆಸುವ ಸಲುವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ, 3000-00 ರೂ. ಗಳ ಸಹಾಯಧನ ನೀಡಿರುತ್ತದೆ.

೫. ಗ್ರಂಥದಾನ : 1. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ. (ಉದಯಭಾನು ಕಲಾ ಸಂಘದಿಂದ)

2. ಸಂವೇದನೆಗಳು (ಶ್ರೀಮತಿ ಕೆ. ಪೂರ್ಣಿಮಾ ಭಟ್ ಅವರಿಂದ)

3. Introduction to Manuscriptology – R. S. Shivaganesha Murthy (ಕೆ.ಎಸ್. ಶ್ರೀಶ ಅವರಿಂದ)

3. ನಿಜಗುಣ (ನಿಜಗುಣ ಸ್ವಾಮಿಗಳ ಅಮೃತೋತ್ಸವ ಸಂಪುಟ.)

4. ಶತಕತ್ರಯ (ಈ ಎರಡೂ ಕೃತಿಗಳು ನಿಜಗುಣ ಜಂಗಮ ಮಠದಿಂದ) ಸಹಾಯ ಸಹಕಾರ ನಡೆಯಲು ನೀಡಿರುವ ಎಲ್ಲ ಮಹಿಳೆಯರು ಹಾಗೂ ಮಹನೀಯರಿಗೆ ಪ್ರತಿಷ್ಠಾನವು ಕೃತಜ್ಞತೆಯನ್ನು ಅರ್ಪಿಸುತ್ತದೆ.

—o—

# ಅಭಿನಂದನೆ

---

## 1. ಪಂಪ ಪ್ರಶಸ್ತಿ :(೧೯೯೫)

ಭಾರತಕ್ಕೆ ಸ್ವರಾಜ್ಯ ಬಂದು ೪೦ ವರ್ಷ ಸಂದಾಗ ಪ್ರತಿವರ್ಷವೂ ಕನ್ನಡದ ಅತ್ಯುತ್ತಮ ಕೃತಿಯೊಂದಕ್ಕೆ ಪ್ರಶಸ್ತಿ ನೀಡಲು ಕರ್ನಾಟಕ ಸರಕಾರ ನಿರ್ಧರಿಸಿದೆ. ಒಂದು ಲಕ್ಷ ರೂ ಬಹುಮಾನವನ್ನೊಳಗೊಂಡ ಈ ಪ್ರಶಸ್ತಿ ಆದಿ ಕವಿ ಪಂಪನ ಹೆಸರಿನದು. ದಿನಾಂಕ ೯-೮-೧೯೯೬ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿದ್ವಾನ್ ಸೇಡಿಯಾಪು ಕೃಷ್ಣ ಭಟ್ಟರಿಗೆ, ಅವರ "ವಿಚಾರ ಪ್ರಪಂಚ" ಎಂಬ ಕೃತಿಗಾಗಿ ನೀಡಲಾಯಿತು. ದಿವಂಗತ ಸೇಡಿಯಾಪು ಅವರ ಪರವಾಗಿ ಅವರ ಪುತ್ರ ಡಾ|| ಜಯರಾಮಭಟ್ಟರು ಸ್ವೀಕರಿಸಿದರು. ಸೇಡಿಯಾಪು ಕೃಷ್ಣಭಟ್ಟರು ೮-೬-೧೯೦೨ರಲ್ಲಿ ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪಡ್ನೂರು ಗ್ರಾಮದ ಸೇಡಿಯಾಪು ಎಂಬಲ್ಲಿ ಜನಿಸಿದರು. ಸಂತ ಅಲೋಸಿಯಿಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ೧೯೫೩ರಲ್ಲಿ ಸ್ವಯಂ ನಿವೃತ್ತಿಗೊಂಡರು. ಅಧ್ಯಯನ, ಅಧ್ಯಾಪನ, ಸಾಹಿತ್ಯ ರಚನೆಗಳಲ್ಲೇ ಬದುಕನ್ನು ಸವೆಸಿ ೮-೬-೧೯೯೬ ರಲ್ಲಿ ದಿವಂಗತರಾದರು. ಕನ್ನಡ ವ್ಯಾಕರಣ ಮತ್ತು ಛಂದಸ್ಸಿನ ಕ್ಷೇತ್ರಕ್ಕೆ ವಿಶೇಷವಾಗಿ ಕೊಡುಗೆ ನೀಡಿದ್ದಾರೆ. ಸತ್ಯಾನ್ವೇಷಣೆಯ ಉದ್ದೇಶವುಳ್ಳ ಅವರ ತಥ್ಯ ದರ್ಶನ ಇಂಗ್ಲಿಷಿಗೆ ಅನುವಾದಗೊಂಡಿದೆ. ಅವರ ಬೇರೆ ಬೇರೆ ಕೃತಿಗಳಿಗೆ ಆಗಾಗ ಬೇರೆ ಬೇರೆ ಪ್ರಶಸ್ತಿಗಳು ಬಂದಿವೆ. ಅವರು ಏಳು ದಶಕಗಳಲ್ಲಿ ಬರೆದ ಸಾಹಿತ್ಯ, ಭಾಷೆ, ಕಲೆ, ವ್ಯಕ್ತಿ ವಿಷಯಗಳನ್ನು ಕುರಿತು ಸಂಶೋಧಾತ್ಮಕ ವಿದ್ವತ್ ಪ್ರಬಂಧಗಳು ಅವರ "ವಿಚಾರ ಪ್ರಪಂಚ" ದಲ್ಲಿವೆ. ಅವರ ಎಲ್ಲ ಬರಹಗಳೂ ವಿದ್ವಜ್ಜನರ ಮನ್ನಣೆಗಳಿಸಿವೆ.

## ೨. ಕನಕ ಪುರಂದರ ಪ್ರಶಸ್ತಿ :

ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ಸಲ್ಲಿಸಿದ ಪುರಂದರ ದಾಸರು ಮತ್ತು ಕನಕದಾಸರು–ಎಂಬಿಬ್ಬರ ಹೆಸರಿನಲ್ಲಿ ಸರಕಾರದಿಂದಲೇ ಸ್ಥಾಪಿತವಾದ ಪ್ರಶಸ್ತಿಯಿದು. ಒಂದು ಲಕ್ಷರೂ., ಕಂಚಿನ ಪ್ರತಿಮೆ ಮತ್ತು ತಾಮ್ರಪತ್ರವನ್ನೊಳಗೊಂಡಿದೆ. ೧೯೯೬ನೆಯ ವರ್ಷದ ಈ ಪ್ರಶಸ್ತಿಯನ್ನು ಗಮಕ-ಕೀರ್ತನೆ ಕ್ಷೇತ್ರದಲ್ಲಿ ಬಲು ದೊಡ್ಡ ಸೇವೆಯ ಸಾಧನೆ ಮಾಡಿರುವ ಗಮಕ ರತ್ನಾಕರ

ಶ್ರೀ ಎಂ. ರಾಘವೇಂದ್ರರಾಯರಿಗೆ ಪಂಪ ಪ್ರಶಸ್ತಿ ಸಮಾರಂಭ ಸಭೆಯಲ್ಲಿ ನೀಡಲಾಗಿದೆ. ಶ್ರೀ ರಾಘವೇಂದ್ರರಾಯರು ೭-೮-೧೯೧೧ರಲ್ಲಿ ಜನ್ಮ ತಾಳಿ ಗಮಕವನ್ನೂ ಸಾಹಿತ್ಯವನ್ನೂ ಚೆನ್ನಾಗಿ ಅಭ್ಯಾಸ ಮಾಡಿದ ಕವಿ, ಗಮಕಿ, ವಾದಿ, ವಾಗ್ಮಿ ಚತುಷ್ಟಯ ವಿದ್ವತ್ತುಳ್ಳವರು. ಪದ, ಪದ್ಯ, ಕವನ, ಕಾವ್ಯ, ಕೀರ್ತನೆಗಳನ್ನು ರಚಿಸಿರುವರಲ್ಲದೆ ಗಮಕ ಕಲೆಗೆ ಶಾಸ್ತ್ರೀಯತೆಯನ್ನು ಕಾಣಿಸಿರುವ ಕೃತಿಕರ್ತರು. ಕಂದ, ಷಟ್ಪದಿ, ಭಾವಗೀತ, ಭಕ್ತಿಗೀತಗಳನ್ನಲ್ಲದೆ ಯಾಲಪದ ಎಂಬ ಛಂದಸ್ಸಿನಲ್ಲಿ 'ರಾಘಣ್ಣನ ಕಲಿಪದ' ಎಂಬ ಕೃತಿ ರಚನೆ ಮಾಡಿದ್ದಾರೆ. 'ಕಲೆಯ ಕಾಣಿಕೆ'-ಇವರ ಆತ್ಮವೃತ್ತ ಕಥನವಾಗಿದೆ. ಸತ್ಯದೇವ ಚರಿತೆ (ವಾರ್ಧಕ ಷಟ್ಪದಿ), ವೆಂಕಟೇಶ ವಿಜಯ (ಭಾ. ಷ.), ವಾಸುದೇವ ವಿಜಯ (ಸಾಂಗತ್ಯ)—ಇವರ ಕಾವ್ಯರಚನೆಗಳಾಗಿವೆ. ನೂರಾರು ಮಂದಿ ಶಿಷ್ಯ ಶಿಷ್ಯೆಯರಿಗೆ ಗಮಕ ಕಲೆಯನ್ನು ಬೋಧಿಸಿದ ಮತ್ತು ಈ ಕಲೆಯನ್ನು ನಾಡಿನೆಲ್ಲೆಡೆಯೂ ಪ್ರಸಾರ ಮಾಡಿದ ಗಮಕ ಗುರುರಾಯರಿವರು.

### ೩. ಗೊರೂರು ಪ್ರಶಸ್ತಿ

ಹಿರಿಯ ಸಾಹಿತಿ, ಗಾಂಧಿವಾದಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರೂ ಆಗಿದ್ದ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್-ಅವರ ಹೆಸರಿನ ಪ್ರತಿಷ್ಠಾನದ ಮೂಲಕ ಅವರ ನಿರಂತರ ಸ್ಮರಣೆಯ ಸಂಕೇತವಾಗಿ ಕನ್ನಡದ ಶ್ರೇಷ್ಠ ಸಾಹಿತಿಗೆ ಪ್ರತಿ ವರ್ಷವೂ ಗೊರೂರು ಪ್ರಶಸ್ತಿ ನೀಡಲಾಗುತ್ತಿದೆ. ೧೯೯೬ನೆಯ ವರ್ಷದ ಪ್ರಶಸ್ತಿಯನ್ನು ಡಾ|| ಪ್ರಭುಶಂಕರರವರಿಗೆ ದಿನಾಂಕ : ೧-೯-೧೯೯೬ ರಂದು ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ಸನ್ಮಾನ್ಯ ಶಿಕ್ಷಣ ಸಚಿವ ಶ್ರೀ ಎಚ್. ಜಿ. ಗೋವಿಂದೇಗೌಡ ಅವರ ಮೂಲಕ ವಿತರಿಸಲಾಗಿದೆ. ಡಾ|| ಪ್ರಭು ಶಂಕರ-ಅವರು ೧೯೨೯ರಲ್ಲಿ ಜನಿಸಿ, ಕನ್ನಡದಲ್ಲಿ ಎಂ.ಎ., ಪಿ.ಎಚ್.ಡಿ. ಪದವಿ ಪಡೆದು, ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರಲ್ಲದೆ, ಎಕಾಡೆಮಿಯ ಪ್ರಶಸ್ತಿಗಳನ್ನು ಪಡೆದವರು. ಸಂಶೋಧನೆ, ನಾಟಕ, ಜೀವನ ಚರಿತ್ರೆ, ಪ್ರವಾಸ ಕಥನ, ಲಘು ಬರಹ, ವಿಮರ್ಶೆ, ವ್ಯಕ್ತಿ ಚಿತ್ರ, ಅನುವಾದ, ಕಾದಂಬರಿ-ಮುಂತಾದ ವೈವಿಧ್ಯಮಯ ಕೃತಿಗಳನ್ನು ರಚಿಸಿ, ಖ್ಯಾತರಾಗಿದ್ದಾರೆ. ಈ ಪ್ರಶಸ್ತಿ ರೂ. ಹತ್ತು ಸಾವಿರ, ಸ್ಮರಣ ಫಲಕಗಳನ್ನು ಒಳಗೊಂಡಿದೆ.

### ೪. ಪೊಳಲಿ ಪ್ರಶಸ್ತಿ

ತುಳುಸಾಹಿತ್ಯಕ್ಕೆ ವಿಶೇಷವಾದ ಸೇವೆ ಸಲ್ಲಿಸಿರುವ ದಿವಂಗತ ಎಸ್. ವಿ. ಶೀನಪ್ಪ ಹೆಗ್ಡೆ, ಪೊಳಲಿ-ಅವರ ಹೆಸರಿನ ಪ್ರಶಸ್ತಿಯಿದು. ಈ ವರ್ಷ ಈ ಪ್ರಶಸ್ತಿಯನ್ನು ಉಡುಪಿಯ ಡಾ|| ಸುಶೀಲಾ ಉಪಾಧ್ಯಾಯ-ಅವರಿಗೆ ಕೊಡಲಾಗಿದೆ. ಬಹು ಭಾಷಾ ಪಾಂಡಿತ್ಯವುಳ್ಳ, ಸಂಶೋಧನೆ ವಿಮರ್ಶೆಗಳಲ್ಲಿ ಪ್ರಾವೀಣ್ಯವುಳ್ಳ ಡಾ|| ಸುಶೀಲಾ

ಅವರು ತುಳುನಾಡಿನ ಜಾನಪದ ಸಾಹಿತ್ಯ-ಕಲೆಗಳ ವಿಷಯದಲ್ಲಿ, ಸಂಗೀತ ವಿಷಯದಲ್ಲಿ, ತುಳು ಪಾರ್ದನಗಳ ವಿಷಯದಲ್ಲಿ ತುಂಬಾ ಪರಿಣತಿಯಾಗಿದ್ದಾರೆ. ಈ ಪ್ರಶಸ್ತಿಯನ್ನು ೨-೧೧-೧೯೯೬ರಂದು ಎಂ.ಜಿ.ಎಂ. ಕಾಲೇಜಿನಲ್ಲಿ ತುಳು ದಿನಾಚರಣೆಯ ಸಂದರ್ಭದಲ್ಲಿ ವಿತರಿಸಲಾಗಿದೆ.

೫. ದಿನಕರ ಪ್ರಶಸ್ತಿ

ಅಂಕೋಲೆಯ ಡಾ|| ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದಿಂದ ವಿತರಿಸಲಾಗುವ ಈ ಪ್ರಶಸ್ತಿಯನ್ನು ಹೆಸರಾಂತ ಕವಿಗಳಲ್ಲೊಬ್ಬರಾದ ಶ್ರೀ ಜಿ.ಎಸ್. ಅವಧಾನಿ-ಅವರಿಗೆ ನೀಡಲಾಗಿದೆ. ಅವರು ರಚಿಸಿರುವ "ಗಂಗೋತ್ರಿಯ ಹಕ್ಕಿಗಳು" ಎಂಬ ಕವನ ಸಂಕಲನಕ್ಕಾಗಿ ಈ ಪ್ರಶಸ್ತಿ ಲಭಿಸಿದೆ. ೧೯೯೪-೯೫ನೆಯ ವರ್ಷಗಳಲ್ಲಿ ಪ್ರಥಮ ಆವೃತ್ತಿಯಾಗಿ ಹೊರ ಬಂದ ಕನ್ನಡ ಕವನ ಸಂಕಲನಗಳಲ್ಲಿ ಇದನ್ನು ಆಯ್ಕೆ ಮಾಡಿ, ೧೯೯೬ನೆಯ ವರ್ಷದ ಪ್ರಶಸ್ತಿಯನ್ನಾಗಿ ಪರಿಗಣಿಸಲಾಗಿದೆ.

೬. ಸರ್. ಎಂ. ವಿ. ಪ್ರಶಸ್ತಿ

ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್, ಆಯ್ಕೆ ಮಾಡಿದ ಸಾಹಿತ್ಯಕ್ಕೆ ೧೯೯೫-೯೬ನೇ ವರ್ಷದ ಪ್ರಶಸ್ತಿಯನ್ನೂ, ವೈವಿಧ್ಯಮಯ ಸೇವೆ ಸಲ್ಲಿಸುತ್ತಿರುವ ರಾಜ್ಯದ ಒಂಬತ್ತು ಮಂದಿಗೆ ೧೯೯೫-೯೬ ನೆಯ ವರ್ಷದ ಪುರಸ್ಕಾರಗಳನ್ನೂ ನೀಡಿರುತ್ತದೆ. ಸಾಹಿತ್ಯ ಪ್ರಶಸ್ತಿ ಪಾತ್ರರಾದ ಲೇಖಕರು ಮತ್ತು ಅವರ ಕೃತಿಗಳ ಹೆಸರುಗಳಿವು—ಶ್ರೀ ಅಮರೇಶ್ ನುಗಡೋಣಿಯವರ 'ಮಣ್ಣು ಸೇರಿತು ಬೀಜ', ತುಳಸೀ ವೇಣುಗೋಪಾಲರ "ಮುಂಜಾವಿಗೆ ಕಾದವಳು", ಶಾಂತಾರಾಮ ಸೋಮಯಾಜಿಯವರ "ಮಣ್ಣಿನ ಬಳೆ"- ಎಂಬ ಕಥಾಸಂಕಲನಗಳು—ಇವು ೧೯೯೫ನೆಯ ವರ್ಷದ ಪ್ರಕಟನೆಗಳು ೧೯೯೬ ನೆಯ ವರ್ಷದವು—ಜಯಪ್ರಕಾಶ ಮಾವಿನಕುಳಿಯವರ "ಮುಖಗಳು", ಮೊಗಳ್ಳಿ ಗಣೇಶ್ ಎಂಬವರ "ಬುಗುರಿ"—ಇವು ಕೂಡ ಕಥಾ ಸಂಕಲನಗಳಾಗಿವೆ. ಸಾಹಿತ್ಯ ಪ್ರಶಸ್ತಿ ರೂ. ೧೫೦೦, ನೆನಪಿನ ಕಾಣಿಕೆ, ಬೆಳ್ಳಿ ಪದಕ, ಪ್ರಶಸ್ತಿ ಪತ್ರಗಳನ್ನು ಒಳಗೊಂಡಿದೆ.

೭. ಸಾವಿತ್ರಮ್ಮ ದೇ. ಜ.ಗೌ. ಪ್ರಶಸ್ತಿ ಮತ್ತು ರನ್ನ ಕವಿ ಪ್ರಶಸ್ತಿ

೧೯೯೬ನೆಯ ವರ್ಷದ ಇವೆರಡೂ ಪ್ರಶಸ್ತಿಗಳು ಖ್ಯಾತ ಸಾಹಿತಿ, ಲೇಖಕಿ ಹಾಗೂ ವಿಚಾರವಾದಿಯಾಗಿರುವ ಡಾ|| ಕಮಲಾ ಹಂಪನಾ ಇವರಿಗೆ ಪ್ರಾಪ್ತವಾಗಿವೆ. ದಿನಾಂಕ ೭-೯-೧೯೯೬ ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ

ಪರಿಷನ್ಮಂದಿರದಲ್ಲಿ ಇವರಿಗೆ ಪ್ರಶಸ್ತಿ ಬಂದುದರ ಉಪಲಕ್ಷ್ಯವಾಗಿ ಅಭಿನಂದನ ಸಮಾರಂಭವೂ ಜರಗಿದೆ.

### ೮. ಕಾದಂಬರಿ ಶ್ರೀ ಪ್ರಶಸ್ತಿ

ದಿ|| ಅ.ನ.ಕೃ. ಪ್ರಶಸ್ತಿ ಪ್ರದಾನ ಪರಿಷತ್ತು ೨೪–೧೧–೧೯೯೬ರಂದು 'ಕುಜ' ಎಂಬ ಕಾದಂಬರಿಯ ಲೇಖಕರಾದ ಶ್ರೀ ಜಿ. ಕೆ. ಐತಾಳ–ಅವರಿಗೆ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ "ಕಾದಂಬರಿ ಶ್ರೀ" ಪ್ರಶಸ್ತಿ ಪ್ರದಾನವನ್ನು ಮಾಡಿದೆ. ಕನ್ನಡದಲ್ಲಿ ಉತ್ತಮ ಕಾದಂಬರಿಗಳು ಬರುತ್ತವೆ ಎಂಬುದಕ್ಕೆ ಈ ಕಾದಂಬರಿಯೇ ಸಾಕ್ಷಿ ಎನ್ನಲಾಗಿದೆ. ಪ್ರತಿ ವರ್ಷವೂ ನೀಡಲಾಗುವ ಪ್ರಶಸ್ತಿಯಿದು.

### ೯. ಮಾಳವಾಡ ಪ್ರಶಸ್ತಿ :

೧೯೯೫ನೆಯ ವರ್ಷದ ಪ್ರೊ|| ಸ. ಸ. ಮಾಳವಾಡ ಪ್ರಶಸ್ತಿಗೆ ಕನ್ನಡದಲ್ಲಿ ಖ್ಯಾತ ವಿಮರ್ಶಕರೂ ಅಂಕಣ ಬರಹಗಾರರೂ ವಿಚಾರವೇತ್ತರೂ ಗುಲ್ಬರ್ಗ ವಿಶ್ವವಿದ್ಯಾಲಯದ ನಿವೃತ್ತ ಉಪಕುಲಪತಿಯೂ ಆದ ಡಾ|| ಹಾ. ಮಾ. ನಾಯಕ ಅವರು ಪಾತ್ರರಾಗಿದ್ದಾರೆ. ಅವರ "ಅರವತ್ತರ ಅರಲು" ಎಂಬ ಅಂಕಣ ಬರಹಗಳ ಸಂಕಲನಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿಯ ಆಯ್ಕೆ ಸಮಿತಿ ಡಾ|| ನಾಯಕರನ್ನು ಸರ್ವಾನುಮತದಿಂದ ಮಾನ್ಯ ಮಾಡಿದುದಾಗಿ ಕರ್ನಾಟಕ ವಿಶ್ವವಿದ್ಯಾಲಯದ ಅಧ್ಯಯನ ಪೀಠದ ಅಧ್ಯಕ್ಷ ಡಾ|| ಎಂ. ಬಿ. ನೇಗಿಲ ಹಾಳರು ತಿಳಿಸಿರುತ್ತಾರೆ.

### ೧೦. ೧೯೯೬ರ ಪಂಪ ಪ್ರಶಸ್ತಿ

ಕರ್ನಾಟಕ ರಾಜ್ಯದ ಅತ್ಯುನ್ನತ ಸಾಹಿತ್ಯ ಗೌರವವೆನಿಸಿದ ಪಂಪ ಪ್ರಶಸ್ತಿಯನ್ನು ಕನ್ನಡದ ಹಿರಿಯ ಕವಿ ಶ್ರೀ ಕೆ. ಎಸ್. ನರಸಿಂಹ ಸ್ವಾಮಿಯವರಿಗೆ ಸಲ್ಲಿಸಲಾಗಿದೆ. ಅವರ ಇತ್ತೀಚಿನ ಕೃತಿಯಾದ 'ದುಂಡು ಮಲ್ಲಿಗೆ' ಎಂಬ ಸಂಕಲನಕ್ಕೆ ಸಂದ ಪ್ರಶಸ್ತಿಯಿದು. ೧೯೧೫ರಲ್ಲಿ ಮಂಡ್ಯ ಜಿಲ್ಲೆಯ ಕಾವೇರಿಯಲ್ಲಿ ಜನಿಸಿದ ಇವರ 'ಮೈಸೂರು ಮಲ್ಲಿಗೆ' ಎಂಬ ಕವನ ಸಂಕಲನ ಅತ್ಯಂತ ಜನಪ್ರಿಯವಾದುದು. ಹಲವಾರು ಆವೃತ್ತಿಗಳನ್ನು ಕಂಡುದಾಗಿದೆ. ಇವರ 'ತೆರೆದ ಬಾಗಿಲು' ಎಂಬ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದ್ದಿತು. ಹಲವಾರು ಪ್ರತಿಷ್ಠಿತ ಪ್ರಶಸ್ತಿ ಪಾತ್ರರಾದ ಜನಪ್ರಿಯ ಕವಿಯಾಗಿರುವ ಇವರು ೧೯೯೦ರಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಒಂದು ಲಕ್ಷ ರೂ. ಮೌಲ್ಯದ ಈ ಪಂಪ ಪ್ರಶಸ್ತಿಯನ್ನು ಪಂಪ ಮಹಾಕವಿ ಬಾಳಿ ಬದುಕಿದ ಬನವಾಸಿಯಲ್ಲಿ ವಿತರಿಸಲಾಯಿತು.

## ೧೧. ಉಗ್ರಾಣ ಪ್ರಶಸ್ತಿ

ಗೌರಿ-ಮಾಧವ ಚಾರಿಟೇಬಲ್ ಟ್ರಸ್ಟ್, ಪುತ್ತೂರು-ಇವರ "ಉಗ್ರಾಣ ಪ್ರಶಸ್ತಿ" ಎಂಬ ಸಾಹಿತ್ಯ ಪ್ರಶಸ್ತಿಯನ್ನು ಕರ್ನಾಟಕ ಸಂಘ, ಪುತ್ತೂರು-ಇವರ ಆಶ್ರಯದಲ್ಲಿ ದಿನಾಂಕ ೧೫-೧೨-೧೯೯೬ರಂದು ಡಾ|| ನಾ. ಮೊಗಸಾಲೆ-ಅವರಿಗೆ ವಿತರಿಸಲಾಯಿತು. ಲೇಖಕರ ವಿಜೇತ ಕೃತಿಯ ಹೆಸರು-"ಸ್ವಂತಕ್ಕೆ ಸ್ವಂತಾವತಾರ". ನವೋದಯ ಸಾಹಿತ್ಯ, ಮಕ್ಕಳ ಸಾಹಿತ್ಯ, ಪಠ್ಯ ಪುಸ್ತಕ ಸಾಹಿತ್ಯ ರಚನೆಗಳಿಗೆ ಹೆಸರಾದ ಉಗ್ರಾಣ ಮಂಗೇಶರಾಯರು (೧೮೯೩-೧೯೭೩) ವಿಶೇಷ ಕಾವ್ಯಜ್ಞಾನವುಳ್ಳ ಅಧ್ಯಾಪಕರಾಗಿದ್ದವರು. ಅವರ ನೆನಪಿನ ಈ ಪ್ರಶಸ್ತಿಯನ್ನು ಪಡೆದ ನಾ. ಮೊಗಸಾಲೆ-ಅವರು ವೈದ್ಯ ವೃತ್ತಿಯಲ್ಲಿದ್ದುಕೊಂಡೇ ಹಲವು ಕವನ, ಕಥಾ ಸಂಕಲನ, ಕಾದಂಬರಿ, ಗೀತ ನಾಟಕಾದಿಗಳನ್ನು ರಚಿಸಿದ್ದಾರೆ. ಇವರು ವರ್ಧಮಾನ ಪ್ರಶಸ್ತಿ ಪೀಠದ ಪ್ರಧಾನ ನಿರ್ದೇಶಕರು. ೧೯೪೪ರಲ್ಲಿ ಜನಿಸಿದವರು. ಮೊಗಸಾಲೆ ಇವರ ಜನ್ಮಸ್ಥಳ. ನಾರಾಯಣ ಭಟ್ಟ-ಅಂಕಿತನಾಮ.

ಈ ಎಲ್ಲ ಪ್ರಶಸ್ತಿ ವಿಜೇತರಿಗೂ ಬಿ. ಎಂ. ಶ್ರೀ ಪ್ರತಿಷ್ಠಾನದ ಹಾಗೂ ಕರ್ನಾಟಕಲೋಚನದ ಹಾರ್ದಿಕ ಶುಭಾಶಯಗಳು.

—o—

# ಶ್ರದ್ಧಾಂಜಲಿ

---

ಡಾ|| ಜ. ಚ. ನಿ ಎಂಬ ಅಕ್ಷರಗಳಲ್ಲಿ ಖ್ಯಾತನಾಮರಾದ ಶ್ರೀ ಜಗದ್ಗುರು ಚೆನ್ನ ಬಸವರಾಜ ದೇಶಿಕೇಂದ್ರ ಶಿವಾಚಾರ್ಯ ನಿಡುಮಾಮಿಡಿ ಮಹಾಸ್ವಾಮಿಗಳು ೫-೧೧-೧೯೯೬ ರಂದು ಬೆಂಗಳೂರಿನಲ್ಲಿ ಶಿವೈಕ್ಯರಾದರು. ಅವರಿಗೆ ೮೮ ವರ್ಷ ವಯಸ್ಸಾಗಿದ್ದಿತು. ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಕ್ಷೇತ್ರಕ್ಕೆ ಅವರಿಂದಾದ ಸೇವೆ ಅಪಾರ. ಕಾವ್ಯ, ಮೀಮಾಂಸೆ, ಲಕ್ಷಣ ಗ್ರಂಥ, ನಾಟಕ, ಜೀವನಚಿತ್ರ, ಜಾನಪದ, ಜೀವನ ಸಿದ್ಧಾಂತ, ತತ್ತ್ವ, ಸಂಶೋಧನೆ, ವಿಮರ್ಶೆ, ಪಡೆ ನುಡಿ, ಸೀಳ್ನುಡಿ, ಸಂವಾದ ಸಾಹಿತ್ಯ, ಪ್ರವಾಸ ಸಾಹಿತ್ಯಾದಿ ರೂಪಗಳ ಅವರ ರಚನೆಗಳು ೩೫೦ಕ್ಕೂ ಮಿಕ್ಕಿವೆ. ೧೫ ಕೃತಿಗಳಲ್ಲಿ ಎಂಟು ಸಾವಿರಕ್ಕೂ ಹೆಚ್ಚಾದ ವಚನ ರಚನೆ ; ೧೮ ಸಂಕಲನಗಳಲ್ಲಿ ಒಂದು ಸಾವಿರ ಕವನಗಳು ; ಐದಾರು ಮಹಾಕಾವ್ಯಗಳು, ಕಾವ್ಯಮೀಮಾಂಸೆ ಹಾಗೂ ಲಕ್ಷಣ ಗ್ರಂಥಗಳು ಹನ್ನೊಂದು ; ಸಂಶೋಧನ ಗ್ರಂಥಗಳು ಹದಿನಾರು ; ಚಾರಿತ್ರಿಕ ಕೃತಿಗಳು ೧೮ ; ವಿಮರ್ಶ ಕೃತಿಗಳು ೩೬ ; ಸಮೀಕ್ಷಾ ಕೃತಿಗಳು ೧೨ ; ತಾತ್ವಿಕ ಗ್ರಂಥಗಳು ೬೦ ; ಧಾರ್ಮಿಕ ಹಾಗೂ ದಾರ್ಶನಿಕ ಕೃತಿಗಳು ನೂರಕ್ಕೂ ಹೆಚ್ಚು. ೧೯೮೦ ರಿಂದ ತಮ್ಮ ಶ್ರೀ ಪೀಠದಿಂದ 'ಮಾಮಿಡಿ' ಎಂಬ ತ್ರೈಮಾಸಿಕದ ಪ್ರಕಾಶನ—ಹೀಗೆ ವಿವರಿಸಿದಷ್ಟು ಮುಗಿಯದ ಸಾಹಿತ್ಯ ಸೇವೆ ಶ್ರೀಗಳದು.

—o—

## ಈ ಸಂಚಿಕೆಯ ಲೇಖಕರು

1. ಟಿ. ಕೇಶವ ಭಟ್ಟ
   754, 15ನೇ ಮೈನ್, 2ನೇ ಹಂತ,
   ಬನಶಂಕರಿ, ಬೆಂಗಳೂರು-70

2. ಸವೋತನಹಳ್ಳಿ ರಾಮರಾಯ
   ಕೋಟಿಮನೆ, 518, 4ನೇದೊಡ್ಡಬೀದಿ
   ಗೋಕುಲ 3ನೇಹಂತ, ಮೈಸೂರು

3. ವಿದ್ವಾನ್, ತಲೆಂಗಳ ರಾಮಕೃಷ್ಣಭಟ್ಟ
   ಅಂಚೆ ಬಾಯಾರು, 671348
   ವಯಾ-ಪೈವಳಿಕೆ, ಕಾಸಂಗೋಡು ಜಿಲ್ಲೆ.

4. ಟಿ. ಕೃಷ್ಣಭಟ್ಟ, ವಿದ್ವಾನ್
   ಪಂಜಳೆ ಮನೆ. ಉಪ್ಪಿನಂಗಡಿ
   ದಕ್ಷಿಣ ಕನ್ನಡ - 574 241

5. ಅ. ರಾ. ಮಿತ್ರ
   ನಂ. 51, ಮಂಜುನಾಥ ನಿಲಯ
   8ನೇ ಕಾಸ್ರ್, ಮಹಾಲಕ್ಷ್ಮೀ ಲೇಔಟ್,
   ಫರ್ದರ್ ಎಕ್ಸ್‌ಟೆನ್ಷನ್, ಬೆಂಗಳೂರು-88

6. ಕೆ. ಪಿ. ರಾಜಗೋಪಾಲ್
   754. 15 ಮುಖ್ಯರಸ್ತೆ,
   ಬಿ. ಎಸ್. ಕೆ. ೨ನೇ ಹಂತ, ಬೆಂಗಳೂರು-70.

7. ಬಿ. ಎಸ್. ಸಣ್ಣಯ್ಯ
   33/1, 8ನೇ ಅಡ್ಡರಸ್ತೆ,
   ಜಯಲಕ್ಷ್ಮಿಪುರಂ, ಮೈಸೂರು

8. ಡಾ|| ಕೆಳದಿ ವೆಂಕಟೇಶ ಜೋಯಿಸ್
ಕೆಳದಿ ಅಂಚೆ, ಸಾಗರ ತಾ|| ಶಿವಮೊಗ್ಗ ಜಿಲ್ಲೆ

9. ಡಾ. ಪಿ. ವಿ. ನಾರಾಯಣ್
ಪ್ರಾಧ್ಯಾಪಕರು, ವಿಜಯ ಕಾಲೇಜು ಬೆಂಗಳೂರು

10. ಕೆಳದಿ ಗುಂಡಾ ಜೋಯಿಸ್
ನಿವೃತ್ತ ಗೌರವ ನಿರ್ದೇಶಕರು, ಕೆಳದಿ ಮ್ಯೂಸಿಯಂ,
ಕೆಳದಿ ಅಂಚೆ, ಸಾಗರ ತಾ||, ಶಿವಮೊಗ್ಗ ಜಿಲ್ಲೆ

11. ಸಿ. ನಟರಾಜ್
1430/4, 8ನೆಯ ಅಡ್ಡರಸ್ತೆ,
ಇರ್ವಿನ್ ರಸ್ತೆ, ಮೈಸೂರು-1

12. ಉಪ್ಪಂಗಳ ರಾಮಭಟ್
ಮುಖ್ಯಸ್ಥರು, ಕನ್ನಡ ವಿಭಾಗ ಎಂ.ಜಿ.ಎಂ. ಕಾಲೇಜು,
ಉಡುಪಿ-576192

13. ವಾಲ್ಮೀಕಿ ಶ್ರೀನಿವಾಸ್ ಅಯ್ಯಂಗಾರ್
ರಾಮೇಶ್ವರ ತೋಟ, ಅಗ್ನಿಗ್ರಾಮ, ಹಾಸು ಬೀಳು,
ಸಕಲೇಶ್ವರಪುರ, ತಾ|| ಹಾಸನ ಜಿಲ್ಲೆ

14. ಎಂ. ಜಿ. ನಾರಿ
ಬಾಣದಾರ ಓಣಿ, ಬಾದಾಮಿ 587201

## ಪ್ರತಿಷ್ಠಾನದ ಗೌರವ ಸದಸ್ಯರು

1) ಪ್ರೊ|| ಎ. ಎನ್. ಮೂರ್ತಿರಾವ್. 2) ಡಾ|| ಪು.ತಿ.ನ. 3) ಪ್ರೊ|| ಎಸ್. ವಿ. ಪರಮೇಶ್ವರಭಟ್ಟ. 4) ಪ್ರೊ|| ತ. ಸು. ಶಾಮರಾವ್ 5) ಡಾ|| ಜಿ. ಎಸ್. ದೀಕ್ಷಿತ್ 6) ವಿದ್ವಾನ್ ಎನ್. ರಂಗನಾಥ ಶರ್ಮ 7) ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ 8) ಡಾ|| ಆರ್. ಸಿ. ಹಿರೇಮಠ್.

## ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

## ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ, ಮೈಸೂರು 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು. 4) ಮಿಥಿಕ್ ಸೊಸೈಟಿ ಜರ್ನಲ್, 5) ಬಸವ ಪಥ, ಬೆಂಗಳೂರು. ಶಂಕರ ಭಾಸ್ಕರ, ಬೆಂಗಳೂರು. 7) ಧರ್ಮಪ್ರಭ, ಬೆಂಗಳೂರು 8) ಜಾನಪದ ಜಗತ್ತು, ಬೆಂಗಳೂರು. 9) ಅನ್ವೇಷಣೆ, ಬೆಂಗಳೂರು. 10) ಅಪರಂಜಿ, ಬೆಂಗಳೂರು 11) ಕರ್ನಾಟಕ ಭಾರತಿ, ಧಾರವಾಡ. 12 ಸುಗುಣಮಾಲಾ, ಉಡುಪಿ. 13) ಸತ್ಯಶುದ್ಧ ಕಾಯಕ, ಸಿರಿಗೆರೆ, 14) ತರಳಬಾಳು, ಸಿರಿಗೆರೆ. 15) ಅಭಿಮತ, ದೆಹಲಿ.

### ಕರ್ನಾಟಕ ಲೋಚನ ಚಂದಾ ವಿವರ

| | | |
|---|---|---|
| ವಾರ್ಷಿಕ ಚಂದಾ | : | ವ್ಯಕ್ತಿಗಳಿಗೆ ರೂ. 15-00<br>ಗ್ರಂಥಾಲಯ, ಸಂಘ ಸಂಸ್ಥೆಗಳಿಗೆ ರೂ. 25-00<br>ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ. |
| ಆಜೀವ | ; | ರೂ, 150-00 |
| ಪ್ರತಿಷ್ಠಾನದ ಸದಸ್ಯತ್ವ | | ವಾರ್ಷಿಕ ರೂ. 25-00 ಆಜೀವ ರೂ. 250-00<br>ಬಿಡಿ ಪ್ರತಿ ರೂ. 10.00 |

KARNATAKA LOCHANA Half Yearly Journal, Published by B. M. Sri. Smaraka Prathishthana, 54, M. V. Seetharamaiah Road, Masthi Nagara, (Gavipuram Extension), Bangalore-19
Printed by : Prabhu Mudrana, Shakambari Nagar, Sarakki, Bangalore-560 078. Phone : 6640976

Reg. No. 03260/23/2/ALTC/88 KARNATAKA LOCHANA

# ಪ್ರತಿಷ್ಠಾನದ ಈಚಿನ ಪ್ರಕಟಣೆಗಳು

| | | ಉತ್ತಮ | ಸಾದಾ |
|---|---|---|---|
| 1. | ಸಂಗಮರ ಕಾಲದ ವಿಜಯನಗರ | | 75-00 |
| 2. | ಕುಮಾರವ್ಯಾಸ ಭಾರತ ಸಂಗ್ರಹ | 75-00 | 40-00 |
| 3. | ಕಾವ್ಯ-ಇತಿಹಾಸ (ದತ್ತಿ ಉಪನ್ಯಾಸಗಳು) | | 10-00 |
| 4. | ಶಂಬಾ ಕೃತಿ ಸಮೀಕ್ಷೆ | | 35-00 |
| 5. | ಎಂ. ವಿ. ಸೀ. ಸಂಸ್ಮರಣೆ | | 25-00 |
| 6. | ವೈಚಾರಿಕ ಜಾಗೃತಿ | | 15-00 |
| 7. | ಹಸ್ತಪ್ರತಿಶಾಸ್ತ್ರ ಪರಿಚಯ | | 20-00 |
| 8. | ಸಂವಿಧಾನ ಮತ್ತು ಕಾನೂನು | | 25-00 |
| 9. | ಮಾಸ್ತಿ ಕಥಾ ಸಮೀಕ್ಷೆ | | 20-00 |
| 10. | ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರೆ) | | 15-00 |
| 11. | ಬಸವಪ್ಪ ಶಾಸ್ತ್ರಿಗಳು | | 25-00 |
| 12. | ನವ್ಯಸ್ಫೂರ್ತಿ (ಗೋಕಾಕ್ ಸಾಹಿತ್ಯ ಸಮೀಕ್ಷೆ) | | 35-00 |
| 13. | ಕದಂಬ (ಎಂ.ವಿ.ಸೀ. ಸಮಗ್ರ ಸಾಹಿತ್ಯ-1. ಸಮಗ್ರ ಸಂಶೋಧನ ಲೇಖನಗಳು) | 100-00 | 80-00 |
| 14. | ಕವಿರಾಜಮಾರ್ಗ (ಎಂ.ವಿ.ಸೀ. ಸಮಗ್ರ ಸಾಹಿತ್ಯ-2) | 100-00 | 80-00 |
| 15. | ಕವಿರಾಜಮಾರ್ಗ ವಿಮರ್ಶೆ (ಸಮಗ್ರ ಸಾಹಿತ್ಯ- 3 ಕವಿರಾಜಮಾರ್ಗವನ್ನು ಕುರಿತ ಲೇಖನಗಳು) | | |
| 16. | ಪದ್ಮಿನಿ ಕಲ್ಯಾಣ | | 15-00 |
| 17. | ಬೇಟೆರಾಯ ದೀಕ್ಷಿತರ ದೇವರನಾಮಗಳು ಮತ್ತು ಸಂಪ್ರದಾಯದ ಹಾಡುಗಳು | | 25-00 |

## ಸಿದ್ಧತೆಯಲ್ಲಿ

1. ತೌಲನಿಕ ಸಾಹಿತ್ಯ (ಅಚ್ಚಿನಲ್ಲಿ)
2. ತಿರುಕ್ಕುರುಳ್ (ಕನ್ನಡಾನುವಾದ)